ಸಂಕಥನ

ಕನ್ನಡ ಸಾಹಿತ್ಯ ಸಾಂಸ್ಕೃತಿಕ ಪತ್ರಿಕೆ

ಸಂಚಿಕೆ ೭೬





ಸಂಚಯ

ಕನ್ನಡ ಸಾಹಿತ್ಯ, ಸಾಂಸ್ಕೃತಿಕ ಪತ್ರಿಕೆ

ತ್ರೈಮಾಸಿಕ

ಸಂಪುಟ : ೧೬

ಸಂಚಿಕೆ : ೩(೭೬)

ಫೆಬ್ರವರಿ ೨೦೦೮

ಸಂಪಾದಕ

ಡಿ.ವಿ. ಪ್ರಹ್ಲಾದ್

ಚಂದಾವಿವರ

ವಾರ್ಷಿಕ ಚಂದಾ : ರೂ. ೧೫೦/-

ಎರಡು ವರ್ಷಕ್ಕೆ : ರೂ. ೩೦೦/-

ಐದು ವರ್ಷಕ್ಕೆ : ರೂ. ೬೫೦/-

ಸಂಪರ್ಕ ವಿಳಾಸ

ನಂ. ೧೦೦, ೨ನೇ ಮುಖ್ಯರಸ್ತೆ
೬ನೇ ಬ್ಲಾಕ್, ೩ನೇ ಹಂತ
೩ನೇ ಘಟ್ಟ, ಬನಶಂಕರಿ
ಬೆಂಗಳೂರು - ೫೬೦ ೦೮೫
ಫೋನ್ ನಂ. ೦೮೦-೨೬೭೪೧೯೨೫
ಮೊಬೈಲ್ : ೯೮೪೪೪೦ ೬೩೫೧೪

e-mail :
prahlad118@yahoo.com

ಮುಖಪುಟ ಹಾಗೂ ಒಳಪುಟಗಳ ಚಿತ್ರಗಳು
ರಘುರಾಯ್, ನಿಧಿ ಪಿ.
ಫೋಟೋ ಕೃಪೆ : ಕ್ರೈ ಸ್ಮರಣಿಕೆ


ತೊಗಲ ನಾಲಗೆ ನಿಜವ ನುಡಿಯಲೆಳೆಸಿದರೆ ತಾ-
ನಂಗೈಲಿ ಪ್ರಾಣಗಳ ಹಿಡಿಯಬೇಕು;
ಇಲ್ಲದಿರೆ ನೀರಿನೊಲು ತಣ್ಣಗಿದ್ದವನದನು
ಉರಿಯ ನಾಲಗೆಯಿಂದ ನುಡಿಯಬೇಕು.

— *ಬೇಂದ್ರೆ*



ಚಿತ್ರ : ನಿಧಿ

ಈ ಸಂಚಿಕೆಯಲ್ಲಿ...



ಹೊಳೆದದ್ದು ತಾರೆ ಉಳಿದದ್ದು ಆಕಾಶ

ಪ್ರಿಯ ಓದುಗರೆ,

ಇತ್ತೀಚಿನ ನನ್ನ ಬೆಳಗುಗಳನ್ನ ತೀವ್ರವಾದ ಭಾವುಕತೆ, ಯಾವುದೋ ಲೋಕಕ್ಕೆ ಹೋಗಿದ್ದು ಬಂದಂಥಾ ದಣಿವು ಆವರಿಸಿಕೊಳ್ಳುತ್ತಿದೆ. ಕಿಟಕಿಯಾಚೆಯ ದಟ್ಟ ಕತ್ತಲ ಲೋಕದಿಂದ ಅನೇಕ ಕಥನಗಳು ಬೆಳಕುಗೊಂಡು ಆವರಿಸಿ ಇಡೀ ದಿನದ ಮನಃಸ್ಥಿತಿಯನ್ನು ಭಾವುಕತೆಯನ್ನು ರೂಪಿಸುತ್ತಿವೆ. ಸು.ರಂ. ಎಕ್ಕುಂಡಿಯವರ ಕವಿತೆಗಳ ಲೋಕವೇ ಅಂಥಾದ್ದು. ಕತೆ-ಕಾವ್ಯ-ಕಥನ-ನಾದಮಯತೆ ಎಲ್ಲವನ್ನೂ ಒಳಗೊಂಡಂಥದ್ದು. ಇಂಥಾ ಪುಸ್ತಕದ ಕರಡು ತಿದ್ದುವುದು ನಿಜಕ್ಕೂ ಕಷ್ಟ. ಯಾವ ಸಾಲಿನಿಂದ ಒಳಹೊಕ್ಕರೂ ಆವರಿಸಿಕೊಂಡುಬಿಡುವ ಕಾವ್ಯದ ಮಾಂತ್ರಿಕತೆಯಿಂದ ಬಿಡಿಸಿಕೊಂಡು ಪದ ಅಕ್ಷರಗಳ ಮೇಲೆ ಮಾತ್ರ ಕಣ್ಣಿಟ್ಟು; ಅರ್ಥಾತ್ ಕವಿತೆಯ ಹೊರಗೆ ನಿಂತು ಪ್ರೂಫ್ ತಿದ್ದುವುದು ಶ್ರಮದಾಯಕ. 'ಸಂಪಾತಿ'ಯೆಂಬ ಪಕ್ಷಿಯ ಸೋದರ ಪ್ರೀತಿ, ದೈನಿಕದ ಭಾಗವಾಗಿದ್ದೂ ಎಂದೋ ಒಮ್ಮೆಗೆ ತನ್ನ ನವಿರಾದ ಇರುವನ್ನು ಪ್ರಕಟಗೊಳಿಸುವ 'ಬಕುಲದ ಹೂವುಗಳು', ಕಾಳಿದಾಸನಲ್ಲಿಗೆ ಬಂದು ಮೋಡಗಳಿಗೆ ತಮಗೂ ಎರಡು ಹನಿ ಸುರಿಸಲು ಬಿನ್ನವಿಸುವ 'ಇಬ್ಬರು ರೈತರು', ಚಿಂದಿ, ಉಟ್ಟುಕೊಂಡ ಎಲ್ಲೋ ಕಣ್ಣು ನೆಟ್ಟ 'ಮತ್ಸ್ಯಗಂಧಿಯರು', ಕೇವಲ ಹನ್ನೆರಡು ಸಾಲಿನ 'ಮೀನಾಕ್ಷಿಗೆ ಸಮಯವಿಲ್ಲ' ಎಂಬ ಪುಟ್ಟ ಕವಿತೆಯಿಂದ ಹಿಡಿದು 'ಕವಷಐಲೂಷ'ದಂಥ ಇಪ್ಪತ್ತು ಪುಟಗಳ ವೇದಕಾಲದ ಘಟನೆಯೊಂದರ ಛಂದೋಬದ್ಧ ಭಾವುಕ ಕಥಾನಕದ ತನಕ ಅವರ ಕಾವ್ಯದ ಮೋಡಿ ಆವರಿಸಿಕೊಂಡಿದೆ. ಅವರ ಛಂದಸ್ಸು, ನಾದಮಯತೆ, ತಮ್ಮ ಅಬ್ಬರವಲ್ಲದ ಅಭಿವ್ಯಕ್ತಿಯ ಕ್ರಮಕ್ಕೆ ಭಾಷೆಯನ್ನು ಬಾಗಿಸಿ ಬಳುಕಿಸಿ ಮಿದ್ದುಕೊಂಡು ಬಳಸಿಕೊಂಡಿರುವ ಕೌಶಲ್ಯ ಅಚ್ಚರಿ ಹುಟ್ಟಿಸುತ್ತದೆ. ನಮಗೆ ಪರಿಚಿತವಾದ ಪುರಾಣದ ಐತಿಹ್ಯದ ಕತೆಗಳನ್ನೇ ಕಾವ್ಯವಾಗಿಸುತ್ತಾರೆ ಎಕ್ಕುಂಡಿಯವರು. ನಮ್ಮ ಅನೇಕ ಕನ್ನಡದ ಹಿರಿಯ ಕವಿಗಳ ಕಾವ್ಯಕ್ಕೆ ವಿಮರ್ಶೆಯ ಏಣಿಮೆಟ್ಟಿಲ ಸಹಾಯ ಬೇಕು, ಆಯಾ ಕವಿಯ ಕಾವ್ಯದ ಪರಿಣಿತರ ಸಹಾಯದಿಂದ ಅವರು ತೋರಿಸುವ ಮ್ಯಾಜಿಕ್ ಲ್ಯಾಂಪಿನ ಕಿಂಡಿಗಳಲ್ಲಿ ನಾವು ಕಾವ್ಯಶೋಧಕ್ಕೆ ತೊಡಗಿಸಿಕೊಳ್ಳಬೇಕು. ಆದರೆ ಎಕ್ಕುಂಡಿಯಂಥವರ ಕಾವ್ಯ ಜಗತ್ತು ಸರಳವಾದದ್ದು; ಹೊಳೆಯಂಥದ್ದು. ಯಾರು ಎಲ್ಲಿಂದ ಬೇಕಾದರೂ ಬೊಗಸೆಯಿಂದ ಬಾಯಾರಿಕೆ ತಣಿಸಿಕೊಳ್ಳಬಹುದು. ಹರಡಿಕೊಂಡ ಸರಣಿ ದೀಪಕ್ಕೆ ವಿದ್ಯುತ್ ಸೋಕಿದಾಗ ಝುಗ್ಗನೆ ಬೆಳಗುವ ಸಾಲು ಬೆಳಕಿನಂಥದ್ದು. ಕಾವ್ಯ ಅಂದರೇನು, ಕವಿತೆಯ ಓದು ಅರ್ಥವಾಗುವುದಿಲ್ಲ, ರುಚಿಸುವುದಿಲ್ಲ ಅನ್ನುವಂಥಾ ಎಲ್ಲಾ ಕನ್ನಡಿಗರೂ ಎಕ್ಕುಂಡಿಯವರ ಮೂಲಕ ಕನ್ನಡ ಕಾವ್ಯಲೋಕಕ್ಕೆ ಸರಿಯಾದ ಪ್ರವೇಶ ಪಡೆಯಬಹುದು.

ಸಂಖ್ಯೆಯ ದೃಷ್ಟಿಯಿಂದ ಸುಮಾರು ಇನ್ನೂರು ಕವಿತೆಗಳ ಸರಿಸುಮಾರು ಆರುನೂರು ಪುಟಗಳು ಎಕ್ಕುಂಡಿ ಸಮಗ್ರ ಕಾವ್ಯದ ಗಾತ್ರ. ಈ ದೊಡ್ಡ ಪುಸ್ತಕದ ಪ್ರಕಟಣೆಯ ಕನಸು ಸುಮಾರು ಐದು ವರ್ಷ ಹಳೆಯದು. ಯಾವುದಾದರೂ ಹಿರಿಯ ಸಂಸ್ಥೆ ಈ ಕೆಲಸಕ್ಕೆ ಮುಂದಾಗಬಹುದೇನೋ ಎಂದು

ಕಾದಿದ್ದಾಯ್ತು; ಕೇಳಿ ಕೇಳಿ ಇಲ್ಲ ಅನ್ನಿಸಿಕೊಂಡದ್ದಾಯ್ತು. ಸರ್ಕಾರದ ಪುಸ್ತಕ ಪ್ರಾಧಿಕಾರವೂ ಸ್ಪಷ್ಟ ನಿಲುವು ತಾಳದೆ ಸುಮ್ಮನಾಯಿತು. ಎಂತೆಂಥಾ ಕಿರಿಯ ಲೇಖಕರುಗಳಿಗೆಲ್ಲಾ ಸಮಗ್ರ ಕಾವ್ಯದ, ಆಯ್ದ ಕವಿತೆಗಳ, ಅಭಿನಂದನಾ ಗ್ರಂಥದ ಗೌರವ ದೊರಕುತ್ತಿದ್ದ ಸಂದರ್ಭದಲ್ಲಿ ಎಕ್ಕುಂಡಿ ಯಾಕೆ ಮರೆತುಹೋದರು ಅನ್ನುವುದು ನನ್ನ ಉತ್ತರ ಸಿಗದ ಪ್ರಶ್ನೆಯಾಗಿತ್ತು. ಕೊನೆಗೆ ಉತ್ತರಿಸುವ ಕಾರ್ಯ ನಮ್ಮಿಂದಲೇ ಆಗಲಿ ಎಂದು ಕೈಗೆತ್ತಿಕೊಂಡಿರುವ ದೊಡ್ಡ ಯೋಜನೆ ಇದು. ಸಂಚಯದ ಇಪ್ಪತ್ತನೆಯ ವರ್ಷಾಚರಣೆಗೆ ಒಂದು ಭರ್ಜರಿ ಸಮಾರಂಭ ಅಥವಾ ಈ ಪುಸ್ತಕದ ಪ್ರಕಟಣೆ ಮತ್ತು ಬಿಡುಗಡೆಯ ಆಯ್ಕೆ ಎದುರು ನಿಂತಾಗ, ಆಯ್ಕೆ ಈ ಪುಸ್ತಕದ್ದೇ ಆಯ್ತು. ಸಂಚಯಕ್ಕೇನು ಈಗ ಇಪ್ಪತ್ತು ವರ್ಷಗಳಾದದ್ದು ಮುಂದೆ ಇಪ್ಪತ್ತೈದೂ ಆದೀತು ಅಲ್ಲವೆ?

ಸಂಚಯದ ಚಂದಾದಾರ ಓದುಗ ಮಿತ್ರರಲ್ಲಿ ನನ್ನದೊಂದು ವಿನಮ್ರ ಕೋರಿಕೆ; ಸು.ರಂ.ಎಕ್ಕುಂಡಿ ಸಮಗ್ರ ಕಾವ್ಯ ಪ್ರಕಟಣೆಗೆ ಸಿದ್ಧಗೊಳ್ಳುತ್ತಿದೆ. ಜೂನ್ ತಿಂಗಳಿನಲ್ಲಿ ಅದು ಹೊರಬರಲಿದೆ. ಅದು ನಿಮ್ಮ ಕನ್ನಡ ಸಾಹಿತ್ಯ ಸಂಗ್ರಹಕ್ಕೆ ಸೇರಲೇಬೇಕಾದ ಅಮೂಲ್ಯ ಗ್ರಂಥ, ದಯವಿಟ್ಟು ಈ ಪುಸ್ತಕವನ್ನ ನಿಮ್ಮ ಮನೆ ಮನಸ್ಸಿಗೆ ತುಂಬಿಸಿಕೊಳ್ಳಿ. ಕೊಂಡಿಟ್ಟುಕೊಳ್ಳಿ. ನಮ್ಮ ಚಂದಾದಾರರು ಒಬ್ಬೊಬ್ಬರು ಒಂದೊಂದು ಪ್ರತಿ ಕೊಂಡು ಸಹಕರಿಸಿದರೂ ನಮ್ಮ ಶ್ರಮ ಸಾರ್ಥಕ.

ಜನವರಿ ೨೦ಕ್ಕೇ ಪ್ರಕಟಗೊಳ್ಳಬೇಕಿದ್ದ ಈ ಪುಸ್ತಕ ಕೆಲವು ಅನಿವಾರ್ಯತೆಗಳ ಕಾರಣಕ್ಕೆ ತಡವಾಗಿದೆ; ಜೂನ್ ೨೯ಕ್ಕೆ ಬಿಡುಗಡೆ: ಬೆಂಗಳೂರಿನಲ್ಲಿ ಮೊದಲ ಬಿಡುಗಡೆ ಕಾರ್ಯಕ್ರಮ. ಜುಲೈ ತಿಂಗಳಿನಲ್ಲಿ ಹುಬ್ಬಳ್ಳಿ ಮತ್ತು ಅಂಕೋಲಾಗಳಲ್ಲೂ ಈ ಪುಸ್ತಕ ಬಿಡುಗಡೆಯಾಗುತ್ತದೆ. ಬನ್ನಿ, ಮರೆತುಬಿಟ್ಟಿರುವ ಕವಿಯ ನೆನಪಿನ ಜೊತೆಗೆ ಅವರ ಸತ್ವಯುತವಾದ ಕಾವ್ಯವನ್ನು ಆಸ್ವಾದಿಸೋಣ.

ನಿಮ್ಮ

ಸಂಪಾದಕ

ಚಂದಾದಾರರಲ್ಲಿ ಒಂದು ಮಾತು

- ಎಂ.ಓ. ಮೂಲಕ ಚಂದಾ ಕಳುಹಿಸುವವರು ಕೌಂಟರ್ ಫಾಯಿಲ್‌ನಲ್ಲಿ ತಪ್ಪದೆ ನಿಮ್ಮ ಹೆಸರು, ವಿಳಾಸ ಬರೆಯಿರಿ. ಹೊರ ಊರಿನ ಚೆಕ್ ಕಳುಹಿಸುವವರು ರೂ. 50/- ಹೆಚ್ಚಿಗೆ ಕಳುಹಿಸಿ. '**ಸಂಚಯ**'ದ ಹೆಸರಿಗೆ ನಿಮ್ಮ ಚೆಕ್, ಡಿ.ಡಿ. ಕಳುಹಿಸಬಹುದು.
- ನಿಮ್ಮ ವಿಳಾಸ ಬದಲಾದಲ್ಲಿ ದಯವಿಟ್ಟು ಒಂದು ಕಾರ್ಡು ಹಾಕಿ. ನಮ್ಮ ಸಮಯ, ಶ್ರಮ ಸುರಿದು ರೂಪಿಸಿದ ಪತ್ರಿಕೆಯ ಪ್ರತಿಗಳು ವ್ಯರ್ಥ ವಾಪಸ್ಸಾಗುವುದು, ಬೇಡದ ಜಾಗಗಳಲ್ಲಿ ಕೊಳೆಯುವುದು ಬೇಡ.
- ಪುಸ್ತಕ ವಿಮರ್ಶೆ/ಪರಿಚಯಕ್ಕೆ ಎರಡು ಪ್ರತಿಗಳನ್ನು ಕಳುಹಿಸಿ.
- ನಿಮ್ಮ ಸ್ನೇಹಿತರನ್ನು, ಗೆಳೆಯರನ್ನು ಆಸಕ್ತಿ ಇರುವವರನ್ನು ಸಂಚಯಕ್ಕೆ ಚಂದಾದಾರರನ್ನಾಗಿ 'ಸಂಚಯ ಸ್ನೇಹವಲಯ' ವಿಸ್ತರಿಸಿ.
- ನಿಮ್ಮ ಬರಹಗಳು ಮತ್ತು ಸಂಚಯ ಕುರಿತ ಅನಿಸಿಕೆ ಅಭಿಪ್ರಾಯಗಳಿಗೆ ಸ್ವಾಗತವಿದೆ.

ಎರಡು ಅತಿ ಸಣ್ಣ ಕತೆಗಳು

◆ ಜಿ.ಎಸ್. ರಂಗನಾಥ ರಾವ್



ಈ ಕಾಲ...

ಕಾಲ ಎಂದರೆ ಭಯ. ಏಕೆಂದರೆ ಕಾಲಾನ ಕೊಲ್ಲೋದು ಭಾಳ ಕಷ್ಟ. ಒಂದು ಕಾಲ ಇತ್ತು. ಆಗ ಕಾಲದ ಜೊತೆ ರನ್ನಿಂಗ್ ರೇಸ್ ಮಾಡ್ತಾ ಇದ್ದೆ. ಆದರೆ ಈಗ ಕಾಲ ನಿಂತುಬಿಟ್ಟಿದೆ. ಕಾಲಾನ ಕೊಲ್ಲೋದು ಭಾಳ ಕಷ್ಟ.

ರಾಮಾಯಣ, ಮಹಾಭಾರತ, ಭಗವದ್ಗೀತೆ, ವೇದ, ಉಪನಿಷತ್ತು ಎಲ್ಲ ಬೇಸರ–

ಲಕ್ಷ್ಮಿ ಕಾಲ್ಮುರಿದುಕೊಂಡು ಬಿದ್ದಿದಾಳೆ ಇಲ್ಲಿ. ಆದರೇನು? ಹಾಳಾದ್ದು ಡಯಾಬಿಟಿಸ್, ಕೊಲೆಸ್ಟರಾಲ್ ಮತ್ತೊಂದು ಸುಡುಗಾಡು ರೂಮಾಟಿಸಮ್–

ಕಾಲ ಕಾಲ್ಮುರಿದುಕೊಂಡು ಬಿದ್ದಿದೆ ಇಲ್ಲಿ, ಕಾಲಾನ ಕೊಲ್ಲೋದು ಭಾಳ ಕಷ್ಟ ಹಾಗಂತ ಟೈಂಪಾಸ್ ಎಂದು ಏನೆಲ್ಲ ಭಾನಗಡಿ ಮಾಡಲಿಕ್ಕೆ ಬರೋಲ್ಲ ಈ ವಯಸ್ಸಿನಲ್ಲಿ, ವಯಸ್ಸು ಎಪ್ಪತ್ತು. ಐವತ್ತಕ್ಕೆ ಬಿಳಿಕೂದಲು ಆದಾಗಿಂದ್ಲೂ 'ಡೈ' ಹಾಕ್ತಾನೆ ಇದ್ದೀನಿ–

ಇವಳಿಗೆ ಅರವತ್ತರ ಸಮೀಪ ಬೆಳ್ಳಿ ಗೆರೆಗಳನ್ನು ಮುಚ್ಚಲು ಎಂಥದೋ ಕೆಮ್ಮಣ್ಣು ಸಾರಿಸಿಕೊಂಡು ಕೆಂಚಿ ಆಗ್ತಾಳೆ. ಹೀಗೆ ಕಾಲಕಾಲಕ್ಕೆ ಇಬ್ಬರೂ ಬಣ್ಣ ಬದಲಾಯಿಸಿಕೊಂಡರೂ ಕಾಲದ ಛಾಪು ಝಾಡ್ಸಿ ಒದೀಲಿಕ್ಕಾಗ್ತಾ ಇಲ್ಲ. ಕಾಲ–

ಕಾಲಾನ ಕೊಲ್ಲೋದು ಭಾಳ ಕಷ್ಟ...

'ಕಾಫಿ ತಗೊಳ್ಳಿ'

ಟೈಮ್ ಅಂದ್ರೆ ಟೈಮ್ ಇವಳ್ದು. ಬರೋಬರಿ ನಾಲ್ಕಕ್ಕೆ ಕಾಫಿ, ಆಮೇಲೆ ಎರಡು ಸೀರಿಯಲ್ ನೋಡಿ ವಾಕ್ ಹೋಗ್ತಾಳೆ. ಆದರೂ...

'ಅಲ್ಲಿಡು, ಕೂತ್ಕೊ'

ಟೀಪಾಯ್ ಮೇಲೆ ಕಾಫಿ ಇಟ್ಟು ವಿಧೇಯ ವಿದ್ಯಾರ್ಥಿಯಂತೆ ಚೇರ್ ಎಳೆದುಕೊಂಡು ಕಣ್ಣಲ್ಲಿ ಕಣ್ಣಿಟ್ಟು ನೋಡೋ ಮಾದರಿ ಎದುರಿಗೆ ಕುಳಿತಳು.

ಕಪಿ ಕಾಫಿ ನಿಧಾನವಾಗಿ ಗುಟುಕರಿಸುತ್ತ–

'ಕಾಲ ಕೊಲ್ಲೋದು ಭಾಳ ಕಷ್ಟ

ಒಂದು ಆಟ ಆಡೋಣ್ವಾ?'

'ಛೀ...ಛೀ...ಈಗೆಂಥ ಆಟ... ಈ ವಯಸ್ಸಿನಾಗ'

'ಆಟಕ್ಕೆ ವಯಸ್ಸೇನು? ಕಾಲ ಕೊಲ್ಲೋದು ಭಾಳ ಕಷ್ಟ'

'......................................'

'ಏನಿಲ್ಲ ಈ ಆಟದಲ್ಲಿ ನೀನೊಂದು ಕನ್ನಡಿ, ನಾನೊಂದು ಕನ್ನಡಿ. ನಿನ್ನ ಕನ್ನಡಿ ನಾನು ಓದ್ತೀನಿ, ನನ್ನ ಕನ್ನಡಿ ನೀನು ಓದು, ಆಯ್ತಲ್ಲಾ? ಏನಿದು ಹುಡುಗಾಟ...? ಮೊದಲು ನಾನು ನಿನ್ನ ಕನ್ನಡಿ ಓದ್ತೀನಿ. ಕಣ್ಣ ಗೊಂಬಿ ತಾಕೊ– ಹಾಗೆ ನೇರ ನನ್ನೇ ನೋಡ್ತಾ ಇರು...

ಕಣ್ಣೊಳಗಿಂದ ನಿನ್ನ ಹೃದಯ ಪ್ರವೇಶ ಮಾಡ್ತಾ ಇದೀನಿ...

ಹ್ಞಾಂ! ಯಾರದು ನಂಗೆ ಕಾಣಿಸ್ತಿರೊ ಆ ಸ್ಫುರದ್ರೂಪಿ ಯುವಕ?

'ನಾ ಕಂಡೆ, ಸುಂದರ ಸದೃಢ ಯುವಕನ... ಕೆಂಪಗೆ ಸಪೂರ ಆರಡಿ...ಗುಂಗುರು ಕ್ರಾಪು...'

'ಯಾರದು? ಯಾರು? ಯಾರು ಆ ಅದೃಷ್ಟಶಾಲಿ?'

'ನೀವೇ, ನೀವಲ್ಲದೆ ಬೇರೆಯವರನ್ನು ಕಣ್ಣೆತ್ತಿಯೂ ನೋಡಿದವಳಲ್ಲ ನಾನು'

(ನಿಜವೆ? ನಂಗೂ ಮೊದಲೇ ಬೇರೊಬ್ಬ ಆ ಜಾಗ ಆಕ್ರಮಿಸಿರಬಹುದೆ?)

'ನೀ ಪ್ರಾಮಾಣಿಕಳಿಲ್ಲ. ನನಗೆ ವಂಚನೆ ಮಾಡ್ತಿದ್ದೀಯ? ಸುಳ್ಳು ಹೇಳ್ತಿದೀಯ...'

'ಸುಳ್ಳು? ಸುಳ್ಳ, ಕಳ್ಳ, ಭ್ರಷ್ಟ, ಲಫಂಗ, ಲಂಪಟ ಎಲ್ಲ ನೀನೇ...'

'ಏನಂದಿ?'

'ಹೌದು ನಿನ್ನ ಕನ್ನಡಿಯಲ್ಲಿ ನೀನು ನಂಗೆ ಸ್ಪಷ್ಟ ಕಾಣ್ತಿದೀಯ. ನೀನೊಬ್ಬ ಸುಳ್ಳ, ನೀನೊಬ್ಬ ಕಳ್ಳ, ನೀನೊಬ್ಬ ಲಂಪಟ'

'ಇದು ವಿಪರೀತ ಆಯ್ತು...'

'ವಿಪರೀತ ಯಾಕೆ? ನಿನ್ನ ಕನ್ನಡಿಯೊಳಗೆ ನೀನೆ ನಿನ್ನ ನೋಡ್ಕೋ... ಮುಖ, ಹೃದಯಕ್ಕೆ ನಿನ್ನ ಕನ್ನಡಿ ಹಿಡ್ಕೋ...ಹೃದಯ ಇದ್ದರೆ–

(ಮೊನ್ನೆ ಮೊನ್ನೆ Heart Attack ಆಗಿ ಹೃದಯ ಇರೋದು ಖಾತ್ರಿ ಆಯ್ತಲ್ಲ)

ನಿನ್ನ ಹೃದಯದ ವ್ಯಾಪಾರ ವ್ಯವಹಾರ ಎಲ್ಲ ನೋಡ್ಕೋ ನಿಂಗೇ ತಿಳಿಯತ್ತೆ ನೀನು ಕಳ್ಳ, ಸುಳ್ಳ, ಭ್ರಷ್ಟ, ಲಂಪಟ ಅನ್ನೋದು'

'ಇದು ಚಾರಿತ್ರ್ಯವಧೆ... Nothing short of character assassination

'ಸುಡ್ತು ನಿಮ್ಮ ಚಾರಿತ್ರ್ಯ...

ಸಪ್ತಪದಿ ತುಳೀವಾಗಲೇ ನಿಮ್ಮಲ್ಲಿ ಸುಳ್ಳು ಹುಟ್ಟು. ನಾ ಶ್ರೀ ರಾಮಚಂದ್ರ, ಏಕಪತ್ನಿವ್ರತಸ್ಥ ಅಂತ ಕೊಟ್ಟ ಭರವಸೆ ಏನಾಯ್ತು- ಸುಳ್ಳು....

'ಅದು ಅದು ಹಾಗಲ್ಲ....'

'ಸ್ಪೆನೊ ಸುಮಿತ್ರಾ ಜೋಡಿ....

ಮನೆಯಾಗಿ ನೀವು ಸೀತಾಮಾತಾ ಇದೀರಿ.... ಆದರೆ ರಾಯರು ನಿಮಗೆ ಹೀಂಗ ಅನ್ಯಾಯ ಮಾಡಬಾರದಿತ್ತು ಅಂತ ಡ್ರೈವರ್ ಭಾಗೋಜಿ ಹೇಳಿದ್ದು ಸುಳ್ಳೇನು?'

'......................'

'ಕಾವೇರಿ, ಕೃಷ್ಣಾ ಕೊಳ್ಳಗಳ ಕೊಳ್ಳೆ ಹೊಡೆದದ್ದು ಸುಳ್ಳೇನು?'

'ಎಲ್ಲ ನಿನ್ನ ಸಲುವಾಗಿ, ಮಕ್ಕಳ ಸಲುವಾಗಿ......'

'ಸುಳ್ಳು ತಟವಟ ಭ್ರಷ್ಟಾಚಾರಗಳ ಸಮರ್ಥನೆಗೆ ಹೆಂಡ್ತಿ ಮಕ್ಕಳು ನೆನಪಾದ್ರೇನು?

'ಭಾರಿ ಮಹಲು ಕಟ್ಟಿದ್ದು ಯಾರ ಸಲುವಾಗಿ...?'

'ಇನ್ನೂ ಒಂದು ಮಹಲ್ಲು ಕಟ್ಟಿಸಿಲ್ವೇನು?'

'ಮಹಲ್‌ನಲ್ಲಿ ಮರ್ಯಾದಿ ಇದ್ಯೇನು? ಸತ್ಯ ಇದ್ಯೇನು? ಸಿ.ಬಿ.ಐ ದಾಳಿ ಆದದ್ದು ಸುಳ್ಳೇನು? ಈ ಮಹಲ್ಲು ಆ ಮಹಲ್ಲು ಎರಡೂ ಕಡೆ ಏಕಕಾಲದಲ್ಲಿ ದಾಳಿ ಆದದ್ದು ಸುಳ್ಳೇನು? ಬಂಗಾರದ ಉಡದಾರ, ಬಂಗಾರದ ಕೌಪೀನ ಎಲ್ಲ ಕೊಟ್ಟು ಮಾನ ಮರ್ಯಾದಿ ಉಳಿಸಿಕೊಳ್ಳಲಿಕ್ಕೆ ಅಂಗಲಾಚಿದ್ದು ಸುಳ್ಳೇನು?'

'ಮತ್ತೆ ನಾನು..... ನಾನು...'

'ನಾನು...ನಾನೂಂತ ಯಾಕೆ ಬಡಬಡಿಸ್ತೀರಿ... ಹೇಳ್ತೀನಿ ಕೇಳಿ ನೀವು ರಾಮಚಂದ್ರ ರಾವ್, ಬಿ.ಇ. ರಿಟೈರ್ಡ್ ಚೀಫ್ ಇಂಜನಿಯರ್......'

"ಹ್ಞಾಂ! ಹ್ಞಾಂ! ಹಾಗೆ ಹೇಳು ಅದು ನಿಜ. ಏನೇ ಆದರೂ ನಾನೂ ನೀನೂ ರಾಮ-ಸೀತೆ ಅಲ್ಲವೇ? ಆದರ್ಶ ದಂಪತಿಗಳಲ್ವೇ? 'ಭಲೇ ಜೋಡಿ' ಅಂತ 'ಮಾನಿನಿ' ಬರೆದದ್ದು ಸುಳ್ಳೆ?"

"ಅದು ಲೋಕದ ಕನ್ನಡಿಯೊಳಗೆ....

ಅವತ್ತು ಕೈ-ಕೈ ಹಿಡಿದು ಹಾಗಂತ ಸಪ್ತಪದಿ ತುಳಿದ್ವಿ, ಆಮೇಲೆ ನೀವು ಕೈಬಿಟ್ಟು ದಿನದಿನಕ್ಕೆ ದೂರ ಆಗ್ತಾ ಹೋದ್ರಿ....

ನಾನೊಬ್ಬಳೆ ಸಪ್ತಪದಿ ಹೆಜ್ಜೇಲೆ ಹಾದಿ ತುಳಿತಿದ್ದೀನಿ....

ನೀವು ರಾಮ

ನಾನು ಸೀತ...

ನೀವು ರಾಮ ಅಲ್ಲ, ನನ್ನ ಅಗ್ನಿದಿವ್ಯಕ್ಕಾಗಿ ಹಪಹಪಿಸ್ತಿರೊ ಹರಾಮ!"

ಕೊಲ್ಲೋದು ಅಂದ್ರೆ ಇದೇನಾ?

ಕಾಲ ಕೊಲ್ಲೋದು ಭಾಳ ಕಷ್ಟ



ಇತಿಹಾಸ

ಚಂದ್ರವಂಶದ ಅರಸರ ಸಂತತಿಯ ಕೊನೆಯ ಮಹಾರಾಜರು ಮಹಾನಗರದ ಕೊಳಚೆ ಪ್ರದೇಶವೊಂದರಲ್ಲಿ ವಾಸವಾಗಿದ್ದಾರೆಂಬ ಸುದ್ದಿ ತಿಳಿದಿದ್ದೇ–

ಚರಿತ್ರೆಯ ಕೊನೆಯ ಪುಟಗಳು–

ಒಳ್ಳೆ ಸ್ಕೂಪ್ ಆದೀತು ಎನ್ನಿಸಿ ಬೆಳಿಗ್ಗೆ ಹತ್ತಕ್ಕೇ ಫೋಟೋಗ್ರಾಫರ್‌ನನ್ನು ಬೆನ್ನಿಗಿಟ್ಟುಕೊಂಡು ಧಾವಿಸಿದೆ.

ರಾಜೇಂದ್ರನಗರವೆಂಬ ಸಿಮೆಂಟ್ ಫಲಕ ಆ ಕೊಂಪೆಗೆ ನಮ್ಮನ್ನು ಸ್ವಾಗತಿಸಿತು. ನೂರಾರು ಜೋಪಡಿಗಳ ಕೊಳಚೆ ಪ್ರಪಂಚ. ಹತ್ತಡಿ ರಸ್ತೆಯೇ ರಾಜಮಾರ್ಗ. ಮೂರು–ಮೂರಡಿ ಅಂತರದಲ್ಲಿ 'ರಾಜಮಾರ್ಗ'ದ ಎದುರು ಬದುರು ಎದ್ದಿರುವ ಜೋಪಡಿಗಳು. ರಾಜಮಾರ್ಗದಲ್ಲೊಂದು ಸಾರ್ವಜನಿಕನಲ್ಲಿ. ಅದರ ಹಿಂದೆ ಒಂದು ಕಟ್ಟೆ, ಕಟ್ಟೆ ಮೇಲೆ ಬೀಡಿ ಸೌಖ್ಯದಲ್ಲಿ ಮೈಮರೆತಿದ್ದ ಸೋಮಾರಿಗಳ ಗುಂಪು. ಇವರ ದಂಧೆ ಏನಿದ್ದರೂ ರಾತ್ರಿಯೇ.

ಜೋಪಡಿಗಳ ಎದುರು ಉರಿಯುತ್ತಿರುವ ಒಲೆ. ಒಲೆ ಮೇಲೆ ಅಲ್ಯುಮಿನಿಯಂ ಪಾತ್ರೆಗಳಲ್ಲಿ ಕಾಯುತ್ತಿರುವ ಸ್ನಾನದ ನೀರು, ಕುದಿಯುತ್ತಿರುವ ಸಾಂಬಾರು, ಅನ್ನದೆಸರು, ಹಿಟ್ಟಿನೆಸರು.... ನೀರು ಮೊಗೆಮೊಗೆದು ಮಾನಮರ್ಯಾದೆಗಳಿಗೆ ಕೇರ್ ಮಾಡದೇ ಬಯಲು ಬಚ್ಚಲಲ್ಲೇ ಸ್ನಾನ.

ಅಲ್ಲಲ್ಲಿ ಮಲೆತ ನೀರಿನ ಪುಟ್ಟ ಹೊಂಡಗಳು, ಒಂದಕ್ಕೆ, ಎರಡಕ್ಕೆ ಕೂತ ಮಕ್ಕಳು ಹೊಂಡಗಳನ್ನು ಹೇಲು ಉಚ್ಚೆಗಳನ್ನು ಲಾಂಗ್‌ಜಂಪ್ ಮಾಡುತ್ತಾ, ಕುತೂಹಲದ ಕಣ್ಣುಗಳಿಗೆ ಆಹಾರವಾಗುತ್ತಾ, ಅವರಿವರನ್ನು ಕೇಳಿ ಮಹಾರಾಜರು 'ಅರಮನೆ' ಮುಂದೆ ನಿಂತಾಗ ಶ್ರಾವಣದ ಮಳೆಗೆ ರಜೆ ತೆಗೆದುಕೊಂಡಿದ್ದ ಸೂರ್ಯ ಮುಸುಕು–ಮುಸುಕಾಗಿ ಮೇಲೇಳುತ್ತಿದ್ದ.

೮೧೧೦ ಅಡಿಯ ಜೋಪಡಿ ಮಣ್ಣಿನ ಗೋಡೆ ಮೇಲೆ ತೆಂಗಿನಗರಿಯ ಛಾವಣಿ ಒಂದು ತಗಡಿನ ಬಾಗಿಲು ತೆರೆದಿದ್ದು ಒಳಗೆ ಹಗ್ಗದ ಹುರಿಯ ಮಂಚದ ಮೇಲೆ ಆರಡಿ ಎತ್ತರದ ಸ್ಥೂಲ ಕಾಯದ ವ್ಯಕ್ತಿಯೊಬ್ಬ ನಿಡಿದಾಗಿ ಕಾಲುಚಾಚಿ ಮಗ್ಗುಲಾಗಿ ಮಲಗಿದ್ದದ್ದು ಮಬ್ಬು ಬೆಳಕಲ್ಲಿ ನಮ್ಮ ಕಣ್ಣಿಗೆ ಗೋಚರಿಸಲು ಸ್ವಲ್ಪ ಸಮಯ ಹಿಡಿಯಿತು. ಎದುರು

ಗೋಡೆಯ ಮೇಲೆ ತೆರೆದ ಕತ್ತರಿಯನ್ನು ತಲೆಕೆಳಗಾಗಿ ತೂಗು ಹಾಕಿದ ಮಾದರಿಯಲ್ಲಿ ತೂಗುಹಾಕಿದ ಎರಡು ಖಡ್ಗಗಳು, ಅದರ ಕೆಳಗೆ ಗುರಾಣಿಯಾಕಾರದ ಒಂದು ತಗಡಿನ ಬಿಲ್ಲೆ, ಮೂಲೆಯಲ್ಲಿ ಕಿಲುಬುಹಿಡಿದ ಕಂಚಿನ ಹುಕ್ಕ, ಟೀಪಾಯ್ ಮೇಲೆ ಸಿಗರೇಟ್ ಪ್ಯಾಕು, ಖಾಗ್ಲಾಸು, ಅರ್ಧಖಾಲಿ ಆದ ಟ್ರಿಪಲೆಕ್ಸ್ ಬಾಟಲು...

ನಮ್ಮನ್ನು ಗಮನಿಸಿಯೋ ಎಂಬಂತೆ ಮಲಗಿದ್ದ ವ್ಯಕ್ತಿ ಎದ್ದು ಕುಳಿತ. ಒಳ್ಳೆ ಅಗಲವಾದ ಮುಖ, ದೊಡ್ಡಹಣೆ, ದೊಡ್ಡಮೂಗು, ಕೆಳಗೆ ಕಲ್ಲೀ ಮೀಸೆ...

"ಸೇವಕ, ಯಾರಲ್ಲಿ?"

ಮಹಾರಾಜರು ಕನಸಿನ ಲೋಕದಲ್ಲಿದ್ದಾರೇನೊ, ಅವರ ಕನಸಿಗೆ ಭಂಗಮಾಡಿದೆವೆ ಎನ್ನುವಷ್ಟರಲ್ಲಿ–

"ಯಾರಲ್ಲಿ?"

ಇದು ನಮಗೇ ಇದ್ದೀತೆಂದು ತಿಳಿದು–

"ಇಲ್ಲಿ ಚಂದ್ರವಂಶದ ಕೊನೆಯ ಮಹಾರಾಜರು..."

"ಹ್ಹ ಹ್ಹ ಹ್ಹ...."

ನಮ್ಮ ಮಾತಿಗೆ ಬ್ರೇಕ್ ಹಾಕಿದ ಗಹಗಹಿಸುವ ನಗು. ನಂತರ ಮೊಳಗಿತು ಕೊನೆಯ ಮಹಾರಾಜರ ಪರಾಕು–

ಸ್ವಸ್ತಿ ಶ್ರೀ ಮನ್ಮಾಹಾರಾಜ
ಮಹಾಪ್ರಚಂಡ ಯುದ್ಧೋದ್ಧಾಮವಿಲಾಸ
ಪರಾಕ್ರಮ ಪ್ರತಾಪ ಕಲಿಕುಮಾರ
ಅಪ್ರತಿಮ ಶೂರ ವೀರ ಧೀರ
ಶರಣಾಗತ ರಕ್ಷಕ
ಸ್ತ್ರೀ ವಿಲಾಸಿ ಮಾರ್ತಾಂಡ
ಸಿಂಹಾಸನಾಧೀಶ್ವರ
ಚಂದ್ರವಂಶ ಕೀರ್ತಿತೇಜ
ಶ್ರೀ ಮನ್ಮಹಾರಾಜಾಧಿರಾಜ ರಾಜ ಪರಮೇಶ್ವರ
ಚಂದ್ರಕೀರ್ತಿ ಮಹಾರಾಜರು
ಬಿಜಯಂಗೈಯುತ್ತಿದ್ದಾರೆ
ಸಾವಧಾನ ಸಾವಧಾನ
....

ವ್ಯಕ್ತಿ ಗಂಟಲು ಸರಿಪಡಿಸಿಕೊಂಡು

"ಅಮಾತ್ಯರೇ, ಬಂದವರಿಗೆ ಬಿನ್ನವಿಸಿಕೊಳ್ಳಲು ಹೇಳಿ"

ಅಮಾತ್ಯರಿಗಾಗಿ ಒಂದು ಕ್ಷಣ ತಡಕಾಡಿದ ನಾವು ಈ ರಾಜವಿಲಾಸಕ್ಕೆ ಬೆರಗಾಗಿ–

"ನಾವು 'ಪ್ರಜಾಪ್ರಭುತ್ವ'ದ ವರದಿಗಾರರು"

"ಪ್ರಜಾಪ್ರಭುತ್ವ.... ಹ್ಹ ಹ್ಹ ಹ್ಹ ಹ್ಹ.... ಆ ಮಾತು ಬಿಡಿ. ಅದು ನಮಗೆ ಆಗಬರುವುದಿಲ್ಲ. ಬಂದಂಥ ಕಾರ್ಯ ಹೇಳಿ. ಯಾರು ಕಳುಹಿಸಿದರು ನಿಮ್ಮನ್ನು? ನಮ್ಮ ಸಿಂಹಾಸನ, ಅರಮನೆ ಸಂಪತ್ತುಗಳನ್ನೆಲ್ಲ ಕಸಿದುಕೊಂಡು ಹೋಟೆಲ್ ಅಶೋಕಾದಲ್ಲಿ ಮಜಾ ಮಾಡ್ತಿರೋ ಪ್ರಜಾಪ್ರಭುತ್ವದ ಶನಿಸಂತಾನ ರಾಜಕಾರಣಿಗಳೋ.... ಸಿ.ಐ.ಡಿಗಳೋ, ತನಿಖೆಗೋ ಜಪ್ತಿಗೋ

ಯಾತಕ್ಕೆ ಬಂದದ್ದು?

"ಅಮಾತ್ಯರೇ ಸರಿಯಾಗಿ ವಿಚಾರಿಸಿ"

"ಚಂದ್ರವಂಶದ ಕೊನೆಯ ಮಹಾರಾಜರ ಸಂದರ್ಶನ ಮಾಡಲು ಬಂದಿದ್ದೇವೆ"

ನಮ್ಮ ಮಾತನ್ನು ತಡೆದು, ವ್ಯಕ್ತಿಯ ನಾಭಿಯೊಳಗಿಂದ ಬಂದಂತೆ ಭೋರ್ಗರಿಸಿತು ವಾಗ್ಝರಿ...

ವಿಶ್ವಮಂಡಲದಲ್ಲಿ ಆಚಂದ್ರಾರ್ಕವಾಗಿ ಹುಣ್ಣಿಮೆ ಚಂದ್ರನಂತೆ ಶೋಭಿಸುತ್ತಿರುವ ಚಂದ್ರವಂಶದ ವೀರಾಧಿವೀರ ಪರಾಕ್ರಮಿ ಪ್ರಜಾಪರಿಪಾಲಕರ ಕೀರ್ತಿಗೆ ಕೊನೆ ಇಲ್ಲ, ಎಣೆ ಇಲ್ಲ–

ಚಂದ್ರವಂಶದ ಅರಸರು ಪವಿತ್ರ ಭರತ ಭೂಮಿಯ ರಕ್ಷಣೆಗಾಗಿ, ಸಾಮ್ರಾಜ್ಯ ವಿಸ್ತರಣೆಗಾಗಿ ಯುದ್ಧ ಪರಾಕ್ರಮಗಳಿಂದ ಜೈತ್ರಯಾತ್ರೆಗಳಲ್ಲಿ ಮೆರೆದವರು–

ಯವನರ ಆಕ್ರಮಣದ ವಿರುದ್ಧ ಕತ್ತಿ ಹಿರಿದು ಸಮರ ಸಾರಿದವರು–

ಸಾವಿರಾರು ಅಮಾಯಕರ ತ್ಯಾಗ ಬಲಿದಾನಗಳಿಗೆ ಯುದ್ಧವೇದಿಕಟ್ಟಿ ರಣವೀಳ್ಯ ಕೊಟ್ಟವರು–

ಯುದ್ಧಗಳ ಸಾವಿರಾರು ವಿಧವೆಯರಿಗೆ ಆಶ್ರಯ ಕಲ್ಪಿಸಿದವರು–

ಯವನರಿಂದ ಹಿಂದೂಕುಲದ ಪಾವಿತ್ರ್ಯ ರಕ್ಷಿಸಲು ಯುವ ವಿಧವೆಯರಿಗೆ ಕೇಶಮುಂಡನ ಜಾರಿ ಮಾಡಿದವರು–

ಪದ್ಮಿನಿ, ಹಸ್ತಿನಿ, ಚಿತ್ತಿನಿ ಮೊದಲಾಗಿ ನಾಡಿನ ಸುಂದರ ನಾರೀಮಣಿಯರನ್ನು ಅಂತಃಪುರಕ್ಕೆ ತಂದುಕೊಂಡವರು–

ಬಂಡಾಯಗಾರರ ಹುಟ್ಟಡಗಿಸಿದವರು–

ಅನುಶಾಸನ ಮಾಡಿ ಪತ್ರಿಕೆಗಳ, ಕವಿ–ಸಾಹಿತಿಗಳ ಬಾಯಿಗೆ ಬೀಗ ಜಡಿದವರು–

ಚಂದ್ರವಂಶದ ಮಹಾರಾಜರು–

ಯಾರಲ್ಲಿ ಪಾನಪಾತ್ರೆ ತನ್ನಿ, ವ್ಯಕ್ತಿ ಗಂಟಲೊಣಗಿ ಮಾತು ನಿಲ್ಲಿಸಿದ್ದೇ–

"ಅದೆಲ್ಲ ಕೀರ್ತಿ ಪ್ರತಾಪವಾಯಿತು. ಸರಿಸರಿ... ನೀವೇ ಚಂದ್ರವಂಶದ ಕೊನೆಯ ಮಹಾರಾಜರು ಎಂಬುದಕ್ಕೆ ಸಾಕ್ಷಿ ಏನು?"

"ಅಮಾತ್ಯರೇ ಇವರನ್ನು ಶೂಲಕ್ಕೆ ಹಾಕಿಸಿ"

....

ಒಂದು ನಿಮಿಷದ ನೀರವತೆ ನಂತರ ವ್ಯಕ್ತಿ ಸಿಂಹಾಸನದಿಂದ ಎದ್ದು ಬರುವಂತೆ ಮಂಚದ ಮೇಲೆ ಮಿಸುಕಾಡಿ–

"ಸಾಕ್ಷಿ ಬೇಕೋ ಸಾಕ್ಷಿ ..... ಇದೋ ನೋಡಿ ಈ ಬೆನ್ನು ಫಣಿ...... ಇದು ರಾಜಹುಣ್ಣು. ಮಹಾರಾಜರಿಗೆ ಮಾತ್ರ ಬರುವ ಕಾಯಿಲೆ"

ವ್ಯಕ್ತಿ ಮೇಲೆ ಹೊದ್ದಿದ್ದ ಶಾಲು ತೆಗೆದು ಬಿಸಾಡಿ ಮಿಂಚಿನೋಪಾದಿ ನಮ್ಮತ್ತ ಬೆನ್ನುಮಾಡಿ ಕುಳಿತ.

"ಬೇಕಾದ್ರೆ ಫೋಟೊ ತಗೊಂಡ್ಹೋಗಿ"

ನಗ್ನ ಬೆನ್ನಿನ ಮಧ್ಯೆ ಅಂಗೈ ಅಗಲದ ಕೆಂಪು ಹುಣ್ಣು ಆಗತಾನೇ ಒಡೆದ ಕುರುವಿನಂತೆ ರಕ್ತ, ಕೀವು ಒಸರುತ್ತಿರುವ ಮುಷ್ಟಿ ಗಾತ್ರದ ಕೆಂಪುಹುಣ್ಣು. ರಕ್ತ ಕೀವುಗಳ ಮಧ್ಯೆ ವಿಲವಿಲಗುಟ್ಟುತ್ತಿರುವ ಹುಳುಗಳು–

ರಣಗುಡುತ್ತಿರುವ ಬೆನ್ನುಫಣಿ

ರಣ ರಣ ರಣ ಹುಣ್ಣು

ನಂ. ೨೬೬, ಸ್ನೇಹ, ೩ನೇ ಮುಖ್ಯರಸ್ತೆ, ೬ನೇ ಬ್ಲಾಕ್, ಕೋರಮಂಗಲ, ಬೆಂಗಳೂರು – ೫೬೦ ೦೯೫
ದೂರವಾಣಿ : ೨೫೭೭೦೧೧೬೫ / ೨೫೭೭೦೧೧೬೫



ಸಂಧ್ಯಾದೇವಿ ಅವರ ಐದು ಕವಿತೆಗಳು

೧

ಒಂದು ಹೊತ್ತಿ ಉರಿಯುತ್ತಿರುವಾಗ
ಇನ್ನೊಂದು
ಕರಗಿ ನೀರಾಗಿರುತ್ತದೆ.

ಇವೆರಡೂ, ಎಲ್ಲಿಯೋ ಒಂದು ಕಡೆ

ವಸಂತ ಋತುವಿನ ಮೇಲಿನ ಅತಿಯಾದ
ಕಲರವವಾಗಿರುತ್ತದೆ.
ಚಿಗುರಾಗಿರುತ್ತದೆ.
ಪರಿಮಳವಾಗಿರುತ್ತದೆ.

ಒಂದು ಅಳುವನ್ನು ಇನ್ನೊಂದು
ಅಂದೇ
ಮುದ್ದಿಸುತ್ತದೆ.

ಎರಡೂ ಕೈಗಳು ಕೂಡಿ ಎತ್ತಿಕೊಳ್ಳುತ್ತವೆ

ಮತ್ತು ಕುಡಿಸುತ್ತದೆ.
ತುತ್ತಿಟ್ಟು ಉಣಿಸುತ್ತದೆ.
ಮುತ್ತಿಟ್ಟು ಮಲಗಿಸುತ್ತದೆ.

ಹೀಗೆ, ಇಡೀ ಪ್ರಕೃತಿಯೆ ಹೊತ್ತಿಕೊಂಡು
ಉರಿಯುತ್ತಿರುವಾಗ

ಒಂದು ಋತುವು ತಿರುಗಿ ತಿರುಗಿ
ತನ್ನನ್ನು ತಾನದಕ್ಕೆ
ಎರೆದುಕೊಳ್ಳುತ್ತದೆ!

೨

ನಾನು ಒಂದು ಪಾತ್ರೆ
ಇಟ್ಟು
ಕಿಚ್ಚು ಇಟ್ಟ
ತಕ್ಷಣವೆ
ನನಗೆ ತಿಳಿಯಿತು
ಕಾವಿಗೆ ಕಾಳು ಅನ್ನವಾಗುತ್ತದೆಂದು.

ನೀನು ಒಂದು ಬೆಂಕಿ
ಹುಡುಕಿ
ಗಾಳಿಯಲ್ಲಡಗಿ ಬಂದೆ
ಕುದಿಯಿತು
ತಾನು ಎಸರು
ಹುದುಗಿ ಬೆಂದ ಅನ್ನದ ವಾಸನೆ.

ಇಷ್ಟಾದ ನಂತರ ನಾನು ಹೇಳುತ್ತೇನೆ
ನಾನು ಪಾತ್ರೆಯಲ್ಲ
ಪುರಾತನ ಹಸಿವೆ
ಮತ್ತು ಪಾತ್ರೆಯಲ್ಲಿ ಹಸಿವೆಯಿರುವುದಿಲ್ಲ.

ಗೊತ್ತಾದಾಗ ನೀನು ಬೆಂಕಿಯಲ್ಲ
ಅನ್ನವೇ ಆಗುವೆ
ಮತ್ತು ಹಿಂದಿನಿಂದಲೂ ಬೆಂಕಿಯಿಂದಲೆ
ಹಸಿವೆ ನೀಗಬೇಕಾದ ಅನ್ನವಾಗಿದೆ.



೩

ಸಾಪಿರವಾಗಲಿ
ಸಾಯುವ ಮೊದಲು
ಸಾವು ನಮ್ಮಿಬ್ಬರ ಸ್ನೇಹಿತ.

ಈ ಕ್ಷಣ
ಅಥವಾ ಯಾವಾಗಾದರೂ
ಸಾವಿಗೆ ಬರುವುದು ಸಾಧ್ಯ.


ಲೆಕ್ಕವಿಟ್ಟು
ಕೊಟ್ಟ ಬಿಡು ಸಾವಿರವಾಗಲಿ
ಸಾಲವು ಉಳಿಯಲಿ.

ಸೋಲಾದರೂ
ಸರಿ ಸಾವನು ಮೀರಲಿ
ಸಾವು ನಮ್ಮಿಬ್ಬರ ಸ್ನೇಹಿತ.

ನೆಟ್ಟ ಕಣ್ಣನು
ಕೀಳಲಾರೆ ಶಾಯಿ ತುಂಬಿದ
ಲೆಕ್ಕಣಿ ಪಕ್ಕಕ್ಕಿಡಲಾರೆ.

ಸಾಲು ಸಾಲನು
ಸಲ್ಲಿಸು ಸಾಯುವ ಮೊದಲು
ಸಾವಿರವಾಗಲಿ.

ಸಾವೆ
ನಮ್ಮಿಬ್ಬರ ನಿಜ
ಸ್ನೇಹಿತ.



೪

ಯಾವುದನ್ನು ಮುಟ್ಟಿ
ಇಲ್ಲಿ ಯಾವುದಿದು
ಕರಗುವುದು?
ಯಾವುದು ಹಿಮಮಣಿ!
ಯಾವ ದೇವ ಸೂರ್ಯನ ಕರ?


ಕಾಂತಿ ಚೆಲ್ಲುವುದು
ಮಣಿಗೆ ಮುಖ
ನೂರೆಂಟು
ಕಡೆ ಕಡೆಗೆ ಯಾವುದಿದು
ಹಲವಾಗುವುದು!
ಯಾವ ಹಲವಿನ ಮೂಲವು?

ಕಪ್ಪು ನೀಲ
ಮಣಿ ಮುಕುಲ
ಎದೆಯ ಮಧ್ಯದ ಪದಕ
ಕಳಚಿ ಕೊಟ್ಟ
ಕಪ್ಪ ಕಾಣಿಕೆ ಒಪ್ಪು
ಯಾವ ಭಾರಕ್ಕಿದು ತಲೆಬಾಗಿರುವುದು!
ಯಾವುದಿದು ತಲೆಯ ಅಲಂಕಾರ?

ಒಂದು ಚಂದ್ರನ ಮುರುಕು
ಒಂದು ಸೂರ್ಯನ ಬಿಳುಪು
ಬೆರಳಾಡಿಸಿದೆ
ಬೆನ್ನಿನ ಉದ್ದಕ್ಕೂ!
ನೋಡು.... ಕರಗಿ ನೀರಾಗಿದೆ ಸೆಟೆದ ಅಹಂಕಾರ
ಪೋಣಿಸಿದೆ ಮಣಿ ಮಾಲೆ
ಬೆಸೆದ ದೇಹದ
ಬೆವರ!

೫

ಈಗ ನಾನು ಹಗುರ ಬೆಂಡಿನಂತಾಗುತ್ತೇನೆ
ಮತ್ತು ತೇಲುತ್ತೇನೆ.
ಹರಿವ ನೀರಲ್ಲಿ
ನಡೆವ ನಾವೆ ಒಡಕಿಲ್ಲದ ದೋಣಿಗಳು



ಹೊರಟದ್ದೆಷ್ಟು ಸಲ
ತಲುಪಿದ್ದೆಷ್ಟು ಸಲ
ಒಮ್ಮೆ ಆಚೆ ದಡ
ಒಮ್ಮೆ ಈಚೆ ದಡ ನಡುವೆ ನಮ್ಮದೇ ನದಿ.

ಸಾಗುತಿದೆ ಸೇರಲು
ನದಿ ಸಾರುತಿದೆ
ಯಾರಲ್ಲಿ ಕೂಗುವರು ಹೋ......
ಹುಟ್ಟಿಲ್ಲದ ದೋಣಿಗಳು ಸಾಗುವದು ನೋಡಿ!

ದೋಣಿಯ ಒಳಗಡೆ
ಏನೇನಿತ್ತು? ಇಟ್ಟು
ಏನೇನಿಲ್ಲ! ಇದ್ದಂತಿದ್ದ
ಒಳವನ್ನೆಲ್ಲ ಒಮ್ಮೆಲೆ ತೇಲಿ ಬಿಟ್ಟೆವು ನಾವು ನೆನಪ

ಹಿಡಿಯಬಾರದು ನೆನಪನ್ನು
ಇನ್ನು ನಾನು ಕೈಬಿಟ್ಟು
ನೋಡುತ್ತ ಮಲಗುವೆನು
ಒಡಕಿಲ್ಲದ ದೋಣಿಗಳೆ ಇಲ್ಲಿ ನಿಲ್ಲದೆ ಹಾಯುವುದು.

'ಅಂತಿಕಾ', ರಾಘವೇಂದ್ರ ಮಠದ ಹತ್ತಿರ, ಕಲ್ಲಾರೆ, ಪುತ್ತೂರು
ದ.ಕ. – ೫೭೪೨೦೧, ದೂರವಾಣಿ: ೦೮೨೫೧–೨೩೩೩೮೩

ನನ್ನ ಬಾಲ್ಯದ ಜೀಸಸ್ಸುಗಳು

• ಕೆ.ಎಲ್. ಚಂದ್ರಶೇಖರ್ ಐಜೂರ್



ಚಿತ್ರ : ಸಖಿ

ಗಂಟೆಗೆ ಎರಡು ರೂಪಾಯಿಯಂತೆ ಬಾಡಿಗೆ ಸೈಕಲ್ ಪಡೆದು, ಹಿಂಬದಿ ಸೀಟಲ್ಲಿ ಜೀವದ ಗೆಳೆಯನೊಬ್ಬನನ್ನು ಕೂರಿಸಿಕೊಂಡು ಎರಡೆರಡು ಇಂಟರ್‌ವೆಲ್ ಇದ್ದ ರಾಜ್‌ಕಪೂರನ 'ಮೇರಾ ನಾಮ್ ಜೋಕರ್' ಚಿತ್ರ ನೋಡಲು ಮನೆಯಿಂದ ನಾಲ್ಕು ಮೈಲಿ ದೂರದ 'ಜೈಭಾರತ್' ಟೆಂಟಿಗೆ ಸೈಕಲ್ ತುಳಿಯುತ್ತ ಏದುಸಿರು ಬಿಡುತ್ತಿದ್ದ ದಿನಗಳವು. ನನಗಾಗ ಹದಿಮೂರು ತುಂಬಿತ್ತೆಂದು ಕಾಣುತ್ತದೆ.

'ರಾಜು ನಿನಗೆ ಹೃದಯಕ್ಕೆ ಸಂಬಂಧಿಸಿದ ಕಾಯಿಲೆ ಇದೆ. ನಿನ್ನ ಹೃದಯ ದೊಡ್ಡದು. ಆದರೆ ಈ ಜಗತ್ತು ತುಂಬಾ ಚಿಕ್ಕದು. ನಿನ್ನ ಹೃದಯ ದೊಡ್ಡದಾಗಿರೋದೇ ನಿನ್ನ ದೊಡ್ಡ ಕಾಯಿಲೆ' ಅಂತ ಸರ್ಕಸ್ಸಿನ ಡಾಕ್ಟರ್‌ಗಳು ಆಪರೇಷನ್ ಟೇಬಲ್ ಮೇಲೆ ಮಲಗಿದ್ದ ಜೋಕರ್‌ಗೆ ಹೇಳಿ ಬಿದ್ದು ಬಿದ್ದು ನಗುತ್ತಾರೆ. 'ಹಾಗಿದ್ರೆ ನೀವು ಈ ಜಗತ್ತಿಗೆ ಆಪರೇಷನ್ ಮಾಡಿ, ನನಗಲ್ಲ' ಎಂದು ಆ ಜೋಕರ್ ದೊಡ್ಡ ಕತ್ತರಿ ಹಿಡಿದು ಆಪರೇಷನ್ ಮಾಡಲು ಬರುವ ಸರ್ಕಸ್ಸಿನ ಡಾಕ್ಟರ್‌ಗಳ ಬಳಿ ಅಂಗಲಾಚುತ್ತಾನೆ. ಆಗಲೂ ಅವರು ಬಿದ್ದು ಬಿದ್ದು ನಗುತ್ತಾರೆ. ಸರ್ಕಸ್ ನೋಡಲು ಬಂದ ಜನರೆಲ್ಲ ಆ ಡಾಕ್ಟರ್‌ಗಳ ನಗುವನ್ನು ಮೀರಿ ನಗಾಡುತ್ತಾರೆ. ಯಾಕೋ ಅವತ್ತು ನನಗೆ ಈ ದೃಶ್ಯ ನೋಡುತ್ತಾ ನಗಲಾಗಲಿಲ್ಲ. ಜೊತೆಯಲ್ಲಿದ್ದ ಗೆಳೆಯ ಏನೊಂದೂ ಅರ್ಥವಾಗದವನಂತೆ ಸುಮ್ಮನೆ ಕೂತು ಚಿತ್ರ ನೋಡುತ್ತಿದ್ದ.

ಆಗ ನಾನಿದ್ದ ಟ್ರೂಪ್‌ಲೇನ್ ಎಂಬ ದಲಿತರು, ತಮಿಳರು ಮತ್ತು ಮುಸ್ಲಿಮರು ಹೆಚ್ಚಿಗೆ ವಾಸಿಸುತ್ತಿದ್ದ ಕೇರಿಯಲ್ಲಿ ಯಾರ ಮನೆಯಲ್ಲೂ ಟಿ.ವಿ. ಇರಲಿಲ್ಲ. ಡಿಸೆಂಬರ್ ಬಂತೆಂದರೆ ನಾವು ಕೇರಿಯ ಹುಡುಗರೆಲ್ಲ ಚರ್ಚಿನ ತುಂಬ ಮುತ್ತಿಕೊಳ್ಳುತ್ತಿದ್ದೆವು. ಕ್ರಿಸ್‌ಮಸ್ ಮರಗಳಿಗೆ ಗ್ರೀಟಿಂಗ್ ಅಂಟಿಸುತ್ತಾ, ಅಲ್ಲೇ ಮೊಳೆ ಹೊಡೆಸಿಕೊಂಡು ನಗುತ್ತಲೋ ನರಳುತ್ತಲೋ ಇದ್ದ ಯೇಸು ಕ್ರಿಸ್ತನನ್ನು ಕಣ್ಣು ತುಂಬಿಕೊಳ್ಳುತ್ತಿದ್ದೆವು.

ಕತ್ತಲಾದ ಕೂಡಲೇ ಚರ್ಚಿನವರು ದೊಡ್ಡ ಗೋಡೆಯೊಂದರ ಮೇಲೆ ಯೇಸುವಿನ ಚಲನಚಿತ್ರವನ್ನು ತೋರಿಸುತ್ತಿದ್ದರು. ಇನ್ನೇನು ಆ ಚಿತ್ರ ಮುಗಿಯಬೇಕೆನ್ನುವ ಹೊತ್ತಿಗೆ ನನ್ನ ಅವ್ವನೂ ಸೇರಿದಂತೆ ಕೇರಿಯ ಎಲ್ಲ ಹೆಂಗಸರೂ ಕಣ್ಣೀರಲ್ಲಿ ತೋಯ್ದು ಹೋಗಿರುತ್ತಿದ್ದರು.

ಬಾಲ್ಯದಲ್ಲಿ ನನಗೆ ಮನೆಮನೆ ತಿರುಗಿ ಪತ್ರಗಳನ್ನು ಹಂಚುತ್ತಿದ್ದ ಅಂಚೆ ಪೇದೆ ದೊಡ್ಡ ಜಾದೂಗಾರನಂತೆ ಕಂಡಿದ್ದ. ಅವನ ಹೆಗಲ ಚೀಲದಲ್ಲಿರುತ್ತಿದ್ದ ಪತ್ರಗಳಲ್ಲಿ ಯಾರ್‍ಯಾರು, ಯಾರ್‍ಯಾರಿಗೆ ಏನೇನು

ಬರೆದಿರಬಹುದೋ ಅಂತ ಕುತೂಹಲಿಯಾಗುತ್ತಿದ್ದೆ. ಅಪರೂಪಕ್ಕೊಮ್ಮೆ ಬೆಂಗಳೂರಿನಿಂದ ನಮ್ಮ ಅತ್ತೆ, ನಮ್ಮ ತಂದೆ ಹೆಸರಿಗೆ ಬರೆಯುತ್ತಿದ್ದ ಪತ್ರದಲ್ಲಿ, ಮನಿ ಆರ್ಡರ್ ಸ್ಲಿಪ್‌ನಲ್ಲಿ ನನ್ನ ಹೆಸರು ಇರುತ್ತಿದ್ದುದನ್ನು ಕಂಡು ಕೇರಿಯಲ್ಲ ಓಡಾಡಿ ನನ್ನ ಗೆಳೆಯರಿಗೆಲ್ಲ ಹೇಳಿಕೊಂಡು ಬರುತ್ತಿದ್ದೆ. ಯಾವತ್ತಾದರೂ ಒಂದು ದಿನ ಯಾರಾದರೂ ನನಗೂ ಒಂದು ಪತ್ರ ಬರೆದರೆ ಎಷ್ಟು ಚೆನ್ನಾಗಿರುತ್ತದೆಂದು ನನಗೆ ನಾನೇ ಪ್ರಶ್ನೆ ಮಾಡಿಕೊಳ್ಳುತ್ತಿದ್ದೆ. ದಿನಾ ನೋಡುತ್ತಿದ್ದ ಆ ಅಂಚೆ ಪೇದೆ ಮಾತ್ರ ನನಗೆ ಸಾವಿರ ದಿಕ್ಕಿನ ಕುತೂಹಲಗಳನ್ನೆಲ್ಲ ತನ್ನ ಹೆಗಲ ಚೀಲದಲ್ಲೇ ತುಂಬಿಕೊಂಡಿದ್ದಾನೇನೋ ಅನ್ನಿಸುತ್ತಿತ್ತು.

ಡಿಸೆಂಬರ್ ತಿಂಗಳಲ್ಲಿ ನಮ್ಮ ಕೇರಿಯ ಚರ್ಚಿನ ಜನ ಮನೆಮನೆಗೂ ಯೇಸು ಕ್ರಿಸ್ತನಿಗೆ ಸಂಬಂಧಿಸಿದ ಪುಸ್ತಕಗಳನ್ನು, ಬೈಬಲ್‌ಗಳನ್ನು ಉಚಿತವಾಗಿ ಹಂಚುತ್ತಿದ್ದರು. ಆ ಪುಸ್ತಕಗಳನ್ನೆಲ್ಲ ಪೂರ್ತಿ ಓದಿಯಾದ ಮೇಲೆ ಕಡೆಯ ಪುಟದಲ್ಲಿದ್ದ 'ಯೇಸುವಿನ ಬಗ್ಗೆ ಇನ್ನೂ ಹೆಚ್ಚು ತಿಳಿದುಕೊಳ್ಳಲು ಈ ವಿಳಾಸಕ್ಕೆ ಪತ್ರ ಬರೆಯಿರಿ' ಎಂಬ ಸಾಲುಗಳು ನನ್ನನ್ನು ಮತ್ತೆಮತ್ತೆ ಓದುವಂತೆ ಮಾಡುತ್ತಿದ್ದವು. ನನಗೂ ಯಾರಾದರೂ ಪತ್ರ ಬರೆದರೆ ಎಷ್ಟು ಚೆನ್ನ ಅಂದುಕೊಳ್ಳುತ್ತಿದ್ದ ನನ್ನ ಎದೆಯಲ್ಲಿ ಸಾವಿರ ನವಿಲುಗಳು ಒಮ್ಮೆಗೇ ಬಂದು ಕುಣಿದಂತೆ ಭಾಸವಾಯಿತು. ಮರುದಿನ ತಡಮಾಡದೆ ಹದಿನೈದು ಪೈಸೆಗೊಂದು ಸಿಗುತ್ತಿದ್ದ ಪೋಸ್ಟ್ ಕಾರ್ಡ್ ತೆಗೆದುಕೊಂಡು 'ನಾನು ಹುಟ್ಟಿರುವುದೇ ಯೇಸು ಸ್ವಾಮಿಯ ಬಗ್ಗೆ ತಿಳಿದುಕೊಳ್ಳಲು, ತಾವುಗಳು ದಯಮಾಡಿ ನನಗೆ ಯೇಸು ಸ್ವಾಮಿಗೆ ಸಂಬಂಧಿಸಿದ ಹೆಚ್ಚು ಹೆಚ್ಚು ಪುಸ್ತಕಗಳನ್ನು ಕಳಿಸಿಕೊಡಿ. ನಿಮ್ಮ ಪತ್ರಕ್ಕಾಗಿ ನಾನು ಕಾತರದಿಂದ ಕಾದಿರುತ್ತೇನೆ. ದಯಮಾಡಿ ಪತ್ರ ಬರೆಯಿರಿ, ಮರೆಯಬೇಡಿ, ನಾನು ಯೇಸು ಸ್ವಾಮಿಯ ಪರಮಭಕ್ತ' ಅಂತ ಏನೇನೋ ಗೀಚಿ ಅಂಚೆ ಡಬ್ಬಕ್ಕೆ ಹಾಕಿದ್ದೆ.

ನಾನು ಪೋಸ್ಟ್ ಮಾಡಿದ ನಂತರ ಪ್ರತಿದಿನ ಅಂಚೆ ಪೇದೆ ನಮ್ಮ ಗಲ್ಲಿಗೆ ಬಂದರೆ ಸಾಕು ಆತನನ್ನು, ಆತನೊಂದಿಗೆ ಸದಾ ಇರುತ್ತಿದ್ದ ಆ ಅಂಚೆ ಬ್ಯಾಗನ್ನು ತಿನ್ನುವಂತೆ ನೋಡುತ್ತಿದ್ದೆ. ಅಸಲಿಗೆ ನಾನು ಇಷ್ಟಗಲದ ಆ ಪೋಸ್ಟ್ ಕಾರ್ಡಿನಲ್ಲಿ ಬರೆದು ಗೀಚಿರುವುದು ಆ ಚರ್ಚಿನ ಜನಕ್ಕೆ ತಲುಪಿರುತ್ತದೋ ಅಥವಾ ಆಕಸ್ಮಾತ್ ಅಂಚೆಪೇದೆ ಏನಾದರೂ ಓದಿ ಹರಿದು ಬಿಸಾಡಿರುತ್ತಾನೇನೋ ಎಂದು ಆತಂಕಗೊಂಡಿದ್ದೆ. ಆ ಅಂಚೆಪೇದೆ ನಮ್ಮ ಮನೆಯ ಮುಂದೆ ಹಾದು ಹೋದಾಗಲೆಲ್ಲ ನನ್ನ ಆತಂಕ ಇನ್ನಷ್ಟು ತೀವ್ರಗೊಳ್ಳುತ್ತಿತ್ತು. ನಾನು ಶಾಲೆಯಲ್ಲಿ ಕೂತು ಪಾಠ ಕೇಳುವಾಗಲೂ ಇದೇ ಚಿಂತೆ ನನ್ನ ಮೈಮನಸ್ಸೆಲ್ಲ ಆವರಿಸಿಕೊಂಡು ತಿಂದು ಹಾಕಿತ್ತು. ಆ ಚರ್ಚಿನಿಂದ ಬರಬಹುದಾದ ಪತ್ರಕ್ಕಾಗಿ ಕಾಯುವ ಕುತೂಹಲ ಮಾತ್ರ ನನ್ನಲ್ಲಿ ಕೊಂಚವೂ ಕಡಿಮೆಯಾಗಿರಲಿಲ್ಲ.

ನಾನು ಪತ್ರ ಬರೆದು ಅಂಚೆಡಬ್ಬಕ್ಕೆ ಹಾಕಿದ ಒಂದು ವಾರಕ್ಕೆ ಸರಿಯಾಗಿ ಬೆಂಗಳೂರಿನ ಚರ್ಚೊಂದರಿಂದ ನನಗೆ ಪೋಸ್ಟ್ ಮೂಲಕ ಪಾರ್ಸೆಲೊಂದು ಬಂದಿತ್ತು. ನಮ್ಮ ಮನೆ ಎದುರುಗಿನ ಅಕ್ಕಪಕ್ಕದ ಜನ ನನಗೆ ಪೋಸ್ಟ್ ಮೂಲಕ ಬಂದಿರುವ ಪಾರ್ಸೆಲ್ ಕುರಿತು ಏನೇನೋ ವಿಚಿತ್ರವಾಗಿ ಕೇಳಿ ನನ್ನಿಂದ ನನ್ನದಲ್ಲದ ಮಾತುಗಳನ್ನು ಹೊರಡಿಸುತ್ತಿದ್ದರು. ಇನ್ನೂ ನೆಟ್ಟಗೆ ಚೆಡ್ಡಿನೇ ಕಟ್ಕೋಕೆ ಬರಲ್ಲ, ಆಗಲೇ ಇವನ ಹೆಸರಿಗೆ ಪೋಸ್ಟ್ ಬರೋದಿಕ್ಕೆ ಶುರುವಾಗದಲ್ರಿ ಎಂದು ನನ್ನ ತಂದೆಯ ವಾರಿಗೆಯವರು ನನ್ನನ್ನು ಇನ್ನಷ್ಟು ವಿಚಿತ್ರವಾಗಿ ನೋಡಲು ಶುರು ಮಾಡಿದ್ದರು.

ಮಾರನೇ ದಿನ ಅಂಚೆ ಕಚೇರಿಗೆ ಹೋಗಿ ಒಂದು ರೂಪಾಯಿ ಕೊಟ್ಟು ನನ್ನ ಹೆಸರಿಗೆ ಬಂದಿದ್ದ ಆ ಪಾರ್ಸೆಲನ್ನು ತೆಗೆದುಕೊಂಡು ಆ ಪಾರ್ಸೆಲ್ ಬಿಚ್ಚಿನೋಡಿದರೆ 'ಯೇಸುವಿನ ಸುವಾರ್ತೆಗಳು' ಎಂಬ ಹೆಸರಿನ ಸಣ್ಣ ಗಾತ್ರದ ನಾಲ್ಕು ಪುಸ್ತಕಗಳಿದ್ದವು. ನಂತರ ಬೆಂಗಳೂರಿನ ಚರ್ಚೊಂದರಿಂದ ಹೀಗೆ ನನಗೆ ವಾರಕ್ಕೊಂದು ಪುಸ್ತಕ, ಜತೆಗೊಂದು ಪತ್ರ ಬರುತ್ತಿತ್ತು. 'ನಿಮ್ಮ ಯೋಗಕ್ಷೇಮಕ್ಕಾಗಿ ನಾವು ತಂದೆಯಾದ ಯಹೋವರ ಮುಂದೆ ಮಂಡಿಯೂರಿ ಪ್ರಾರ್ಥಿಸುತ್ತಿದ್ದೇವೆ. ನಿಮ್ಮ ಬಳಿಗೆ ಆ ತಂದೆಯ ಮಗನಾದ ಯೇಸುವೇ ನಡೆದು ಬರಲಿದ್ದಾರೆ......' ಹೀಗೆ ಏನೇನೋ ಬರೆದಿರುತ್ತಿದ್ದ ಆ ಪತ್ರಗಳು ನನ್ನನ್ನು ಅಷ್ಟಾಗಿ ತಟ್ಟುತ್ತಿರಲಿಲ್ಲ.

ಈ ತರಹ ಒಂದಿಷ್ಟತ್ತು ಪತ್ರಗಳು ಬಂದಮೇಲೆ ನಮ್ಮ ಕೇರಿಗೆ ಬರುತ್ತಿದ್ದ ಅಂಚೆ ಪೇದೆಯು ಪರಿಚಯವಾಗಿ ಆತನ ಜೊತೆ ಒಂದಿಷ್ಟು ಸಲುಗೆಯನ್ನು ಬೆಳೆಸಿಕೊಂಡಿದ್ದೆ. ಅದೊಂದು ದಿನ ಶಾಲೆಯಿಂದ ಮನೆಗೆ ಬಂದಾಗ ಅದೇ ಬೆಂಗಳೂರಿನ ಚರ್ಚ್‌ನ ಪತ್ರ ಬಂದು ಅದನ್ನು ತೆರೆದು ನೋಡಿದೆ. 'ನೀವು ಆ ತಂದೆಯಾದ ಯಹೋವನ ಸಾಕ್ಷಿಗಳನ್ನು ಕಾಣಲು ಇಚ್ಛಿಸುತ್ತೀರಾ? ಹಾಗಿದ್ದರೆ ನಮಗೆ ಪತ್ರ ಬರೆಯಿರಿ' ಎಂದು ಆ ಪತ್ರದ ಹೊಟ್ಟೆಯೊಳಗೆ ದಪ್ಪ ಅಕ್ಷರದಲ್ಲಿ ಪ್ರಿಂಟು ಮಾಡಿ ಕಳಿಸಲಾಗಿತ್ತು. ನಾನು ಕ್ಷಣ ಕೂಡ ತಡ ಮಾಡದೆ 'ಹೌದು, ನಾನು ಯಹೋವ ದೇವರ ಸಾಕ್ಷಿಗಳನ್ನು ಕಾಣಲು ಉತ್ಸುಕನಾಗಿದ್ದೇನೆ. ದಯಮಾಡಿ ಅವರನ್ನು ಭೇಟಿಯಾಗುವಂತೆ ಮಾಡಿ' ಎಂದು ತಕ್ಷಣವೇ ಪತ್ರವೊಂದು ಬರೆದು ಕಳಿಸಿದ್ದೆ.

ಡಿಸೆಂಬರ್ ಚಳಿ ನಮ್ಮ ಕೇರಿಯನ್ನು ತುಂಬಿಕೊಳ್ಳುವುದರಲ್ಲಿತ್ತು. ನನಗೆ ಬರುವ ಪತ್ರ, ಬೈಬಲ್ ಪುಸ್ತಕಗಳ ಬಗ್ಗೆ ನನ್ನ ಮನೆಯವರನ್ನು ಒಳಗೊಂಡಂತೆ, ನಮ್ಮ ಕೇರಿಯ ಜನಕ್ಕೂ ಬರಬರುತ್ತಾ ಅಂಥ ಆಸಕ್ತಿ ಉಳಿಯಲಿಲ್ಲ. ಆದರೆ ಅವತ್ತೊಂದು ದಿನ ನಾನು ಶಾಲೆಯಲ್ಲಿರುವಾಗ ನಮ್ಮ ಮನೆಯ ಮುಂದೆ ಸಿಮೆಂಟ್ ಕಲರಿನ ಜೀಪೊಂದು ಬಂದು ನಿಂತಿತು. ಜೀಪಿನಿಂದ ಮೂರ್ನಾಲ್ಕು ಜನ ಇಳಿದು ಬಂದು ನನ್ನನ್ನು ವಿಚಾರಿಸುತ್ತಿದ್ದಾರೆಂದೂ, ಅವರೆಲ್ಲ ಬೆಂಗಳೂರಿನ ಚರ್ಚೊಂದರಿಂದ ಬಂದಿದ್ದಾರೆಂದೂ ನನ್ನ ಅವ್ವ ಶಾಲೆಯ ಬಳಿಗೆ ಬಂದು ಒಂದೇ ಉಸಿರಿನಲ್ಲಿ ಹೇಳಿ ನನ್ನನ್ನು ಶಾಲೆಯಿಂದ ಮನೆಗೆ ಕರೆದೊಯ್ದಿದ್ದಳು. ನಾನು ಹೇಳಿಕೊಳ್ಳಲಾಗದ ಸಂಕಟದಲ್ಲಿ ಸಿಕ್ಕಿ ನರಳುತ್ತಿದ್ದೆ. ಯಾಕಾದರೂ ಈ ಪತ್ರ ಸಹವಾಸಕ್ಕೆ ಕೈ ಹಾಕಿದೆನೋ ಎಂದು ನನ್ನನ್ನು ನಾನೇ ಶಪಿಸಿಕೊಳ್ಳಲು ಶುರು ಮಾಡಿದೆ. ಮನೆಗೆ ತಲುಪುವಷ್ಟರಲ್ಲಿ ಜೀಪಿನ ಸುತ್ತ ನಮ್ಮ ಕೇರಿಯ ಜನ ತುಂಬಿಕೊಂಡಿದ್ದರು. ಆ ಕ್ಷಣ ನನಗೆ ಎಲ್ಲಿಯಾದರೂ ಓಡಿ ಹೋಗಬೇಕೆನ್ನಿಸಿತು.

ಜೀಪಿನೊಳಗಿನ ಜನ ನನ್ನನ್ನು ಕಂಡು ಪತ್ರ ಬರೆದಿದ್ದು ನಾನೇ ಅನ್ನುವುದನ್ನು ಖಚಿತಪಡಿಸಿಕೊಂಡು ಇನ್ನೂ ಪ್ರೈಮರಿ ಶಾಲೆಯನ್ನು ದಾಟದ ನನ್ನ ವಯಸ್ಸು, ದೇಹ ರಚನೆ, ಮನೆಯ ಸ್ಥಿತಿಗತಿಗಳನ್ನು ಕಂಡು ಕೊಂಚ ನಿರಾಶರಾದಂತೆ ಕಂಡರು. ಅವರು ಎಷ್ಟು ಬೇಗ ನಮ್ಮ ಮನೆಯಿಂದ ಜಾಗ ಖಾಲಿ ಮಾಡುವರೋ ಅನ್ನಿಸಿ ಒಳಗೊಳಗೆ ನಾನು ಧಾವಂತಕ್ಕೀಡಾಗುತ್ತಿದ್ದೆ. ಕಡೆಗೆ ಅವರು ನನ್ನೊಂದಿಗೆ, ನಮ್ಮ ಮನೆಯ ಜನರೊಂದಿಗೆ ಏನೇನೋ ಮಾತನಾಡಿ ಹೊರಡುವಾಗ ಇನ್ನೊಂದಷ್ಟು ಯೇಸುವಿಗೆ ಸಂಬಂಧಿಸಿದ ಪುಸ್ತಕಗಳನ್ನು ಕೊಟ್ಟ 'ಮಗು ನಿನಗೆ ಆದಷ್ಟು ಬೇಗ ಆ ತಂದೆಯ ಮಗನಾದ ಯೇಸುವಿನ ಪವಿತ್ರ ಕೈಗಳಿಂದ ದೀಕ್ಷಾಸ್ನಾನ ಮಾಡಿಸಲಾಗುವುದು. ಮೇಲಿರುವ ತಂದೆ ಯಹೋವ ನಿನ್ನ ಮೇಲೆ ವಿಶೇಷ ಪ್ರೀತಿ ಇಟ್ಟುಕೊಂಡಿರುವರು. ನಿನಗೆ ಇಷ್ಟರಲ್ಲೇ ಯೇಸು ಕ್ರಿಸ್ತನ ನಿಜವಾದ ದರ್ಶನವಾಗಲಿದೆ' ಎಂದು ಏನೇನೋ ಹೇಳಿ ಜಾಗ ಖಾಲಿ ಮಾಡಿದರು. ಅವರು ಹೋದ ಕೂಡಲೇ ಕೇರಿಯ ಜನ ನನ್ನ ಸುತ್ತ ಮುತ್ತಿಕೊಂಡು ಬಾಯಿಗೆ ಬಂದ ಪ್ರಶ್ನೆಗಳನ್ನು ನನ್ನ ಮೇಲೆ ಎಸೆಯುತ್ತಾ ನನ್ನನ್ನು ಇನ್ನಷ್ಟು ವಿಚಿತ್ರವಾಗಿ ನೋಡಲು ಶುರು ಮಾಡಿದ್ದರು. ನನಗೆ ಇದರಿಂದೆಲ್ಲ ಬಿಡುಗಡೆ ಸಿಕ್ಕರೆ ಸಾಕೆನಿಸಿ ಆ ಚರ್ಚಿನ ಜನಕ್ಕೆ ಒಂದು ಪತ್ರ ಬರೆದು ಅವರ ಪತ್ರ, ಯೇಸುವಿನ ಪುಸ್ತಕಗಳು, ದೀಕ್ಷಾ ಸ್ನಾನ ಎಲ್ಲದಕ್ಕೂ ದೊಡ್ಡ ಸಲಾಮು ಹೊಡೆದಿದ್ದೆ. ಆ ಮೇಲೆ ಆ ಚರ್ಚಿನಿಂದ ಪತ್ರಗಳು, ಪುಸ್ತಕಗಳು ಬರುವುದು ನಿಂತು ಹೋಗಿ ನನ್ನ ಮನಸ್ಸು ಸ್ವಲ್ಪ ಹಗುರವಾಯಿತು.

ನಾನಾಗ ಮನೆಯ ಹತ್ತಿರದಲ್ಲೇ ಇದ್ದ ಶಾಲೆಯೊಂದರಲ್ಲಿ ಆರನೇ ತರಗತಿಯಲ್ಲಿ ಓದುತ್ತಿದ್ದೆ. ಪ್ರತಿ ಶುಕ್ರವಾರ ಬಂತೆಂದರೆ ಸಾಕು, ನಮ್ಮ ತರಗತಿಯ ಹುಡುಗರೆಲ್ಲ ನಾಲ್ಕಾಣೆ, ಎಂಟಾಣೆ ಹಾಕಿ ಸರಸ್ವತಿ ಪೂಜೆ ಮಾಡುವುದು ರೂಢಿಯಾಗಿತ್ತು. ಅವತ್ತೊಂದು ದಿನ ಶುಕ್ರವಾರ ನನ್ನ ಮಿತ್ರ ಅಂಜನ್ ಕುಮಾರ ಈ ಸಲದ ಸರಸ್ವತಿ ಪೂಜೆಗೆ ಯಾರೂ ದುಡ್ಡು ಹಾಕುವುದು ಬೇಡ, ಪೂಜೆ, ಪ್ರಸಾದಕ್ಕೆ ತಗಲುವ ಖರ್ಚನ್ನೆಲ್ಲ ನಾನೊಬ್ಬನೇ ಭರಿಸುತ್ತೇನೆ ಎಂದು ಹೇಳಿ ತನ್ನ ಚೆಡ್ಡಿ ಜೇಬಿನಿಂದ ನೂರು ರೂಪಾಯಿ ನೋಟನ್ನು ತೋರಿಸಿ ನಾನು ಚೆಡ್ಡಿಯಲ್ಲೇ ಒದ್ದೆ ಮಾಡಿಕೊಳ್ಳುವಂತೆ ಮಾಡಿದ್ದ. ತೀರಾ ಅಪರೂಪಕ್ಕೊಮ್ಮೆ

ನನ್ನ ತಂದೆಯ ಬಳಿ ನೂರು ರೂಪಾಯಿ ನೋಟನ್ನು ನೋಡುತ್ತಿದ್ದ ನನಗೆ ನನ್ನದೇ ವಯಸ್ಸಿನ ಹುಡುಗನೊಬ್ಬ ದಿಢೀರ್ ನೂರರ ನೋಟೊಂದನ್ನು ತೋರಿಸಿದರೆ ಹೇಗಾಗಿರ ಬೇಡ? ನಾವೊಂದಿಷ್ಟು ಜನ ಗೆಳೆಯರು ಅಂಜುತ್ತಲೇ ಸಹಪಾಠಿ ಅಂಜನ್‌ಕುಮಾರನಿಂದ ನೂರು ರೂಪಾಯಿ ಇಸಿದುಕೊಂಡು ದೇವರ ಪೂಜೆ ಸಾಮಾನಿನ ಜೊತೆಗೆ, ಈ ಹಿಂದೆ ಎಂದೂ ತರದಿದ್ದ ಪ್ರಸಾದಕ್ಕೆ ಬೇಕಾದ ಹಣ್ಣು ಹಂಪಲನ್ನೆಲ್ಲ ದೊಡ್ಡ ಚೀಲದಲ್ಲಿ ತುಂಬಿಕೊಂಡು ಬಂದು ಸರಸ್ವತಿ ಪೂಜೆ ಮಾಡಲು ಸಿದ್ಧರಾದೆವು.

ಪೂಜೆಯೆಲ್ಲ ಮುಗಿದು ತರಗತಿಯಲ್ಲಿದ್ದ ಎಲ್ಲ ಸಹಪಾಠಿಗಳಿಗೂ ಇನ್ನೇನು ಪ್ರಸಾದ ಹಂಚಬೇಕು ಅನ್ನುವಷ್ಟರಲ್ಲಿ ನನ್ನ ಗೆಳೆಯ ಅಂಜನ್‌ಕುಮಾರನ ಮನೆಯ ಜನರೆಲ್ಲ ನಮ್ಮ ಹೆಡ್ ಮಾಸ್ಟರ್ ಜೊತೆ ಒಬ್ಬೊಬ್ಬರಾಗಿ ನಮ್ಮ ತರಗತಿಗೆ ಬರಲು ಶುರು ಮಾಡಿದರು. ಅಂಜನ್ ಕುಮಾರ್ ಮನೆಯಲ್ಲಿ ತನ್ನ ತಂದೆಯ ಜೇಬಿನಿಂದ ನೂರು ರೂಪಾಯಿ ನೋಟೊಂದನ್ನು ಕದ್ದು, ಅದನ್ನು ನಮ್ಮ ಕೈಗೆ ಕೊಟ್ಟು ನಾವು ಸರಸ್ವತಿ ಪೂಜೆಯ ಹೆಸರಿನಲ್ಲಿ ಅದನ್ನು ಸಂಪೂರ್ಣವಾಗಿ ಗುಳುಂ ಮಾಡಿದ್ದೆವು. ಅಂಜನ್‌ಕುಮಾರನ ಜೊತೆಗೆ ನಾವೊಂದು ನಾಲ್ಕೈದು ಜನರ ಮೇಲೆ ಹೆಡ್ ಮಾಸ್ಟರ್ ಕೊಠಡಿಯಲ್ಲಿ ಉಗ್ರರೀತಿಯ ತನಿಖೆಗಳು ಆರಂಭವಾದವು. ಅಂಜನ್‌ಕುಮಾರನ ತಾಯಿ ನಮಗೆಲ್ಲ ಸಮ ನಾಲ್ಕು ಬಾರಿಸಿ ಇನ್ನು ಮುಂದೆ ಈ ತರಹ ತಪ್ಪು ಮಾಡದಂತೆ ನೋಡಿಕೊಳ್ಳಬೇಕೆಂದು ಹೆಡ್ ಮಾಸ್ಟರರ ಮೇಲೆ ಒತ್ತಡ ಹೇರುತ್ತಿದ್ದರು. ಅಂಜನ್‌ಕುಮಾರ ಮಾತ್ರ ಅವತ್ತು ದೊಡ್ಡ ಅವಮಾನಕ್ಕೆ ತುತ್ತಾದವನಂತೆ ತಲೆ ಬಗ್ಗಿಸಿದವನು ಮೇಲೆತ್ತಲೇ ಇಲ್ಲ.

ನಾವು ಏಳನೇ ತರಗತಿಯಲ್ಲಿರಬೇಕಾದರೆ ಸಾವಿತ್ರಮ್ಮ ಟೀಚರ್ ನಮಗೆ ಕನ್ನಡ ಸಾಹಿತ್ಯದ ಪಾಠಗಳನ್ನು ಹೇಳಿಕೊಡುತ್ತಿದ್ದರು. ಅವರ ಕ್ಲಾಸೆಂದರೆ ನಮಗೆ ಕ್ರಿಕೆಟ್ ಮ್ಯಾಚಿನಷ್ಟೆ ಅಚ್ಚುಮೆಚ್ಚಾಗಿತ್ತು. ಪಠ್ಯದ ಜೊತೆಗೆ ದಿನಕ್ಕೊಂದು ಕತೆ ಹೇಳುತ್ತಿದ್ದ ಅವರು ಯಾವತ್ತಿಗೂ ಬತ್ತದ ಕತೆಗಳ ಕಣಜವನ್ನೇ ತಮ್ಮ ಗಂಟಲಲ್ಲಿ ಸಿಕ್ಕಿಸಿಕೊಂಡಿದ್ದಾರೇನೋ ಅನ್ನಿಸುತ್ತಿತ್ತು. ನನಗಾಗ ನಮಗೆಲ್ಲ ಒಂದೊಂದು ಜಾತಿ ಇದೆ ಎಂಬ ಕಲ್ಪನೆ ಇರಲಿಲ್ಲ. ಅಥವಾ ಈ ಜಾತಿಗೀತಿಗಳ ಕಲ್ಮಶ ಆಗ ನಮ್ಮ ಮೇಲೆ ಅಷ್ಟಾಗಿ ದಾಳಿ ಮಾಡಿರಲಿಲ್ಲವೆಂದು ಕಾಣುತ್ತದೆ. ಅದು ಹೇಗೋ ಏನೋ ಕೆಲವು ಹುಡುಗರು ಸಾವಿತ್ರಮ್ಮ ಟೀಚರ್ ಬ್ರಾಹ್ಮಣರು ಎಂದು ಕಂಡುಹಿಡಿದು ನಮಗೆಲ್ಲ ಹೇಳುತ್ತಿದ್ದರು. ನಮ್ಮ ತರಗತಿಯಲ್ಲಿ ಸರಸ್ವತಿ ಪೂಜೆ ಮಾಡಲಿಕ್ಕೆ ಅವರಿಗೆ ಇಡೀ ಒಂದು ದಿನ ಸಾಕಾಗುತ್ತಿರಲಿಲ್ಲ.

ಸಾವಿತ್ರಮ್ಮ ಟೀಚರ್ ಮಧ್ಯಾಹ್ನದ ಊಟಕ್ಕೆ ಮನೆಯಿಂದ ಬಾಕ್ಸ್ ತರುತ್ತಿದ್ದರು. ನಾವೊಂದಿಷ್ಟು ಜನ ಹುಡುಗರು ಶಾಲೆಯಲ್ಲಿ ಉಚಿತವಾಗಿ ಕೊಡುತ್ತಿದ್ದ ಅಮೆರಿಕನ್ ಗೋಧಿಯ ಉಪ್ಪಿಟ್ಟಿನಲ್ಲಿ ಸ್ವರ್ಗವನ್ನು ಕಾಣುತ್ತಿದ್ದೆವು. ಅದೊಂದು ದಿನ ಮಧ್ಯಾಹ್ನದ ಊಟಕ್ಕೆ ಬಾಕ್ಸ್ ತರದಿದ್ದ ಸಾವಿತ್ರಮ್ಮ ಟೀಚರ್ ನನ್ನ ಮಿತ್ರ ನವೀನ್ ಕೈಗೆ ಕಾಸು ಕೊಟ್ಟು 'ಶ್ರೀ ರಾಘವೇಂದ್ರ ದರ್ಶಿನಿ'ಯಲ್ಲೇ ಊಟ ತರಬೇಕೆಂದು ಹೇಳಿ ಕಳಿಸಿದ್ದರು. ಆ ಹೋಟೆಲ್‌ನಲ್ಲಿ ಊಟ ಸಿಗದ ಕಾರಣ ನನ್ನ ಮಿತ್ರ ನವೀನ್ ತನಗೆ ಗೊತ್ತಿದ್ದ ಮಿಲ್ಟ್ರಿ ಹೋಟೆಲ್ ಒಂದರಲ್ಲಿ ಊಟ ಕಟ್ಟಿಸಿಕೊಂಡು ಬಂದು ಸಾವಿತ್ರಮ್ಮ ಟೀಚರ್ ಕೈಗೆ ಕೊಟ್ಟು ತರಗತಿಗೆ ಬಂದ. ಊಟದ ಪೊಟ್ಟಣ ಬಿಚ್ಚಿದವರೇ ಶಾಕ್ ಆದ ಸಾವಿತ್ರಮ್ಮ ಟೀಚರ್ ನಮ್ಮ ತರಗತಿಗೆ ಬಂದು ನವೀನನನ್ನು ಎಬ್ಬಿಸಿಕೊಂಡು ಹೋಗಿ ಅವನು ತೆರೆದುಕೊಟ್ಟ ಊಟವನ್ನು ಅವನೇ ಉಣ್ಣುವಂತೆ ಮಾಡಿ, ಅವನ ಮೇಲೆ ಎಲ್ಲರೆದುರೇ ಸಹಸ್ರನಾಮಾರ್ಚನೆಯನ್ನು ಮಾಡಿದ್ದರು. ಅಷ್ಟು ದಿನ ನಾವೆಲ್ಲ ಪ್ರೀತಿಯಿಂದ ಕಾಣುತ್ತಿದ್ದ ಸಾವಿತ್ರಮ್ಮ ಟೀಚರ್ ಅವತ್ತು ಮಾತ್ರ ನನಗೆ ಥೇಟ್ ಮಹಿಷಾಸುರಿಯಂತೆ ಕಂಡಿದ್ದರು. ಅದೇ ವರ್ಷ ಅವರು ನಿವೃತ್ತಿ ಹೊಂದಿ ಮನೆಗೆ ಹೋಗುವಾಗ ನನಗಂಥ ದುಃಖವಾಗದೆ ಇದ್ದರೂ, ಅವತ್ತು ಅವರೆದುರು ಏನೋ ಕಳೆದು ಕೊಂಡವನಂತೆ ಕೃತಕವಾಗಿ ವರ್ತಿಸಿದ್ದೆ. ಅವರು ನಮಗೆಲ್ಲ ವಿದಾಯ ಹೇಳುವಾಗ ಬಿಕ್ಕಿ ಬಿಕ್ಕಿ ಅಳುತ್ತಿದ್ದರು.

ನಾನು ಬಾಲ್ಯದ ಪ್ರಾಥಮಿಕ ಶಾಲೆಯನ್ನು ದಾಟಿ ಹೈಸ್ಕೂಲಿಗೆ ಬಂದಾಗ ಏಕ್‌ದಂ ಚಡ್ಡಿಯಿಂದ ಪ್ಯಾಂಟಿಗೆ ಜಿಗಿದಿದ್ದೆ. ಮೊಟ್ಟಮೊದಲ ಹಲ್ಲು ಬಿದ್ದಾಗ, ನಾನು ಮೊದಲಬಾರಿಗೆ ಬೂಟುಗಳನ್ನು ಧರಿಸಿದಾಗ ಅನುಭವಿಸಿದ ಪುಳಕವನ್ನೇ ನಾನು ಹೈಸ್ಕೂಲು ತಲುಪಿ ಪ್ಯಾಂಟು ತೊಟ್ಟುಕೊಂಡಾಗಲೂ ಅನುಭವಿಸಿದೆ. ನಾನು ಬಾಲ್ಯದಲ್ಲಿ ಸಾಕಿದ ಪಾರಿವಾಳ, ಕೋಳಿ, ನಾಯಿ ಮೀನುಗಳಲ್ಲಿ ನನ್ನನ್ನು ಮನುಷ್ಯರ ಕ್ಷುದ್ರ ಜಗತ್ತಿನಿಂದ ಸಾಕಷ್ಟು ದೂರ ಕೊಂಡೊಯ್ದು ಸುಖದ ಅಲೆಯಲ್ಲಿ ತೇಲುವಂತೆ ಮಾಡುತ್ತಿದ್ದವು. ಆ ಪಾರಿವಾಳಗಳ ಸಲುವಾಗಿ ನಾನು ಮನೆಯವರೊಂದಿಗೆ ನಿತ್ಯ ಒಂದಲ್ಲ ಒಂದು ವರಾತಕ್ಕೆ ಸಿಕ್ಕಿ ನರಳುತ್ತಿದ್ದೆ. ಇದೇ ಪಾರಿವಾಳಗಳ ಸಲುವಾಗಿ ನಾನು ಆಗಾಗ ಸ್ನೇಹಿತರೊಂದಿಗೆ ಕದನಕ್ಕೂ ಬೀಳುತ್ತಿದ್ದೆ.

ಭಾನುವಾರ ಬಂತೆಂದರೆ ನಮಗೆ ಯಾವುದೋ ಜೈಲಿನಿಂದ ಆಗಷ್ಟೇ ಬಿಡುಗಡೆಯಾಗಿ ಬಂದ ಸಂತೋಷ ತುಂಬಿರುತ್ತಿತ್ತು. ಮೀನು ಹಿಡಿಯಲು ಹತ್ತಿರದಲ್ಲೇ ಹರಿಯುತ್ತಿದ್ದ ಅರ್ಕಾವತಿ ನದಿಗೆ ನಾವು ಗೆಳೆಯರೆಲ್ಲ ದೂರದ ಊರಿಗೆ ಪ್ರವಾಸಕ್ಕೆ ಹೋದವರಂತೆ ಹೋಗುತ್ತಿದ್ದೆವು. ಒಂದು ಭಾನುವಾರ ನಾವು ಗೆಳೆಯರೆಲ್ಲ ಮೀನು ಹಿಡಿಯುವಾಗ ನಮ್ಮ ಗುಂಪಿನಲ್ಲಿದ್ದ 'ತಿಬ್ಬೆ' ಅನ್ನುವ ಮಿತ್ರನೊಬ್ಬನ ಚಡ್ಡಿ ಅದು ಹೇಗೋ ಅವನ ಸೊಂಟದಿಂದ ಜಿಚ್ಚಿಕೊಂಡು ಆ ನದಿಯಲ್ಲಿ ಹರಿದು ಎಲ್ಲೋ ಮಾಯವಾಗಿತ್ತು. ಕಾಣೆಯಾದ ಚಡ್ಡಿಗಾಗಿ ತಿಬ್ಬೆ ದೊಡ್ಡ ದನಿಯಲ್ಲಿ ಅಳಲು ಶುರುಮಾಡಿದ್ದ. ಚಡ್ಡಿ ಇಲ್ಲದೆ ನಾನು ಮನೆಗೆ ಹೋಗುವುದಾದರೂ ಹೇಗೆ? ಈ ಸ್ಥಿತಿಯಲ್ಲಿ ನನ್ನ ಮನೆಯವರು ನನ್ನನ್ನು ಕಂಡರೆ ಕೊಂದೇ ಬಿಡುತ್ತಾರೆಂದು ಇನ್ನೂ ಜೋರು ದನಿಯಲ್ಲಿ ಹೊಸ ಹೊಸ ದನಿ ತೆಗೆದು ಅಳು ಹೆಚ್ಚು ಮಾಡಿದ. ನನಗೂ ಬೇರೆ ದಿಕ್ಕು ತೋಚದೆ ಸುಮ್ಮನೆ ಅವನೊಂದಿಗೆ ಅಳಬೇಕೆನಿಸುತ್ತಿತ್ತು. ತಿಬ್ಬೆಯ ತಾರಕ ಸ್ವರದ ಅಳುವನ್ನು ಕಂಡು ಅಲ್ಲೇ ಯಾರದೋ ಮನೆಯವರು ಒಂದು ದೊಡ್ಡ ಸೈಜಿನ ಚಡ್ಡಿಯೊಂದನ್ನು ತಿಬ್ಬೆಗೆ ತಂದು ಕೊಟ್ಟರು. ನಾವೆಲ್ಲ ದೆವ್ವದ ಕೈಯಿಂದ ತಪ್ಪಿಸಿಕೊಂಡವರಂತೆ ಮನೆಯವರೆಗೂ ದಿಕ್ಕಾಪಾಲಾಗಿ ಓಡಲು ಶುರು ಮಾಡಿದೆವು. ಮರುದಿನ ಬೆಳಗ್ಗೆ ತಿಬ್ಬೆ ತನಗೆ ಏನೂ ಆಗೇ ಇಲ್ಲ ಅನ್ನುವಂತೆ ನಮ್ಮೊಂದಿಗೆ ಬಹಳ ಹೊತ್ತು ಕ್ರಿಕೆಟ್ ಆಡಿದ್ದ.

ಕಡೆಯದಾಗಿ ನಾನು ಬಾಲ್ಯದಲ್ಲಿ ನೋಡಿದ 'ಮೇರಾ ನಾಮ್ ಜೋಕರ್' ಚಿತ್ರದಲ್ಲಿ ರಾಜ್‌ಕಪೂರ್ ಅಕಸ್ಮಾತ್ ಸರ್ಕಸ್ ಕಂಪನಿಯೊಂದರ ಒಳ ಹೋಗಿ ತಾನೇ ರಷ್ಯಾದಿಂದ ಬಂದಿರುವ ರಿಂಗ್ ಮಾಸ್ಟರ್ ಇವಾನ್ ರಾಜೋಸ್ಕಿ ಎಂದು ಸುಳ್ಳು ಹೇಳಿ ಆ ಸರ್ಕಸ್ಸಿನಲ್ಲಿ ಕೆಲಸ ಗಿಟ್ಟಿಸಿಕೊಳ್ಳುತ್ತಾನೆ. ಆ ಸರ್ಕಸ್ಸಿನವರು ರಾಜಕಪೂರನಿಗೆ 'ನಿನ್ನ ಸರದಿ ಬಂದಿದೆ. ನೀನೀಗ ಹುಲಿಯ ಬೋನಿಗೆ ನುಗ್ಗಿ ನಿನ್ನ ಕಲಾತ್ಮಕ ಆಟಗಳನ್ನು ಪ್ರದರ್ಶಿಸಬೇಕೆಂದು' ಆದೇಶ ಮಾಡುತ್ತಾರೆ. ತಾನು ನಿಂತ ನೆಲದಲ್ಲಿ ಕುಸಿದು ಹೋಗುವಂತೆ ಕಾಣುವ ರಾಜ್‌ಕಪೂರ್ ತಕ್ಷಣ ಏನನ್ನೋ ನೆನಸಿಕೊಂಡು ಅಲ್ಲೇ ಹೋಗುತ್ತಿದ್ದ ಸರ್ಕಸ್ ಕಂಪನಿಯ ಕಾರ್ಮಿಕನೊಬ್ಬನನ್ನು ಕರೆದು 'ನೋಡು ತಮ್ಮ ಇದರಲ್ಲಿ ಇನ್ನೂರು ರೂಪಾಯಿ ಮತ್ತು ನನ್ನ ತಾಯಿಯ ಅಡ್ರೆಸ್ ಇದೆ. ದಯವಿಟ್ಟು ಇದನ್ನು ಪೋಸ್ಟ್ ಮಾಡಿ ನನ್ನ ತಾಯಿಗೆ ತಲುಪುವಂತೆ ಮಾಡು. ನಿನ್ನ ಋಣ ಮರೆಯೋದಿಲ್ಲ' ಅಂತ ಹೇಳಿ ಅವನು ಹುಲಿ ಬೋನಿಗೆ ನುಗ್ಗುತ್ತಾನೆ.

ಅದೇ ಬಾಲ್ಯದ ದಿನಗಳಲ್ಲಿ ನಾನು ಶಾಲೆಯಲ್ಲಿ ನನ್ನ ಸಹಪಾಠಿಗಳು ಮತ್ತು ಗುರುಗಳೊಂದಿಗೆ ನೋಡಿದ 'ಬೆಟ್ಟದ ಹೂವು' ಎಂಬ ಕನ್ನಡ ಚಲನಚಿತ್ರ ಕೂಡ ನನ್ನಲ್ಲಿ ತೀವ್ರ ತರಹದ ಪರಿಣಾಮದ ಗೆರೆಗಳನ್ನು ಮೂಡಿಸಿದೆ. ಆ ಚಿತ್ರದಲ್ಲಿ ಹುಡುಗನೊಬ್ಬ ಅಂಗಡಿಯೊಂದರಲ್ಲಿ ನೇತು ಹಾಕಿದ್ದ ರಾಮಾಯಣ ಪುಸ್ತಕವನ್ನು ಕೊಂಡುಕೊಳ್ಳಲು ಪೈಸೆ ಪೈಸೆ ಸೇರಿಸಿ ಹಣ ಕೂಡಿ ಹಾಕುತ್ತಿರುತ್ತಾನೆ. ತಾನು ಕೂಡಿಟ್ಟ ದುಡ್ಡು ಹತ್ತು ರೂಪಾಯಿ ಆದ ದಿನ ರಾಮಾಯಣ ಪುಸ್ತಕವನ್ನು ಕೊಳ್ಳಲೇಬೇಕು ಅನ್ನುವ ದೊಡ್ಡ ಬಯಕೆ ಆ ಹುಡುಗನಲ್ಲಿರುತ್ತದೆ. ತಾನು ಪ್ರತಿದಿನ ಸೇರಿಸಿ ಕೂಡಿಟ್ಟ ದುಡ್ಡು ಹತ್ತು ರೂಪಾಯಿ ಆದಾಗ ಹುಡುಗ ಒಂದೇ ಉಸಿರಿಗೆ ಪುಸ್ತಕದ ಅಂಗಡಿಯತ್ತ ಓಡುತ್ತಾನೆ. ಆ ರಾಮಾಯಣ ಪುಸ್ತಕ ಅವನಿಗಾಗಿ ಕಾದು ಕುಳಿತಿರುವಂತೆ ಒಂದೆಡೆ ನೇತಾಡುತ್ತಿರುತ್ತದೆ. ಇನ್ನೇನು ಆ ಪುಸ್ತಕಕೊಳ್ಳಬೇಕೆಂದು ತನ್ನ ಜೇಬಿನಿಂದ

ದುಡ್ಡು ತೆಗೆಯುವ ಹುಡುಗನಿಗೆ ರಾತ್ರಿ ಹೊದ್ದುಕೊಳ್ಳಲು ಕಂಬಳಿಯಿಲ್ಲದೆ ಚಳಿಯಲ್ಲಿ ನಡುಗುತ್ತಾ ಮಲಗಿದ್ದ ತನ್ನ ತಾಯಿಯ ಚಿತ್ರ ಕಣ್ಣ ಮುಂದೆ ಬಂದು ನಿಲ್ಲುತ್ತದೆ. ಆ ಹುಡುಗ ಜೇಬಿನಿಂದ ತೆಗೆದ ದುಡ್ಡನ್ನು ಅಂಗಡಿಯವನಿಗೆ ಕೊಡುತ್ತಾನೆ. ಅಂಗಡಿಯವನು ರಾಮಾಯಣ ಪುಸ್ತಕವನ್ನು ಕೈಗೆತ್ತಿಕೊಂಡು ಆ ಹುಡುಗನಿಗೆ ಕೊಡಲು ಮುಂದಾಗುತ್ತಾನೆ. ಆ ಹುಡುಗ ಮಾತ್ರ ಪುಸ್ತಕವನ್ನು ಪಕ್ಕಕ್ಕಿಟ್ಟು ತನಗೆ ಅಲ್ಲೇ ಇದ್ದ ಕಂಬಳಿ ಬೇಕೆಂದು ಅದನ್ನು ಎತ್ತಿಕೊಂಡು ಮನೆಯತ್ತ ಓಡುತ್ತಾನೆ.

ನಾನು ಬಾಲ್ಯದಲ್ಲಿ ನೋಡಿದ 'ಮೇರಾ ನಾಮ್ ಜೋಕರ್' ಮತ್ತು 'ಬೆಟ್ಟದ ಹೂವು' ನನ್ನಲ್ಲಿ ಆಗಾಗ ತೀವ್ರ ಅನ್ನಿಸುವಷ್ಟು ದಿಗಿಲು ಹುಟ್ಟಿಸುತ್ತದೆ. ಸಾಯುತ್ತೇನೆಂಬ ಭಯದಲ್ಲಿರುವ ರಾಜ್‌ಕಪೂರನಿಗೆ ತನ್ನಲ್ಲಿದ್ದ ದುಡ್ಡನ್ನು ಹೇಗಾದರೂ ಮಾಡಿ ತನ್ನ ತಾಯಿಗೆ ತಲುಪಿಸಲೇಬೇಕೆನ್ನುವ ಧಾವಂತ ಹುಟ್ಟಿಕೊಂಡದ್ದಾದರೂ ಹೇಗೆ? 'ಬೆಟ್ಟದ ಹೂವಿ'ನ ಆ ಹುಡುಗನಿಗೆ ರಾಮಾಯಣ ಪುಸ್ತಕಕ್ಕಿಂತ ತನ್ನ ತಾಯಿಗೆ ಕಂಬಳಿ ತೆಗೆದುಕೊಂಡು ಹೋಗಬೇಕೆಂದು ಪ್ರೇರೇಪಿಸಿದ್ದಾದರೂ ಏನು? ಈ ಇಬ್ಬರ ಹಿಂದಿನ ಮಾನವೀಯ ಒಳತೋಟಗಳು ನನ್ನನ್ನು ಪದೇಪದೇ ಕಾಡುತ್ತವೆ. ನನ್ನ ಬಾಲ್ಯದ ನೆನಪುಗಳನ್ನು ನಾನು ತೆರೆದುಕೊಂಡಾಗ ಕಪ್ಪು-ಬಿಳುಪಿನ ಚಿತ್ರದಂತೆ ನಾನು ಯಾವತ್ತೋ ತುಳಿದ ಮರೆತಿರಬಹುದಾದ ಹೆಜ್ಜೆಯ ಧೂಳು ಪಟಕ್ಕನೆ ನನ್ನ ಕಣ್ಣಮುಂದೆ ಬಂದು ನಿಲ್ಲುತ್ತದೆ. ಮತ್ತೆ ಆ ದಿನಗಳಿಗೆ ಮರಳಿ ಹೋಗಲಾರೆ ಎಂಬ ದುಃಖವೂ ನನ್ನ ಸುತ್ತ ಮಡುಗಟ್ಟುತ್ತದೆ.

ನಾನು ಬೆಳೆದು ದೊಡ್ಡವನಾಗಿ ಹೆಚ್ಚಿನ ಓದಿಗೆ ಅನಿವಾರ್ಯವಾಗಿ ಬೆಂಗಳೂರಿಗೆ ಬಂದಾಗ ಇಲ್ಲಿನ ಅತಿಶಿಸ್ತಿನ ರಸ್ತೆಗಳನ್ನು ಕಂಡು ಬೆಚ್ಚಿ ಅಲ್ಲೆಲ್ಲ ತಬ್ಬಲಿಯಂತೆ ಒಬ್ಬನೇ ಓಡಾಡಿದೆ. ಹಾಸ್ಟೆಲ್‌ನಲ್ಲಿ ದೊರೆತ ಸಕಲ ಸವಲತ್ತುಗಳು ನನ್ನ ಬಾಲ್ಯದ ಬಡತನದ ನೆನಪುಗಳನ್ನು ನುಂಗಿ ಹಾಕಲಿಲ್ಲ. ಇವತ್ತಿಗೂ ದೊಡ್ಡ ಸೈಜಿನ ಮನೆಗಳಿರುವ ಬೆಂಗಳೂರಿನ ದೊಡ್ಡ ಬಡಾವಣೆಗಳಲ್ಲಿ ನಡೆದು ಹೋಗುವಾಗ ಯಾವುದೋ ಬೇರೊಂದು ಜಗತ್ತಿನ ನೆಲದಲ್ಲಿ ನಡೆದಾಡುತ್ತಿರುವಂತೆ ಪರಕೀಯ ಭಾವನೆ ನನ್ನನ್ನು ಮುತ್ತಿಕೊಳ್ಳುತ್ತದೆ. ತರಗತಿಗಳಲ್ಲಿ ಗೋಡೆಗಳಂತೆ ಬಂದು ನಿಂತು ಬರೀ ಸುಳ್ಳಿನ ನಪುಂಸಕ ಕಂತೆಗಳನ್ನು ಒದರಿ ಹೋಗುತ್ತಿದ್ದ ನನ್ನ ವಿಶ್ವವಿದ್ಯಾಲಯದ ಶಿಕ್ಷಕರ ಎಲ್ಲ ನೀಚತನದ ನಡುವೆಯೂ ನನಗೆ ಬಾಲ್ಯದಲ್ಲಿ ಗೋವಿನ ಹಾಡು, ಶಬರಿ ಪದ್ಯಗಳನ್ನು ನಿಷ್ಕಪಟವಾಗಿ ಹೇಳಿಕೊಟ್ಟ ಆ ಬಡ ಮೇಷ್ಟ್ರುಗಳು ಸದಾಕಾಲಕ್ಕೂ ನನ್ನೊಳಗೆ ಹಸಿರಾಗಿರುತ್ತಾರೆ.

ಜಾತಿ, ಧರ್ಮಗಳೇ ಗೊತ್ತಿಲ್ಲದೆ ಬೆಳೆಯುತ್ತಿದ್ದ ನನ್ನಂಥವರು ಕೂಡ ಉನ್ನತ ಶಿಕ್ಷಣ ಪಡೆಯುವ ಸಲುವಾಗಿ ಜಾತಿಯ ಬಿಲಗಳಲ್ಲಿ ಅಪಿತುಕೊಳ್ಳುವಂತಾಯಿತು. ನನ್ನಂಥವರನ್ನು ಧರ್ಮದ ಕಂಬಗಳಿಗೆ ಕಟ್ಟಿ ಬಲಿ ಹಾಕಬೇಕೆನ್ನುವಾಗ 'ಪ್ರೇಮ ಭಿಕ್ಷು' ಬುದ್ಧ ಎದೆಗಪ್ಪಿಕೊಂಡು ಆತುಕೊಳ್ಳುತ್ತಾನೆ. ನಾನು ಬಾಲ್ಯದಲ್ಲಿ ಓದಿದ ದೇವನೂರರ 'ಅಮಾಸ', ಬೆಸಗರಹಳ್ಳಿ ರಾಮಣ್ಣನವರ 'ಪ್ರಜಾಪ್ರಭುತ್ವ ಮತ್ತು ಮೂರು ಮಂಗಗಳು', ಕುಂ.ವೀ.ಯವರ 'ದೇವರ ಹಣ', ಮೊಗಳ್ಳಿ ಗಣೇಶರ 'ಬುಗುರಿ', ಲಂಕೇಶರ 'ಗುಣಮುಖ'ದ ಅಲಾವಿಖಾನ್....... ನನ್ನನ್ನು ಎಲ್ಲಿಂದೆಲ್ಲೆಲ್ಲಿಗೋ ದಾಟಿಸಿದ್ದಾರೆ. ಈಗ ನಾನು ಈ ಅಕ್ಷರಗಳ ತೋಟದಲ್ಲಿ ಸುಖಿ ಅಂದುಕೊಳ್ಳುವಾಗ ನನಗೆ ಬಾಲ್ಯದಲ್ಲಿ ಬೊಗಸೆ ತುಂಬ ಪ್ರೀತಿಯನ್ನು ಮೊಗೆದು ಕೊಟ್ಟ ನನ್ನ ಹುಟ್ಟೂರಿನ ಜನ ಈಗ ಜಾಗತೀಕರಣದ ಕೊಡಲಿ ಏಟಿಗೆ ಎಲ್ಲವನ್ನೂ ಕಳೆದುಕೊಂಡು ಸಾವಿಗಾಗಿ ಮಾತ್ರ ಕಾದಿರುವವರಂತೆ ಹೊಸ್ತಿಲ ಹಿಂದೆ ಬಾಗಿಲ ಮರೆಯಲ್ಲಿ ನಿಂತಿರುವುದು ನನ್ನಲ್ಲಿ ಆತಂಕ ಹುಟ್ಟಿಸುತ್ತದೆ.

ಸಂಚಯ ಸಾಹಿತ್ಯ ಸ್ಪರ್ಧೆ ಬಹುಮಾನಿತ ಲೇಖನ.

ನಂ. ೯, ಎಂ.ಐ.ಜಿ., ಕೆ.ಎಚ್.ಬಿ. ಬಡಾವಣೆ, ಐಜೂರು ನೀರಿನ ಟ್ಯಾಂಕ್ ರಸ್ತೆ
ರಾಮನಗರ - ೫೭೧೫೧೧. ಮೊಬೈಲ್ : ೯೮೮೯೧೪೫೭೮

ನನ್ನ ಬಾಲ್ಯದ ನೆನಪುಗಳು

◆ ಟಿ.ಯಲ್ಲಪ್ಪ

'ಅನುಭವವು ಸವಿಯಲ್ಲ ಅದರ ನೆನಪೇ ಸವಿಯು'

(ಕಡೆಂಗೋಡ್ಲು ಶಂಕರಭಟ್ಟ)

ಕಳೆದು ಹೋದ ಬಾಲ್ಯಕ್ಕೆ ನೆನಪುಗಳ ಫ್ಲ್ಯಾಶ್‌ಬ್ಯಾಕ್ ಮುಖಾಂತರ ಮರಳುವುದು ಅಂದ್ರೆ ಮತ್ತೆ ಇನ್ನೊಂದು ಜೀವನಾವಸ್ಥೆಗೆ ವಾಪಸ್ಸು ಹೋಗಿ ಬಾಲಕರಾಗೋದು ಅಂತತಾನೇ? ಸದ್ಯದ ವಯೋಮಾನವನ್ನು 'ನೀನು ಸ್ವಲ್ಪ ಹೊತ್ತು ತೆಪ್ಪಗಿರು' ಅಂತ ಬಾಯಿ ಬಡಿದು; ಕೈಕಾಲು ಕಟ್ಟಿ ಮೂಲೆಗೆಸೆದು ಓಡಿ ಬಿಡೋದು! ಅದೇ, ನಾವು ಮನೆಬಿಟ್ಟು ಹೊರಡುವಾಗೆಲ್ಲಾ ನಮ್ಮ ಹಿಂದೆ ಬಾಲ ಅಲ್ಲಾಡಿಸಿಕೊಂಡು ನಾವು ಕಲ್ಲೆತ್ತಿ ಬೀಸಿದರೂ, ಓಡಿ ಹೋದಂತೆ ಹೋಗಿ, ಬೀದಿಯ ಆ ಕೊನೆಯ ತಿರುವಿಗೆ ಹೋಗಿ ತಿರುಗಿ ನೋಡಿದೊಡನೇ ಹಿಂಬಾಲಿಸಿಕೊಂಡೇ ಬರುವ ನಮ್ಮ ಮನೆಯ ಪ್ರೀತಿಯ ಸಾಕು ನಾಯಿಯ ಥರಾ, ಈ ಬಾಲ್ಯದ ನೆನಪುಗಳು.

ಇಷ್ಟು ದಿನ ನಾನು ಮಾಡುತ್ತಾ ಬಂದದ್ದು ಅದನ್ನೇ ಅಲ್ಲವೆ? ನಾಜೂಕಾದ, ನಪಿರಾದ, ನನ್ನ ಅಹಮ್ಮಿನ, ಅಹಂಕಾರ ಭಾವದ ನವಿಲು ಗರಿ ತೆರೆದು ಕುಣಿದದ್ದು, ಲೋಕದ ಕಣ್ಣಿಗೆ ಕಾಣಿಸಿಕೊಂಡದ್ದು. ಕುದಿ ಎಸರಿನ ಹಬೆಯಿಂದ ಹೊರದೂಡುವ ಸಿಲ್ವಾರದ ತಟ್ಟೆಯಂತೆ ಅವಮಾನವನ್ನು ಅದುಮಿಟ್ಟು, ಭಾಷೆಯಲ್ಲಿ ಬಟ್ಟೆಯಲ್ಲಿ, ಹಾವಭಾವದಲ್ಲಿ, ನನ್ನದಲ್ಲದೇ ಅಲ್ಲದ ವೇಷದಲ್ಲಿ ಕೊನೆಗೆ ವ್ಯಕ್ತಿತ್ವವನ್ನೂ ಬಚ್ಚಿಟ್ಟು ಬದುಕಿದವನು ಏಕಾಏಕಿ ಹೀಗೆ ನನ್ನ ಬಾಲ್ಯವನ್ನು ನಿಮ್ಮ ಮುಂದೆ ಅಕ್ಷರಗಳಲ್ಲಿ ತೆರೆದಿಡುವುದು ಅಂದರೆ, ತನ್ನ ನಗ್ನತೆಗೆ ತಾನೆ ನಾಚಿಕೊಂಡು ಒಮ್ಮೆಯೂ ಸ್ವರೂಪದರ್ಶನವಿಲ್ಲದವನು – ಏಕಾಏಕಿ ಎಲ್ಲರೆದುರು ನಿಂತು ನಗ್ನವಾಗುವುದರಲ್ಲಿ ಇರುವ ಅನುಭವ ಸುಖದ್ದೋ, ಅಧ್ಯಾತ್ಮದ್ದೋ ಅಥವಾ ಇದ್ಯಾವ ಬೂಟಾಟಿಕೆಯೂ ಅಲ್ಲದ 'ಆತ್ಮತೃಪ್ತಿ'ಯೆಂಬ ಮತ್ತೊಂದು ದೊಡ್ಡ ಅಹಂಕಾರದ್ದೋ? ನಾನರಿಯೆ!

ಜೀತದಲ್ಲಿ ಜೀವನವನ್ನೇ ಕೊರಡಿನಂತೆ ತೇದುಬಿಟ್ಟ ಅಪ್ಪ ಅಮ್ಮಂದಿರ ಜೊತೆ, 'ಜೀತ'ದ ಪರಿಕಲ್ಪನೆಯೇ ಇರದ ವಯಸ್ಸಲ್ಲಿ, ಅಪ್ಪ ಅಮ್ಮನ ಮುಗ್ಧತೆ,



ಅಮಾಯಕತೆಗಾಗಿಯೋ, ಬಲಿಪಶುವಿನಂತೆ ನಾನೂ ದುಡಿದದ್ದರಲ್ಲಿ ಆಯಾಸವಿತ್ತೆ, ಸುರಿಸಿದ ಬೆವರಿಗೆ ಬೆಲೆಯಿತ್ತೆಂಬ ಅರಿವಾದರೂ ಇತ್ತೆ?

ಅಂದು ಅನುಭವಿಸಿದ ಅವಮಾನಗಳು ಕೆಲವು ದಿನ ನಾಗದಾಳೆ ಕಾಯಂತೆ, ಮೈಯೆಲ್ಲಾ ಮುಳ್ಳುಗಳಾಗಿ ಮುಟ್ಟ ಬಂದವರನ್ನೆಲ್ಲಾ ಚುಚ್ಚುತ್ತಿದ್ದದ್ದು ನಿಜ! ಕ್ರಮೇಣ ಕಾಯಿ ಮಾಗಿ ಹಣ್ಣಾಗಿ, ಮುಳ್ಳುದುರಿಸಿಕೊಂಡು ಕೆಂಪಾನ ಕೆಂಪು ಸಿಹಿನಾಗದಾಳೆಯಾಗಿ ಲೋಕಫಲವಾದಂತೆ ಅನ್ನಿಸುತ್ತಿದೆ. ಅವಮಾನಿಸಿದವರ ಅಭಿನಂದಿಸಬೇಕಿನ್ನು. ಅವರ ಅವಮಾನದ ಬೆಂಕಿಯಲ್ಲಿ ಪುಟಕ್ಕಿಟ್ಟ ಚಿನ್ನದಂತೆ, ಆ ಕಾವಲ್ಲಿ ವ್ಯಕ್ತಿತ್ವದ ಕಿಸುರುಗಳನ್ನು ಸುಟ್ಟುಕೊಂಡು. ಗಟ್ಟಿಗೊಂಡು ವಜ್ರದಂತೆ ನಿಗಿನಿಗಿಸುವ ತಾಕತ್ತಿದೆಯಲ್ಲಾ ಅದು ಅಸಾಮಾನ್ಯವಾದದ್ದು. ಅಂಥಾ ಅವಮಾನದ ಬೆಂಕಿಯಲ್ಲಿ ಬಿದ್ದು ಎದ್ದು ಬಂದ ಅಂಬೇಡ್ಕರ್, ನೆಲ್ಸನ್ ಮಂಡೇಲರು ಸ್ಮೃತಿಪಟಲದಲ್ಲಿ ಹಾದು ಹೋಗುತ್ತಾರೆ ನನಗೀಗ.

ಹೊಲೆಯನೆಂಬ ಅವಮಾನ, ಕರಿಯನೆಂಬ ಅವಮಾನ, ಸಹಪಾಠಿಯ ಮನೆಯ ಪಾಯಿಖಾನೆಯ ತೊಳೆದು, ಅವಳ ಅಸಹ್ಯ ತುಂಬಿದ ಹೀನಾಯ ನೋಟದೊಡನೆ, ಅವಳೊಡನೆಯೇ ಒಂದೇ ತರಗತಿಯಲ್ಲಿ ಇಸ್ಕೂಲು ಕಲಿಯಬೇಕಾಗಿದ್ದ ಅವಮಾನ, ಕೇಳಿದ ಪ್ರಶ್ನೆಗಳಿಗೆಲ್ಲಾ ಉತ್ತರ ಹೇಳಿ, ಉಪಾಧ್ಯಾಯರಿಂದ ಶಹಬ್ಬಾಸ್‌ಗಿರಿ ಪಡೆದು ಉತ್ತರ ಹೇಳಲು ಬಾರದ ಐನೋರ ಮಗಳ ಮೂಗಿಡಿದು ಕ್ಲಾಸಿನ ಎಲ್ಲಾ ಹುಡುಗರೆದುರು ಕೆನ್ನೆಗೆ ಬಾರಿಸಿ, ಅವಳ ಅಸಹ್ಯದ ನಗೆಯ ಮುಯ್ಯಿ ತೀರಿಸುತ್ತಿದ್ದ ಖುಷಿಯಾದರೂ ನನ್ನ ಪಾಲಿಗೆ ಎಲ್ಲಿ ಉಳಿಯುತ್ತಿತ್ತು? ಅದೇ ರಾತ್ರಿ ಅವಳ ಮನೆಯ ಹಿಟ್ಟಿಗೆ, ಸಾರಿಗೆ ಪಾತ್ರೆ ಹಿಡಿದು ನಿಲ್ಲಲೇಬೇಕಾಗಿ ಬರುತ್ತಿದ್ದರಿಂದ ನಿಂತ ಭೂಮಿ ಬಾಯಿ ತೆರೆದು ನುಂಗಿಕೊಂಡಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು ಎಂದೆನ್ನಿಸುತ್ತಿತ್ತಲ್ಲ!

ಆದರೆ, ಈಗ ನೆನೆಸಿಕೊಂಡರೆ, ಆ ಐನೋರ ಮಗಳು ಪದ್ಮಾವತಿಯ ಕಿಸಕ್ಕನೆಯ ನಗು ನನ್ನಲ್ಲಿ ಅವಮಾನದ ನಡುಕವನ್ನುಂಟು ಮಾಡುವುದಿಲ್ಲ. ಆ ನಗು ಆ ಅಸಹ್ಯಗಳೇ ಅಲ್ಲವೇ ನನ್ನನ್ನು ಇನ್ನೆಂದೂ ಪಾಯಿಖಾನೆಯನ್ನು ತೊಳೆಯಬಾರದ ಸ್ಥಿತಿಗೆ ಬೆಳೆಯಬೇಕೆಂಬ ಛಲದ ಪಾಠವನ್ನು ಕಲಿಸಿದ್ದು? ತಿಂಗಳಿಟ್ಟು ತಿಂಗಳು ಸಾರಿಗೆ ಜೀವ ಜೀವದ ಪಸೆಯನ್ನೆಲ್ಲಾ ಬಸಿದ ಅಪ್ಪ ಅಮ್ಮನಂತೆ, ನಾನೂ ಕೂಡಾ ಜೀತಕ್ಕೆ ಜೀವ ತೇಯುವ ಕೊರಡಾಗಬಾರದೆಂಬ ಪ್ರತಿಜ್ಞೆಗೆ ಸಂಕಲ್ಪ ಬಲವಾದದ್ದು ಎಂದು ಬಾಲ್ಯದ ಆ ಅವಮಾನಗಳನ್ನು ನೆನೆಸುವೆ, ನಮಿಸುವೆ! ಆ ಅನುಭವಗಳು ಸಿಹಿಯಲ್ಲ ನಿಜ! ಆದರೆ ಆ ಅನುಭವದ ನೆನಪೇ ಇಂದಿಗೂ ಸಿಹಿಯಾಗಿದೆ. ನನಗಾಗ ಹತ್ತು-ಹನ್ನೆರಡು ವರ್ಷಗಳಿರಬೇಕು. ಹೊಲೆಗೇರಿಯೇ ಇಲ್ಲದ ಊರಿಗೊಂದೇ ಹೊಲೆಯರ ಮನೆ. ಪಕ್ಕದ ನಾಲ್ಕೈದು ಊರುಗಳನ್ನು ದಾಟಿಕೊಂಡು ಹತ್ತಾರು ಮೈಲಿ ಕತ್ತಲಲ್ಲಿ ನಡೆದು ಊರಬ್ಬದ ಬಾಡಿನ ಎಸರು, ತಂಬಿಟ್ಟು ಸಂಗ್ರಹಿಸಲು ಹೋಗುವುದಿತ್ತು. ಅಪ್ಪನೊಡನೆ ಗವ್ವಗತ್ತಲೆಯಲ್ಲಿ ನಡೆದು ಹೋಗೋದೊಂದು ಭಯ! ಕಾಲಿಗೆಲ್ಲಾ ಸಿಗುವ ಹಾವುಗಳ ಭಯ! ಮನಸ್ಸಿನ ಒಳಗೆಲ್ಲಾ ದೆವ್ವಗಳ ಭಯ. ಗಿಡ, ಮರ ಪೊದರುಗಳಲ್ಲಿ ಗಾಳಿ ಸರಕ್ಕೆಂದರೂ ಜೀವ ಹಾರಿ ಹೋಗೋ ಭಯ. ಇನ್ನು ತಲೆ ತಗ್ಗಿಸಿಕೊಂಡೇ ಐದನೇ ಕ್ಲಾಸಿನ ಬಹಳಾ 'ಇಂಟಲಿಜೆಂಟ್' ಎಂದು ಹೆಡ್‌ಮಾಸ್ಟರಿಂದಲೇ ಹೊಗಳಿಸಿಕೊಂಡು ಮಾನಿಟರಾದ ಹುಡುಗನಿಗೆ ಕೈಯಲ್ಲಿ 'ಸಿಲ್ವರ್ ಪಾತ್ರೆ' ಹಿಡಿದು 'ಅಮ್ಮಾತಾಯಿ' ಕೂಗುವ ಕೂಗನ್ನು ಕೇಳಿಸಿಕೊಂಡು ನನ್ನ ಕೈಯಿಂದಲೇ ಮೂಗು ಹಿಡಿಸಿಕೊಂಡು ಕೆನ್ನೆಗೆ ಬಾರಿಸಿಕೊಂಡಿದ್ದ ಸಹಪಾಠಿಗಳೇ ನನ್ನ ಪಾತ್ರೆಗೆ ಬಾಡಿನ ಸಾರನ್ನು ತಂದು ಹುಯ್ದಾರೆಂಬ ನಿರೀಕ್ಷಿತ ಅವಮಾನದ ಭಯ!

ಹೇ, ಥೂ, ದರಿದ್ರ ಮುಂಡೇವಾ ಹೋಗ್ರಾಚೆ, ಎಂದರೂ ಬಿಡದೆ, ಅಕ್ಕೋ ಒಂದ್ ಸೌಟಾದ್ರೂ ಹಾಕ್ರಕ್ಕೋ, ಒಂದೇ ಒಂದ್ ಪೀಸಾದ್ರೂ ಹಾಕ್ರಕ್ಕೋ ಅಂತ ಕೂಗಿದ್ದದ್ದು; ಕೂಗಲೇಬೇಕಾಗಿದ್ದು, ಗವ್ವಗತ್ತಲೆಯಲ್ಲಿ ಮನೆಗೆ ಬಾಡೆಸರು ತಂಬಿಟ್ಟಿನೊಂದಿಗೆ ಕಾಡು ಹಾದಿ ಸವೆಸಿ ವಾಪಸಾಗುವಾಗೆಲ್ಲಾ ಹಾಳಾದ ಕೊಳ್ಳಿ ದೆವ್ವಗಳು, ಪಿಶಾಚಿಗಳು ಹಿಂದೆಯೇ ಬಂದು ಅಪ್ಪನ ಕುತ್ತಿಗೆ ತಿರುವಿ ನನ್ನ ಕೈಯ್ಯಾಗಣ ಬಾಡೆಸರು-ತಂಬಿಟ್ಟುಗಳ ಲೂಟಿ ಮಾಡಿ. ಎಗರಿಸಿಕೊಂಡೋಗಿ ಹಬ್ಬಾ ಮಾಡಿಕೊಂಡು ಅವುಗಳ

ಮನೆ ಹಾಳು ಮಾಡಿಕೊಂಡರೆ ಮಾಡಿಕೊಳ್ಳಲಿ. ಆದರೆ, ಇತ್ತ ಮನೇಲಿ ಕವುದಿ ಕವುಚಿಕೊಂಡು ತಲೆಯನ್ನು ಈಚೇನೇ ಹಾಕ್ಕೊಂಡು ಕಣ್ಣಿಗೆ ಎಣ್ಣೆ ಬಿಟ್‌ಕೊಂಡು ಆಸೆ ಕಣ್ಣುಗಳಿಂದ ನಾವು ತರಬಹುದಾದ ಬಾಡೆಸರು ಬರಬಹುದಾದ ದಾರಿಯನ್ನೆ ಎದುರು ನೋಡುತ್ತಾ ಎದ್ದೇ ಇರಬಹುದಾದ ತಮ್ಮ-ತಂಗಿಯರು. ದಿನವೆಲ್ಲಾ ಗೇದು, ಸುಸ್ತಾಗಿ, ಹೊಟ್ಟೆಗೆ ಬಟ್ಟೆಯನ್ನು ಬಿಗಿಯಾಗಿ ಬಿಗಿದುಕೊಂಡೇ ತಣ್ಣೀರು ಕುಡಿದು ಮಲಗಿಬಿಟ್ಟಿರುವ ಅಮ್ಮ ರಾಜಕುಮಾರಿ ಥರಾ; ಅಜ್ಜಿ ತಿರಿದುಕೊಟ್ಟದ್ದನ್ನೆಲ್ಲಾ ತಿಂದು ಮಲಗಿರಬಹುದಾದ ಅಕ್ಕ, ಯಾವ ಕೆಲಸವನ್ನೂ ಮಾಡದೇ ಮೈಗಳ್ಳನಾದರೂ ತಿನ್ನುವುದರಲ್ಲಿ ಮಾತ್ರ ಸಮಪಾಲಿಗೆ ಹೊಡೆದಾಡುವ ದಗಲಬಾಜಿ ಅಣ್ಣ ಇವರಿಗೆಲ್ಲಾ ತಂಬಿಟ್ಟು ಬಾಡೆಸರು ತೆಗೆದುಕೊಂಡು ಹೋಗೋದಿರಲಿ, ತಿರುಗಿ ಹೋಗಿ ಅವರ ಮುಖವನ್ನೆಲ್ಲಾ ನೋಡ್ತೀನೋ ಇಲ್ವೋ ಶಿವ್ನೇ ಅಂತ ಬೇಡ್ಕೊಂಡು, ಜೀವ ಕೈಯಲ್ಲಿ ಹಿಡ್ಕೊಂಡು ವಾಪಸ್ಸು ಬರ್ತಾ ಇದ್ದದ್ದಿದೆಯಲ್ಲಾ ಅಬ್ಬಾ! ಏಳು ಸಮುದ್ರ ದಾಟಿ, ಏಳು ಪರ್ವತ ದಾಟಿ, ಏಳು ಗುಹೆ ಹೊಕ್ಕು ಮಾಯಾ ಫಕೀರನ ಪಂಜರದಾಗಿನ ರಾಜಕುಮಾರಿಯ ಜೀವಪಕ್ಷಿ ತಂದಾಗ ಆ ರಾಜಕುಮಾರನಿಗೆ ಆಗ್ತಾ ಇತ್ತಲ್ಲ ಸಂತೋಷ, ಹಂಗಾಗಿ ಬಿಡೋದು ನನಗೆ ಮನೆಗೆ ವಾಪಸ್ಸು ಬಂದಾಗ.

ಮನೆ ಮುಂದೆ ಸಾಲಗಾರರು ಬಂದು ನಿಂತು ಅಪ್ಪನ ಕೊರಳಪಟ್ಟಿ ಹಿಡಿದು; ಸಾಲ ತೀರಿಸೋಕೆ ಆಗದೆ ಇದ್ರೆ, ಬೋಳಿ ಮಗನೆ ನಿನ್ನ ಹೆಂಡ್ತೀನ ಅಟ್ಟಿಕ್ಕು ಎಂದು ಮುಂತಾಗಿ ಅನ್ನಬಾರದ ಮಾತೆಲ್ಲಾ ಅಂದು ತಮ್ಮ ನಾಲಗೆಯ ತೀಟೆ ತೀರಿಸಿಕೊಂಡಾಗೆಲ್ಲಾ ಅಮ್ಮ ತುಂಬಾನೇ ನೊಂದುಕೊಂಡು ಕಣ್ಣೀರು ಹಾಕ್ಕೊಂಡು ಹೇಳ್ತಾ ಇದ್ಲು: ಆ ಕಂಡೋರ್ ಮನೆ ಸೆಗಣಿ ಬಳಿದಾದ್ರೂ ಸರಿ ನಿಮ್ ಸಾಲಾನ ತೀರಿಸ್ತೀನೇ ಹೊರತು. ನಿಮ್ಮ ಋಣದ ಸೆಗಣೇಲಿ ಹುಳುವಾಗಿ ಸಾಯ್‌ಲಾರೆ, ಆದ್ರೆ ಇಂತ ಮಾತ್ನಾಡ್‌ಬೇಡಿ ಸ್ವಾಮಿ ಎಂದು ಗೋಗರೆಯೋಳು. ಇಂಥಾ ಸಮಯದಾಗೆಲ್ಲಾ ಸ್ವಲ್ಪ ಹೆಚ್ಚು ಕಡಿಮೆ ಅಪ್ಪಾ ಕೂಡಾ ಇಂಥದ್ದೇ ಮಾತಾಡ್ತ ಇರ್ತಿದ್ದ, ಆದ್ರೆ ಅವನ ವರಸೇನೇ ಬೇರೆ ಥರಾ ಇರ್ತಾ ಇತ್ತು. 'ಏ, ಹೋಗಯ್ಯಾ' ನಾಲ್ಕ್‌ಮನೆ ಹೇಲಾದ್ರೂ ಬಾಚಿ ಬಿಸಾಕಿ, ನಿನ್ ಸಾಲ ಬಿಸಾಕ್ತೀನಿ, ಆದ್ರೆ ನಿನ್ ಋಣ ಮಾತ್ರ ಇಟ್ಕೋಳೋದಿಲ್ಲ ಅನ್ನೋನು. ಅಮ್ಮನೇನೋ ಸಾಕಷ್ಟು ಸೆಗಣಿ ಬಳಿದು ಸಾಕಷ್ಟು ಸಲ ತನ್ನ ಮಾತನ್ನು ನಿಲ್ಲಿಸಿಕೊಳ್ತಾ ಇದ್ದದ್ದು ನನಗೆ ನೆನಪಿದೆ.

ಮನೆ ತುಂಬಾ ಮಕ್ಕಳು. ಹಂದಿಯ ಗೂಡಿನಂತಹ ಮನೆಯಲ್ಲಿ ಇಲಿಯ ಮರಿಯಂತೆ ಪಿಲಗುಟ್ಟೋ ಮಕ್ಕಳು. ಹಾಲೇ ಇಲ್ಲದ ನಾಯಿಯ ಕೆಚ್ಚಲಿಗೆ ಬಾಯಾಕಿ, ರಕ್ತಬರುವ ತನಕ ಜಿಗುಟುವ ಮರಿಗಳ ಕಾಟ ತಾಳಲಾರದೆ ರೇಗಿಕೊಳ್ಳುವ ಹೆಣ್ಣು ನಾಯಂತೆ, ಹಸಿ ಬಾಣಂತಿಯಾದ ಅಮ್ಮ ಸಂಸಾರ ಸರಿದೂಗಿಸಲಾರದೆ "ಈ ಹಾಳ್ ಮುಂಡೇ ಮಗನ ತೀಟೆಗೆ ಬಸಿರಾಗಿ ನನಗೀ ಪಾಡು" ಎಂದು ಹೆಣ್ಣುಲಿಯಾಗಿ ಗರ್ಜಿಸ್ತಾ ಇದ್ರೆ ಅಪ್ಪಾ ತಾನೆ ಏನ್ ಮಾಡೋನು? ಯಾವ್ ಕೆಲ್ಸ ಆದ್ರೆ ಏನೋ ನೋಡಾ ನನ್ ಮಕ್ಳೆ, ಕಳ್ತನ ಮಾಡಾದ್ ತಪ್ಪು, ಸುಳ್ ಹೇಳೋದ್ ತಪ್ಪು, ಇನ್ನೊಬ್ಬರ ತಲೆ ತೆಗೆಯೋದ್ ತಪ್ಪು, ಅದು ಬಿಟ್ಟು ಮಾನ್ವಾಗಿ ಮರ್ಯಾದೆಯಾಗಿ ಬದುಕೋಕೆ ಈ ಹಾಳ್ ಹೊಟ್ಟೆಗೆ ಏನ್ ಕೆಲ್ಸ ಮಾಡಿದ್ರೂ ತಪ್ಪಿಲ್ಲ" ಅಂಥ ಡಯಲಾಗ್ ಹೊಡಿತಾ ಹೊಡಿತಾ ನನ್ನ ಮನಸ್ಸನ್ನು ಪಳಗಿಸ್ತಾ ಪಳಗಿಸ್ತಾ, ಸರಿಯಾಗಿ ಮಧ್ಯರಾತ್ರಿ ಆಗ್ತಿದ್ದಂಗೇನೇ ಒಂದೆರಡು ಹಗ್ಗ; ಸನಿಕೆ, ಕಬ್ಬಿಣದ ಬಕೇಟು, ಬಿದಿರುಗಳ, ಕೈಯ್ಯಲ್ಲೊಂದು ಲ್ಯಾಂಪು, ಬೆಂಕಿಪೊಟ್ಟಣ ಹಿಡ್ಕೊಂಡ್ ಬಂದು ಸುಖನಿದ್ರೇಲಿ, ಕನಸು ಕಾಣ್ತಾ ಕನಸಲ್ಲಿ ನನ್ನ ಗೇಲಿ ಮಾಡಿ ನಕ್ಕವರಿಗೆಲ್ಲಾ ಮಾನಿಟರಾಗಿ, ಪ್ರಶ್ನೆಗೆ ಉತ್ತರ ಕೇಳ್ತಾ, ಹೇಳದೆ ಇದ್ದೋರಿಗೆಲ್ಲಾ ಮೂಗಿಡಿದು ಕಪಾಳ ಮೋಕ್ಷ ಮಾಡ್ತಾ ಇರಬೇಕಾದ್ರೆ ಅಪ್ಪಯ್ಯ ಮೆಲ್ಲಗೆ ಬಂದೋನೇ ಬಂದು ನನ್ನ ಮೆಲ್ಲಗೆ ತಟ್ಟಿ ಎಬ್ಬಿಸಿ, ಉಶ್! ಅಂತ ಬಾಯಿ ಮೇಲೆ ಬೆರಳಿಟ್ಟು ನನ್ನನ್ನು ಫಾಲೋ ಮಾಡಲು ಹೇಳಿ ಹಟ್ಟಿ ಬಿಟ್ಟು, ಹೊರಟನೆಂದರೆ ನನಗೋ ಇವನ ಮನೆ ಹಾಳಾಗ, ಯಾವುದಾದರೂ, ಸತ್ತದ್ದನ್ನು ಅಗೆದು ತೆಗೆದು ತರಲು ಏನಾದರೂ ಹಿಂಗೆ ಹೊಂಟವನಾ ಅಂತಾ ಜೀವ ಝುಲ್ ಅಂದ್ ಬಿಡೋದು!

ಹಾಳಾದ ಅಪ್ಪ ಯಾವುದೋ ಸಾಹುಕಾರರ ಮನೆಯ ಹಿತ್ತಲಿನ ಚಪ್ಪಡಿ ಸರಿಸಿ, ಆಗಲೇ ತೋಡಿ ಇಟ್ಟಿರುವ ಗುಳಿಯ ಹತ್ತಿರ ನನ್ನನ್ನು ಕರಕೊಂಡು ಹೋದಾಗಲೇ, ಮೂಗಿಗೆ ರಪ್ಪನೆ ಬಡಿದ ನಾತದಿಂದಲೇ, ಅದು ತುಂಬಿ ಬದಗುಡುತ್ತಿದ್ದ ಕಕ್ಕಸು ಗುಂಡಿ ಎಂದು ನನಗೆ ಗೊತ್ತಾಗುತ್ತಿದ್ದದ್ದು!

ಮುಂದಿನದನ್ನು ನಾನೇನೆಂದು ಹೇಳಲಿ? ನನ್ನ ಕೈಯಲ್ಲಿ ಆಗದು ಎಂದು ಚೀರಾಡಲಾರೆ, ಅಕ್ಕ-ಪಕ್ಕದವರು ಎದ್ದು ಬಂದಾರು. ಗಬ್ಬು ವಾಸನೆ ತಾಳದೆ ಮನೆಯ ಮಾಲೀಕನ ಮೇಲೆ ಜಗಳಕ್ಕೆ ಬಿದ್ದಾರು! ಅವನ ಪಿಟ್ಟು ಖಾಲಿಯಾಗದೇ ಉಳಿದಾತು! ಹಂಗೇನಾದರೂ ಆದರೆ ಅಪ್ಪ ಒಪ್ಪಂದ ಮಾಡಿಕೊಂಡಿರುವ ದುಡ್ಡು ಕೈಬಿಟ್ಟು ಹೋದರೆ, ನಾಳೆ ಅಮ್ಮ ಹುಲಿಯಾಸ ಹಾಕಿಯಾಳು, ಇಲ್ಲದಿದ್ದರೆ ಮಡಕೆ ಒಲೆ ಏರೋದಾದರೂ ಹೆಂಗೆ? ನನ್ನ ಶರಟು, ಬನಿಯನ್ ಕಳಚಿ ಎಸೆದು, ನಿಕ್ಕರು ಇದ್ದುಕೊಳ್ಳಲಿ; ಮೈಗೆಲ್ಲಾ ಕೊಬ್ಬರಿ ಎಣ್ಣೆ ಸವರಿ, ಮೂಗಿಗೆ ಬಿಳಿಯ ಕರವಸ್ತ್ರದಂತಹ ಒಂದು ತುಂಡು ಬಟ್ಟೆ ಕಟ್ಟಿ, ನನ್ನ ಕೈಗೆ ಹಗ್ಗ ಕಟ್ಟಿದ ಕಬ್ಬಿಣದ ಬಕೇಟು. ನೀಡಿದ ಬಕೇಟಿನಿಂದ ಸೇದಿ ಸೇದಿ ಹೊರಗೆ ಚೆಲ್ಲುವುದು ನನ್ನ ಕಾಯಕ! ಪಿಟ್ಟು ಖಾಲಿಯಾದಂತೆಲ್ಲಾ ಮೂರಾಳುದ್ದದ ಕಕ್ಕಸು ಗುಂಡಿಗೆ ಚೋಟುದ್ದದ ನನ್ನ ಸೊಂಟಕ್ಕೆ ತೆಂಗಿನ ಹಗ್ಗ ಬಿಗಿದು ಇಳಿಯ ಬಿಡುತ್ತಿದ್ದ. ನನ್ನ ಮಗ್ಗುಲಿನ, ಹಗ್ಗದಲ್ಲಿ ಕಟ್ಟಿದ ಬಕೇಟಿನಲ್ಲಿ ಹಳ್ಳದೊಳಕ್ಕೆ ಲ್ಯಾಂಪೂ ಇಳಿದು ಬಂದು ನನ್ನ ಕ್ಲೀನಿಂಗಿಗೆ ಬೆಳಕು ಚೆಲ್ಲುತ್ತಿತ್ತು!

ಗವ್ವಗತ್ತಲೆ! ಮೂಗು, ಗಂಟಲನ್ನೆಲ್ಲಾ ನಸಗುಟ್ಟಿಸುವ ಕೆರೆತ. ಕರುಳಿನ ಸಮೇತ ಕಿತ್ತುಕೊಂಡು, ಗುದ್ದಿಕೊಂಡು ಬಂದು ಬಾಯಿಯ ದಾರಿ ಹುಡುಕುವ ವಾಂತಿ, ವಾಂತಿ ಮಾಡುವುದಾದರೂ ಎಲ್ಲಿ? ತುಡುಗು ದನಗಳಿಗೆ ಬಾಯಿ ಗವುಸು ಹಾಕಿದಂತೆ ಗಟ್ಟಿಯಾಗಿ ಬಾಯಿಗೆ ಬಿಗಿದು ಕಟ್ಟಿರುತ್ತಿದ್ದ ಬಟ್ಟೆಯ ಬಾಯ್‌ಬೀಗ ಇರುತ್ತಿತ್ತಲ್ಲ. ಜೊತೆಗೆ ನನ್ನ ನಿರ್ವಾಣದ ಮೈ-ಕೈಯನ್ನು ಕಿತ್ತು ತಿನ್ನುವ ರಕ್ತ ಹೀರುವ ಯಮಗಾತ್ರದ ಸೊಳ್ಳೆಗಳು. ಬಾಯೆಲ್ಲಾ ಕಹಿ, ಮೂಗೆಲ್ಲಾ ಉರಿ, ಬಕೇಟಿನಲ್ಲಿ ತುಂಬಿಸಿ ತುಂಬಿಸಿ ಮೇಲಕ್ಕೆ ಕಳಿಸಬೇಕು. ದಡದಲ್ಲಿ ಮೇಲೆ ನಿಂತು ಹಗ್ಗ ಹಿಡಿದು ಸೇದಿಕೊಳ್ಳುವ ಅಪ್ಪ ಹಗ್ಗ ಹಿಡಿದು ಬಕೇಟಿನಲ್ಲಿ ತುಂಬಿ ತುಳುಕುವ ಕಕ್ಕಸ್ಸನ್ನು ಮೇಲಕ್ಕೆ ಸೇದಿಕೊಂಡಾಗೆಲ್ಲಾ ಪಿಟ್ಟಿನ ಒಳಗಿರುವ ನನ್ನ ಮೈಮೇಲೆ ಅಭಿಷೇಕ!

ಸೇದುತ್ತಾ, ಸೇದುತ್ತಾ, ರಟ್ಟೆ ಸೋತಾಗ, ಒಂದ್ಹೈದು ನಿಮಿಷ ಬೀಡಿಸೇದುತ್ತಾ, ಒಂದ್ಹೈದು ನಿಮಿಷ ರವಷ್ಟು ರೆಸ್ಟು ತೆಗೆದುಕೊಳ್ಳುವ ಅಪ್ಪ. ಒಳಗೆ ನಾನಾದರೂ ಹೆಂಗೆ ರೆಸ್ಟು ತಗೊಳೋದು? ಕಿತ್ತು ತಿನ್ನುವ ಸೊಳ್ಳೆಗಳಿಂದ ನನಗೆ ರೆಸ್ಟು ಅಷ್ಟೆ

'ಅಪ್ಪಾ ಸಾಕು ಹೋಗಾನ ನಡೀ.... ಬೆಳಕರೀತಾ ಅದೆ, ಆಗ್ಲೆ ಕೋಳಿ ಕೂಗ್ತಾ ಅದೆ. ನಮ್ ಫ್ರೆಂಡ್‌ಗಳೇನಾದರೂ ಟೂಸನ್‌ಗೆ ಅಂತ ಇತ್ಲಾ ಕಡೇನೇ ಬಂದ್‌ಗಿಂದಾರು" ಅಂದ್ರೆ ಆ ಹಲಾಲ್‌ಕೋರ್ ಅಪ್ಪನಾದ್ರೂ ಎಲ್‌ಕೇಳ್ತಾ ಇದ್ದ ನನ್ ಮಾತ್ನ? 'ಎತ್ತೋ ನಿಮ್ಮಮ್ನ ಹಳೇ ಪ್ರೆಂಡ್‌ಗಳ್ನಾ ಕ್ಯಾದ್ರ ಹೊಟ್ಟೆಗಿಟ್ ಇಲ್ದಿದ್ರೆ, ಆ ನನ್‌ಮಕ್ಳು ಕೊಟ್ಟಾರ? ತುಂಬಿಕೊಡೋ ಬೇಗಾ, ಸೋದಾ ನನ್‌ಮಗನ್ ತಂದು" ಅಂತ ದಬಾರ್ ಅಂತ ಕಬ್ಬಿಣದ ಬಕೇಟನ್ನು ಎತ್ತಿ ಮೇಲಿಂದ ಕುಕ್ಕಿಬಿಡುತ್ತಿದ್ದ.

ಅಪ್ಪ ಸೇದ್ತಾ ಸೇದ್ತಾ, ಅದು ಮುಗಿದಂತೆ ಕಂಡು, ಮುಗಿಯದೇ ಇದ್ದು; ನನ್ನ ಕಣ್ಣಾಗಳ ನೀರು, ಪಿಟ್‌ಗುಳಿ ಒಳಿಕ್ಕೆ ತೊಟ್ಟಿಕ್ಕುತ್ತೂವ್ವೇ ಕೋಳಿಗಳು ಕೊಕ್ಕೋಕ್ಕೋ.. ಎಂದು, ಕಾಗೆಗಳು ಕವ್‌ಗುಟ್ಟಿ; ನನ್ನೆದೆ ಪತ್ರ್‌ಗುಟ್ಟಿ ಬಿಡೋದು, ನನ್ ಫ್ರೆಂಡ್‌ಗಳೇನಾದರೂ ಬಂದ್ ಬಿಟ್ರೆ, ಬಂದ್ ನೋಡಿಬಿಟ್ರೆ ಅಂತ!

ಎಲ್ಲವನ್ನೂ ಹೊರಕ್ಕೆ ಕಳಿಸಿದ ಮೇಲೆ, ಒಳಗೆ ಗುಂಡಿಯ ತಳಭಾಗದಲ್ಲಿ ನೆಲಕ್ಕೆ ಅಂಟಿಕೊಂಡದ್ದನ್ನು ಸನಿಕೆಯಲ್ಲಿ ಕೆರೆದು ತೆಗೆದು ಉಳಿದದ್ದನ್ನು ಕೈಯಾರೆ ಬಳಿದು ನೆಲದ ಕೆಂಪು ಮಣ್ಣನ್ನು ತೋರಿಸಿದ ಮೇಲೇನೇ ನನಗೆ ಆ ಕಕ್ಕಸು ಗುಂಡಿಯಿಂದ ಮೇಲಕ್ಕೆ ಬಂದು ಭೂಮ್‌ತಾಯ ಮುಖ ದರ್ಶನ ಮಾಡೋಕೆ ಬಿಡ್ತಿದ್ದದ್ದು. ಅಪ್ಪನೇನೋ ನನ್ನನ್ನು ಬಾವಿಗೆ ಇಳಿಬಿಟ್ಟ ನೀರಿನ ಕೊಡದಂತೆ ಮೇಲಕ್ಕೆ ಸೇದಿಕೊಳ್ತಾ ಇದ್ದ. ಆದರೆ ಆತನಿಗೇನು ಗೊತ್ತಿತ್ತು? ನಾನಾಗಲೇ ಸತ್ತ ಹೆಣವಾಗಿರ್ತಿದ್ದೆ ಅಂತ!'

ಮತ್ತೆ ಗುಂಡಿಯ ಮೇಲೆ ಚಪ್ಪಡಿ ಹಾಸಿ, ಮಣ್ಣು ಮುಚ್ಚಿ (ಶವಸಂಸ್ಕಾರ ಮಾಡಿದಂತೆ)ದ ಮೇಲೇನೇ ಅಪ್ಪನ ಕೈ ಮೇಲೆ ಕಾಸು ಬೀಳೋದು. ನನ್ನ ಕೈಗಿರಲಿ, ಕಣ್ಣಿಗೆ ಆ ನೋಟು ಕಾಣಿಸಿದರೆ ಸಾಕು ಅದೇ ಬೋನಸ್ಸು ನನ್ನ ಪಾಲಿಗೆ!... ಅಮ್ಮನಿಗೆ ಮೊದಲೇ ಗೊತ್ತಿರುತ್ತೆ ಕಳ್ಳಿ! ಹಿಂಗೆ ನಾವು ಯ್ಯಾಸ ಹಾಕಿಕೊಂಡು, ಮನೆಯ ಬೇಲಿಗೆ ಹೋಗೋದೇ ತಡ, ಓಡೋಡಿ ಬಂದು ಕೈಯಾಗಿನ ಯ್ಯಾನಗಳನ್ನು ಕಸಕೊಂಡು, ನೀರೋಲೆ ಹತ್ರ ಇರೋ ಬಚ್ಚಲು ಕಲ್ಲಿನ ತಾವಿಗೆ ಒಯ್ದು, ನಿಲ್ಲಿಸಿ, ಮನೆಯ ಹಸುವಿನ ಸೆಗಣಿ, ಗಂಜಲ ತೊಳೆದಷ್ಟೇ ನಿರ್ಲಿಪ್ತವಾಗಿ ತೊಳೆದು, ಗೀರು ಸೋಪು ಹಾಕಿ ಮೈ-ಕೈ ತಿಕ್ಕಿ, ಸೀಗೆಯ ಗಸಿ ತಲೆಮ್ಯಾಲೆ ಉಯ್ದು, ಗಸಗಸನೆ ತಿಕ್ಕಿ ಹಬೆಯಾಡುವ ನೀರಿಂದ ಜಳಕ ಮಾಡಿಸಿ ತನ್ನ ಹಳೆಯ ಸೀರೆಯಿಂದ ಮೈಯೊರೆಸಿ, ಕೈಕಾಲ್ಗೆಗೆಲ್ಲಾ ವ್ಯಾಸಲೆಣ್ಣೆ ಹಚ್ಚಿಬಿಟ್ಟರೆ ಮುಗೀತು ನನ್ನ ಸ್ನಾನ, ನನ್ನ ಕ್ಲೀನಿಂಗ್ ಪ್ರೋಗ್ರಾಮು? ನಾನು ಹಾಗೇ ಮೈ-ಕೈನೆಲ್ಲಾ ಕೆರೀತಾ ಇದ್ರೆ, ನನ್ನ ಕಪ್ಪಾನ ಮೈಯಲ್ಲಿ ಕೆಂಪಾನ ಗುಳ್ಳೆ ಮೂಡಿ, ಪರಪರನೆ ಕೆರೆಯೂತಾ, ಅವು ಮತ್ತೂ ಊದಿಕೊಂಡು ಕೆಂಪಾಗಲು ಹೊಲೆ-ಮಾದಿಗರಿಗೆ ಇಂಥಾ ಕೆಂಪಾನ ಗುಳ್ಳೆ ಬಂದು ಅದೇ ಒಂದು ರಕನೆ ಸಂದಾಗಿ ಕಾಣಲು, ಒಳಗೇ ಹಿಗ್ಗುತ್ತಾ ಇಸ್ಕೂಲಿಗೆ ಹೊಂಟಾಗಲೇ ಗೊತ್ತಾಗಿದ್ದ ಫ್ರೆಂಡುಗಳೆಲ್ಲಾ ಅವಕ್ಕೆ 'ಪರಂಗಿ ಗುಳ್ಳೆ', ಪರಂಗಿ ಗುಳ್ಳೆ ಅಂತ ಹೆಸರಿಟ್ಟು ಛೇಡಿಸಿದನ್ನು ನೆನೆದಾಗೆಲ್ಲಾ ಕಕ್ಕಸು ಗುಂಡಿಯಾಗೆ ಇದ್ದ ನರಮನುಸರ ಹೇಲನ್ನು ಹೊರಗೆ ಹಾಕುತ್ತಾ ಹಾಕುತ್ತಾ, ಹೋದ ನನಗೆ ಮಾತ್ರ ಯಾಕೆ ಈ ಅನುಭವವನ್ನು ಮಾತ್ರ ಹೊರಗೆ ಹಾಕಲಾಗದೆ ಇಷ್ಟು ದಿನ ನನ್ನ ಎದೆಯಾಗಿ ಬಚ್ಚಿಟ್ಟುಕೊಂಡು ಮನಸನ್ನೇ ಒಂದು ಕಕ್ಕಸು ಗುಂಡಿ ಮಾಡಿಕೊಂಡು ಬಿಟ್ಟಿದ್ದೆನಲ್ಲಾ ಅಂತ! ಅಬ್ಬಾ! ಈಗ ಅದೆಷ್ಟು ಹಗುರ ಹಗುರ ಮನಸ್ಸು! ಅದೆಷ್ಟು ಕ್ಲೀನು ಕ್ಲೀನು ಮನಸ್ಸು! ಅಂತ ಅನ್ನಿಸ್ತಾ ಐತಲ್ಲ!.

ಆ ಹೊತ್ತು ರಾತ್ರೀನೇ ಮನೆಯಲ್ಲಿ ಬಾಡು ಬೇಯುವ ಗಮಲು ಮನೆಯಿಡೀ ಆವರಿಕೊಂಡು ಬಿಡೋದು. ಉಪ್ಪು ಬಾಡಿನ ಟೇಸ್ಟಿಂಗ್ ರವುಂಡು, ಉಪ್ಪು-ಖಾರ ಹಿಡಿಸಿವೆಯಾ, ಇಲ್ಲವಾ, ಎಂಬ ಟೆಸ್ಟಿಂಗ್ ರವುಂಡು ಹೀಗೆ ರವುಂಡು ರವುಂಡಾಗಿ ಮಡಕೆಯಲ್ಲಿನ ಬಾಡು ಖಾರ ಬೀಳುವ ಹೊತ್ತಿಗೆ ರವಷ್ಟು ರವಷ್ಟಾಗೇ ಕರಗಿಬಿಡೋದು. ಬಾಡೂಟದ ಆ ಸಂಭ್ರಮದಲ್ಲಿ ನನ್ನ ಮೈಯ್ಯಿ ಕೆರೆತ ಅದ್ಯಾವ ಮಾಯದಾಗೆ ಮರೆತೋಗೋದೋ ದೇವರೇ ಬಲ್ಲ!

ಪಿಟ್ಟು ಕ್ಲೀನು ಮಾಡಿದ ಮಾರನೆ ದಿನ ಬೆಳಿಗ್ಗೆ ಅಪ್ಪ, ಹತ್ತು ರೂಪಾಯಿ ನೋಟು ತೆಗೆದು ಯಾರ ಕಣ್ಣಿಗೂ ಕಾಣದಂಗೆ 'ತಕೋ, ಚಂದಾಗಿ ಓದ್‌ಬೇಕು. ನೀನು ಲಾಯ್ರು ಆಗ್ಬೇಕು ನೋಡು ಮತ್ತೆ, ನಮ್ಮಪ್ಪನ ಆಸ್ತಿನೆಲ್ಲಾ ಬಿಡಿಸ್ಕೋಬೇಕು. ತಕೋ ಬೇಕಾದ್ ಪುಸ್ತಕ ತಕೋ' ಅಂತ ಕೊಟ್ ಬಿಡ್ತಿದ್ದ. ನಮ್ ವಂಸದಾಗೆ ನೀನೊಬ್ಬನಾದ್ರೂ ಸಂದಾಗ್ ಓದ್‌ಬೇಕು, ನಮ್ಮಪ್ಪ ನನ್ನ ಜೀತ್ಕ ಹಾಕ್‌ಬುಟ್ಟಾ, ಇಸ್ಕೂಲ್ ಮೆಟ್ಲು ಹತ್ಲಿಲ್ಲಾ ನಾನು ಅಂತ ಕಣ್ಣಾಗ ನೀರಾಕ್ಕೋತಿದ್ದನು. ಅದೇನ್ ಕುಡಿದಿರುತ್ತಿದ್ದನೋ ಏನೋ ಆಗ. ಅಪ್ಪನ ಕಾಸಿಗೋ, ಕಣ್ಣೀರಿಗೋ ಕರಗಿ ಹೋಗ್ತಾ ಇದ್ದ ನನಗೆ ತಾನೇ ಇನ್ನೇನ್ ಗೊತ್ತಿತ್ತು. ಅವನ ಅತೃಪ್ತ ಬಯಕೆಗಳಿಗೆ ಗರ್ಭವಾಗುವುದನ್ನು ಬಿಟ್ಟು, ಅವನ ಕನಸುಗಳಿಗೆ ನಾನು ರೆಕ್ಕೆಯಾಗ್ತೀನಿ ಅಂತ ಅಪ್ಪ ಭಾವಿಸಿದ್ದ, ನಿಜ. ಆದ್ರೆ ಲಾಯ್ರಿ ಗೀಯ್ರಿ ನನ್ ಜಾಯಮಾನಕ್ಕೆ ಒಗ್ಗದ ವಿಷಯವಾಗಿತ್ತಲ್ಲ.

ಅಪ್ಪ ಕೊಟ್ಟ ಒಂದೊಂದು ಹತ್ತು ರೂಪಾಯಿಯ ನೋಟೂ ನನ್ನಲ್ಲಿ ನೂರು ನೂರು ಕಕ್ಕಸು ಗುಂಡಿಗಳೊಳಗೆ ತಕರಾರಿಲ್ಲದೆ ಇಳಿದು ಬಿಡುವ ಹುಮ್ಮಸ್ಸನ್ನು ತುಂಬುತಿತ್ತು. ನಾನಾದರೂ ಒಗ್ಗಿಹೋದೆ. ಆದರೆ, ಪುಸ್ತಕಾ ತಕಾ ಅಂತ ಕೊಡುತ್ತಿದ್ದ ಆತನ ಹತ್ತು ರೂಪಾಯಿ ನೋಟು ಮಾತ್ರ ಗಣಿತದ ಮೇಷ್ಟ್ರ ಸಣ್ಣ ಉಳಿತಾಯದ ಖಾತೆಯ ಪುಸ್ತಕದಲ್ಲಿ ಎಂಟ್ರಿ ಆಗ್ತಾ, ಆಗ್ತಾ ಅಸಲಿಗೆ ಬಡ್ಡಿ ಸೇರ್ತಾ ಸೇರ್ತಾ, ಬಡ್ಡಿಯ ದುಡ್ಡಲ್ಲಿ, ಅಪ್ಪನ ಸಾಲಗಾರರ ಬಡ್ಡೀ ಮಗನಾದ ಈ ಹೈದನಲ್ಲಿ ಅದ್ಯೆಂಗೋ ಚಂದಮಾಮ, ಬಾಲಮಿತ್ರ, ಭಾರತ-ಭಾರತೀಯ ಕಥಾ ಸರಣಿಯ ಸಪ್ಲಿಮೆಂಟರಿ ಕಥೆಗಳಲ್ಲಿ ಪಂಚತಂತ್ರ, ರಾಮಾಯಣ-ಮಹಾಭಾರತದ ಕಥಾ ಪುರುಷರಲ್ಲಿ ನನ್ನನ್ನು ಮ್ಯಾಚು ಮಾಡಿಕೊಳ್ತಾ ಅತ್ತಾ ಅವರಂತಾಗದೇ, ನನ್ನಂತೆ

ನಾನು ಆಗದೆ, ಎಡಬಿಡಂಗಿ ಆಗಿಬಿಡೋದಿದೆಯಲ್ಲಾ ವಯಸ್ಸಿಗೆ ಸರಿ ದಾರಿ ತೋರುವ ನಿಜ ಗುರುವಾದರೂ ಇರಲಿಲ್ಲ ನನಗೆ.

ರಾಜ್‌ಕುಮಾರ್ ಪಿಕ್ಚರ್ ಅಂದ್ರೇ ಸಾಕು ಜೀತ ಮಾಡ್ತಿದ್ದ ಲಾಗಾಯ್ತಿನಿಂದಲೂ, ಕಾಸಿಗೆ ಕಾಸು ಕೂಡಿಸಿ; ಗವ್ಡನ ಕಣ್ಣು ತಪ್ಪಿಸಿ, ರಾತ್ರೋರಾತ್ರಿ, ಹತ್ತಾರು ಮೈಲಿ ನಡೆದು ಹೋಗಿ ಟೆಂಟ್ನಾಗೆ ಪಿಕ್ಚರ್ ನೋಡ್ಕೊಂಡ್ ಬಂದ್ ಖುಸಿ ಪಡ್ತಿದ್ದನಂತೆ ಅಪ್ಪ. ಅವನು ರಾಜ್‌ಕುಮಾರ್ ಪಿಕ್ಚರಿಂದ ತಾನು ಅದೆಷ್ಟು ಪ್ರಭಾವಿತನಾಗಿಬಿಟ್ಟಿದ್ದ ಎನ್ನುವುದನ್ನು ಆಗಾಗ ಹೇಳ್ತಿದ್ದ. ಒಂದು ಸಾರಿಯಂತೂ 'ಸಂಪತ್ತಿಗೆ ಸವಾಲ್' ಪಿಕ್ಚರ್ ನೋಡ್ಕೊಂಡ್ ಬಂದ್ ಮೇಲೆ, ಬದುಕಿದ್ರೆ ಇಂಗ್ ಬದುಕಬೇಕು ನೋಡು, ಅವನಮ್ನ್ ಸಾವ್‌ಕಾರ್ನಾ ಕ್ಯಾದ್ರೂ ಅಂದ್ಕೊಂಡ್‌ನಂತೆ.

ಉಗಾದಿ ಹಬ್ಬದ ದಿನವಾದರೂ ಸ್ವಲ್ಪ ಅನ್ನ ತಿನ್ನೇಬೇಕು ಅನ್ನಿಸಿಬಿಡ್ತಂತೆ. ನಾನು ಇಸ್ಟು ಮೈ-ಮುರಿದು, ಜೆವಳಿಸಿ ಗೇದು, ಪಲ್ಲಾ ಪಲ್ಲಾ ಭತ್ತ ಬೆಳೆದ್ರೂ, ನನಗೊಂದು ತುತ್ ಅನ್ನ ಹಾಕ್ದೇ, ನನ್ ಪಕ್ಕ್ದಾಗೆ ಕೂತು ಅನ್ನಾ ಇಟ್ಕೊಂಡ್ ಉಣ್ತಾನಲ್ಲಾ ಇವನಮ್ಮನ ದೌಲ್ನಾ ಕೇದ್ರು, ನನಗಿಲ್ದಾ ಅನ್ನಾನಾ? ಅನ್ನಿಸಿದ್ದೆ ತಡಾ ರೋಸಿಹೋಗಿ, ಧೈರ್ಯ ತಂದ್ಕೊಂಡು 'ಸ್ವಾಮೀ ಈವೊತ್ತಾದ್ರೂ ಒಂದಿಡಿ ಅನ್ನಾ ಹಾಕಿಸ್ರಿ' ಅಂದದ್ದೇ ತಡ, ಗವ್ಡನಿಗೆ ರೇಗೋಗಿ ನಿಮ್ಮಮ್ಮನ್ ಹೋಲೆನಾ ಕ್ಯಾದ್ರು; ಅಂಬಲಿಗೇ ದಿಕ್ಕಿಲ್ದ ನನ್‌ಮಕ್ಳು ಅನ್ನ ಕೇಳೋಕಾಕ್ ಬಂದ್ರಾ? ಅಂತ ಮುಳ್‌ಗೋಲ್ ತಕ್ಕೊಂಡ್ ಬಂದು ಉಣ್ತಾ ಇದ್ದ ಅಪ್ಪನಿಗೆ ಎರಡಕ್ಕಿದ್ನಂತೆ! ಅದೆಲ್ಲಿತ್ತೋ ಕ್ವಾಪ 'ಸಂಪತ್ತಿನ ಸವಾಲ್‌ನಾಗೆ' ರಾಜ್‌ಕೂಮಾರು, ಸಾವ್ಕಾರನ ಪಾರ್ಟ್ ಮಾಡಿದ್ದ ವಜ್ರಮುನಿಗೆ ಓಗ್ಗಾಮುಗ್ಗ ಇಕ್ಕಿದಂಗೆ ಅವನ ಕೈಯ್ಯಾಗಿನ ಮುಳ್‌ಗೋಲ್ ಕಿತ್‌ಕೊಂಡು ಬಾರಿಸಿಬಿಟ್ಟು, ನಿನ್ ಮನೆ ಜೀತಕ್ ನನ್ ಒಂದಿಕ್ಕಾ ಅಂದುಬುಟ್ಟಿದ್ದೇ ಅಪ್ಪ ತಿರುಗಿ ಕೂಡಾ ನೋಡ್ದೇನೆ ಬಂದೆ ಬಿಟ್ನಂತೆ!

ಇದಾದ ನಂತರ ಗೌಡನಾದರೂ ಸುಮ್ಮನಿದ್ದಾನೆಯೇ? ಊರಿನವರನ್ನೆಲ್ಲಾ ಸೇರಿಸಿ, ಪಂಚಾಯ್ತಿ ಮಾಡಿ, ತನಗೆ ಬರಬೇಕಾಗಿದ್ದ ಸಾಲಕ್ಕೆ ಮನೇಲಿದ್ದ ಎಮ್ಮೆ ಹಸಾನೆಲ್ಲಾ ಮಾರಿಸಿ ವಜಾ ಹಾಕ್ಕೊಂಡ್ನಂತೆ. ಆ ಗವ್ಡನ ಕತೆ ಅದೆಲ್ಲಾದ್ರೂ ಹಾಳಾಗಿ ಹೋಗ್ಲಿ ಬಿಡಿ; ಆದ್ರೆ ಅಪ್ಪನಲ್ಲಿ ಈ ಥರದ ಬಂಡಾಯವನ್ನು ಹುಟ್ಟು ಹಾಕಿದ ಅವರ ಗುರು ಆ ರಾಜ್‌ಕುಮಾರನ ಪಿಕ್ಚರ್ ಅಂದ್ರೆ ಪ್ರಾಣ ಇಟ್ಕೊಂಡಿದ್ದ ಅಪ್ಪ ನಂಗ್ ಮಾತ್ರ ಪಿಕ್ಚರ್ ನೋಡಾಕ ಅದ್ಯಾಕ್ ಕಾಸ್ ಕೊಡ್ತಿರ್ಲಿಲ್ಲೋ ಕಾಣೆ?!

ಅಪ್ಪಾ, ಅಪ್ಪಾ, ನಿಮ್‌ಗುರು ರಾಜ್‌ಕುಮಾರ್ ಪಿಚ್ಚೇರ್ ಬಂದದೆ ಕಾಸ್ ಕೊಡಪ್ಪಾ, ಎಂದಾಗ್ ಮಾತ್ರ "ಎತ್ಲೋ ನಿಮ್ಮಮ್‌ನು ರಾಜ್‌ಕುಮಾರ್ ಪಿಚ್ಚೇರ್ನಾ ಬಡಿಯಾ, ಇಸ್ಕೂಲ್‌ಗೋಗೊ ಮಕ್ಕಳೆಲ್ಲಾ ಪಿಚ್ಚೇರ್ ನೋಡಿದ್ರೆ ಉದ್ದರ್ಕಾ ಆದದಾ, ಅವರಮ್ಮನ್ ಮೂರು ಬಿಟ್ ಮುಂಡೇಗ್ಳಾ ಬಡಿದ್ರು, ತಿಕಾ ಬುಟ್‌ಕೊಂಡ್ ಕುಣಿಯೋದ್ನ ನೋಡೋಕೋಗ್‌ಬೇಕಾ? ದೊಡ್ಡೋನಾದ್ಮೇಲ್ ಬೇಕಾದ್ರೆ ರಾಜ್‌ಕುಮಾರ್ ಪಿಚ್ಚೇರ್ ನೋಡೋಕೋಗಿಯಂತೆ. ಹೋಗೋಗ್, ಕೆಲ್ಸ ನೋಡ್ಕ, ಅಂತ ಗದರಿಬಿಡೋನು.

ಹೀಗೆ ಬಂದರ ಹಿಂದೊಂದು ಬಾಲ್ಯದ ಭಾವಲಹರಿಗಳು ಒತ್ತರಿಸಿಕೊಂಡು ಬಂದು ಆರ್ದ್ರವಾಗಿಸುತ್ತಿವೆ. ಆ ಬಾಲ್ಯದ ನೆನಪಿನ ನವಿಲು ಗರಿ ಬಿಚ್ಚಿ ಕುಣಿಯುತ್ತೆ, ಅದಕ್ಕೆ ಋತು-ಗಿತುವಿನ ಎಗ್ಗಿಲ್ಲ. ಯಾರು ಏನೆಂದುಕೊಂಡಾರೆಂಬ ಸಿಗ್ಗಿಲ್ಲ. ಭಾವದ ತೂಬೊಡೆದು ಹರಿಯುವ ರಭಸಕ್ಕೆ ಶಾಂತ-ಪ್ರಶಾಂತ ಮನಸಿಟ್ಟು ಕೇಳಿ ಮೈಮರೆತ ನಿಮ್ಮನ್ನು ಕಾಡಲಾರೆ, ನನ್ನ ಬಾಲ್ಯದೊಂದಿಗೆ ತಮ್ಮ ಬಾಲ್ಯದ ಅಂಗಳಕ್ಕೆ ನೀವೂ ಹೊರಟಿದ್ದೀರೇನೋ, ಓದಿ ಕೇಳಿದ, ಕೇಳಿ ಓದಿದ ಅಣ್ಣಗಳಿರಾ, ಅಕ್ಕಗಳಿರಾ, ನಿಮಗಿದೋ ನನ್ನ ಶರಣು ಶರಣು!

ಸಂಚಯ ಸಾಹಿತ್ಯ ಸ್ಪರ್ಧೆ ಬಹುಮಾನಿತ ಲೇಖನ

ನಂ. ೩೮, ೧ನೇ ಕ್ರಾಸ್, ಗಂಗಮ್ಮಗುಡಿ ಬೀದಿ ಎ.ನಾರಾಯಣಪುರ ಬಡಾವಣೆ, ದೂರವಾಣಿ ನಗರ ಅಂಚೆ, ಬೆಂಗಳೂರು-೫೬೦ ೦೧೬. ಫೋನ್.ನಂ: ೯೯೦೦೨೬೫೮೧೯



ಕತೆಯ ಕತೆ

ಇವತ್ತಿನ ಕಥಾಜಗತ್ತಿನ ಬಗ್ಗೆ ಒಂದು ಸಂವಾದ

ಇವತ್ತಿನ ಸಣ್ಣ ಕತೆಗಳ ಸಾಧ್ಯತೆ ಬಿಕ್ಕಟ್ಟುಗಳು, ಅನುಭವದ ಸಂವಹನದ ತೊಡಕುಗಳನ್ನು ಕುರಿತು, ಕನ್ನಡದ ವಿವಿಧ ವಯೋಮಾನದ ಹಿನ್ನೆಲೆಯ ಕತೆಗಾರರು ತಂತಮ್ಮ ಅನಿಸಿಕೆಗಳನ್ನು ಹಂಚಿಕೊಂಡಿದ್ದಾರೆ. ಒಂದು ಭಿನ್ನ ಬಗೆಯ ಸಾಹಿತ್ಯ ಸಂವಾದದ ಬರಹರೂಪ ಇದು.

ಜಯಪ್ರಕಾಶ ನಾರಾಯಣ : ಕನ್ನಡ ಕಥಾಲೋಕ ಬಹಳ ದೊಡ್ಡ ಜಗತ್ತು. ಎಷ್ಟು ಕತೆಗಳು ಬರುತ್ತಾ ಇವೆ ಎಂದರೆ ನಾವು ಸಂಮೋಹನಕ್ಕೊಳಗಾಗುವಷ್ಟು ವ್ಯಾಪಕತೆಯನ್ನು ಕನ್ನಡದ ಕಥಾಜಗತ್ತು ಪಡೆದಿದೆ. ಹಾಗೆಯೇ ಕಥೆಗಾರರ ಸಂಖ್ಯೆಯೂ ದೊಡ್ಡದಿದೆ. ಇದರ ಬಗ್ಗೆ ಒಳ್ಳೆಯ ಮಾತುಗಳು ಇವೆ. ಹಾಗೆಯೇ ಈ ಹೊಸ ತಲೆಮಾರಿನ ಕತೆಗಾರರ ಬಗ್ಗೆ ಪ್ರೀತಿಯ ಆಕ್ಷೇಪಣೆಗಳೂ ಇವೆ. ಈಗ ಕತೆಗಾರರಾಗಲು ಸಾಕಷ್ಟು ಆಕರ್ಷಣೆಗಳಿವೆ. ಏಕೆಂದರೆ ದೊಡ್ಡ ಮೊತ್ತದ ಸ್ಪರ್ಧೆಗಳಿವೆ, ಹಿರಿಯ ಪತ್ರಿಕೆಗಳು ಪ್ರಕಟಿಸುತ್ತಾವೆ, ಖ್ಯಾತನಾಮರು ಪ್ರಾಯೋಜಿಸುತ್ತಾರೆ. ತುಂಬ ಅದೃಷ್ಟ ಇದ್ದರೆ, ಯಾವುದಾದರೂ ಚಾನೆಲ್‌ನಲ್ಲಿ ಕತೆ ಸೀರಿಯಲ್ಲೂ ಆಗಬಹುದು. ಹೀಗೆ ಸ್ಪರ್ಧೆಯ ಮುಖಾಂತರ ಹೊಸ ತಲೆಮಾರಿನ ಕತೆಗಾರರು ಬರುತ್ತಿದ್ದಾರೆ ಮತ್ತು Record ಆಗುತ್ತಿದ್ದಾರೆ. ಆದರೆ ಇಷ್ಟು ಹೆಚ್ಚು ಕತೆಗಳು ಬರುವುದೇ ಭಾಷೆಯ ಹೆಚ್ಚುಗಾರಿಕೆಯಲ್ಲ ಎನ್ನುವ ಟೀಕೆಯೂ ಇದೆ. ಕನ್ನಡದಲ್ಲಿ ಬರುತ್ತಿರುವ ಕತೆಗಳ ವೈವಿಧ್ಯ, ಧ್ವನಿ, ಅಚ್ಚರಿಯೆಂಬಂತೆ ಕಾಣುವ ಅವುಗಳ ಪ್ರಬೇಧಗಳು, ಅದರಿಂದ ಹುಟ್ಟುತ್ತಿರುವ ಪ್ರಶ್ನೆ, ನಮಗೆ ಗೊತ್ತಿಲ್ಲದ ಲೋಕವನ್ನು ಅನಾವರಣಗೊಳಿಸುತ್ತಿರುವ ರೀತಿ ಇವೆಲ್ಲವನ್ನೂ ನಾವು ಗಮನಿಸಬೇಕಾಗುತ್ತದೆ. ಇವೆಲ್ಲ ಮಾಡಬೇಕು ಅಂದರೆ ನಮ್ಮೆಲ್ಲ ಇತಿಮಿತಿಗಳೊಂದಿಗೆ ಅದರ Merits ಮತ್ತು limits ಎರಡನ್ನೂ ಮುಕ್ತವಾಗಿ ಚರ್ಚೆ ಮಾಡಬೇಕು. ಆದರೆ ಕತೆ ಬರುತ್ತಿದೆ, ವಿಮರ್ಶೆ ಬರುತ್ತಿದೆಯೇ ಎನ್ನುವ ಪ್ರಶ್ನೆಯೂ ಇದೆ. ಏಕೆಂದರೆ ತುಂಬ ಜನ ವಿಮರ್ಶೆಯು ೫೦ರ ವಯಸ್ಸಿನ ಆಜುಬಾಜಿನಲ್ಲಿರುವ ಲೇಖಕರ ಹತ್ತಿರದಲ್ಲಿ ಬಂದು ನಿಂತುಬಿಟ್ಟಿದೆ ಎನ್ನುತ್ತಾರೆ. ಇನ್ನು ಈಚಿನವರ ಬಗ್ಗೆ ಚರ್ಚಿಸುವುದೇ ಇಲ್ಲ ಎನ್ನುವ ಆಕ್ಷೇಪವಿದೆ. ಹಿಂದೆಯಲ್ಲ ಒಬ್ಬ ಕತೆಗಾರನ ಜತೆ ಒಬ್ಬ ವಿಮರ್ಶಕನೂ ಹುಟ್ಟುತ್ತಿದ್ದ. ಆದರೆ ಈಗ ಈ ರೀತಿಯಿಲ್ಲ ಎನ್ನುವುದು ಹೊಸಬರ ತಕರಾರು. ಹೊಸದನ್ನು ಹಳಬರು ಓದುತ್ತಾ ಇಲ್ಲ. ಅವರು ಒಂದು ಹಂತಕ್ಕೆ ಬಂದು ನಿಂತುಬಿಟ್ಟಿದ್ದಾರೆ. ಈ ರೀತಿಯ ಅನೇಕ ಪ್ರಶ್ನೆಗಳು, ಅಭಿಪ್ರಾಯಗಳು, ಟೀಕೆಗಳು, ಮೆಚ್ಚುಗೆಗಳು ಎಲ್ಲ ಇವೆ.

ರಾಘವೇಂದ್ರ ಪಾಟೀಲ : ಹೊಸ ಕತೆಗಾರ ಆಯ್ಕೆ ಮಾಡಿಕೊಳ್ಳಬೇಕಾಗಿರುವಂತಹ ಅನಿವಾರ್ಯ Source ಅಂತ ಅಂದರೆ ತನ್ನ ಅಪ್ಪ ಆಗಿರುತ್ತಾನೆ, ತನ್ನ ಪರಿಸರ ಆಗಿರುತ್ತದೆ. ಅಥವಾ ತಾನು ಬದುಕಿದಂತಹ ಪರಿಸರ ಆಗಿರುತ್ತೆ. ಆ ಹಿನ್ನೆಲೆಯೊಳಗೇ ತುಂಬ ಶ್ರೀಮಂತವಾಗಿರುವಂಥದ್ದು ಬಹುಶಃ ಗ್ರಾಮೀಣ ಪರಿಸರ ಅಂತ ಅಂದುಕೊಳ್ಳುತ್ತೇನೆ. ಇದಕ್ಕೆ ಸಂಬಂಧಿಸಿದ ಹಾಗೆ ನನಗನ್ನಿಸಿದ ಒಂದೆರಡು ಸಂಗತಿಗಳನ್ನು ಇಲ್ಲಿ ಹೇಳುತ್ತೇನೆ; ನೀವು ಕತೆಯ ಮಾಧ್ಯಮವನ್ನು ಅನುಸರಿಸಿ, ಬದುಕನ್ನು ಒಂದು ಅಭಿಜಾತ ಮಾರ್ಗವಾಗಿ, ಸಮಗ್ರವಾಗಿ ಹಿಡಿಯುವುದಕ್ಕೆ ಹೊರಟರೆ ಬಹುಶಃ ನೀವು ಗ್ರಾಮೀಣ ವಸ್ತುವನ್ನು ಇಟ್ಟುಕೊಂಡು ಬರೆಯಬೇಕಾಗುತ್ತದೆ. ಕನ್ನಡದ ಹಿರಿಯ ಕತೆಗಾರರನ್ನು ನೋಡುತ್ತಾ ಬಂದರೆ, ಅವರೆಲ್ಲ ಮತ್ತೆ ಮತ್ತೆ ತಮ್ಮ ಹಳ್ಳಿಗೆ ಹೋಗುವುದನ್ನು ಗಮನಿಸಬಹುದು. ಉದಾಹರಣೆಗೆ ಚಿತ್ತಾಲರಾಗಿರಬಹುದು, ಅನಂತಮೂರ್ತಿಯಾಗಿರಬಹುದು, ತೇಜಸ್ವಿಯಾಗಿರ ಬಹುದು. ಇವರ ಕತೆಗಳಲ್ಲಿ ಬರುವ ಗ್ರಾಮೀಣ ಪರಿಸರ ಮತ್ತು ಗ್ರಾಮೀಣ ಅನುಭವಗಳು, ಈ ಬದುಕನ್ನು ಆದಷ್ಟು ಸಮಗ್ರವಾಗಿ ಹಿಡಿಯುವ ಪ್ರಯತ್ನವಾಗಿ ನಾವು ಕಾಣಬಹುದು. ಆದರೆ ಇಂತಹ ಅನುಭವವನ್ನು Urban Experienceನಲ್ಲಿ ಕಾಣುವುದು ಸ್ವಲ್ಪ ಕಷ್ಟ; ಎಲ್ಲೋ ಒಂದು ಕಡೆ ಅವು ಭಾವಗೀತೆಯ ಸ್ವರೂಪದ ಕತೆಗಳು ಅನ್ನಿಸುತ್ತವೆ. ನಮ್ಮ ನಗರದ ಅನುಭವಗಳು ನಮಗೆ Temporal Experience ಆಗಿರುವುದರಿಂದ, ಇನ್ನೂ ಅಷ್ಟು ಬೇರನ್ನು ಬಿಡದೆ ಇರುವುದರಿಂದ, ನಮಗೆ ಶಕ್ತಿಯುತವಾದ ಕತೆ ಬರೆಯುವುದಕ್ಕೆ ಸಾಧ್ಯವಾಗದೇ ಇರಬಹುದು. ಅಭಿಜಾತ ಮಾರ್ಗದ ಒಂದು epic ಮಾದರಿಯ ಕತೆಯನ್ನು ನೀವು ಬರೆಯುವುದಾದರೆ, ಅನಿವಾರ್ಯವಾಗಿ ಗ್ರಾಮೀಣ ಬದುಕಿನ experienceನ್ನು ಅವಲಂಬಿಸಬೇಕು ಅಂತ ನನಗೆ ಅನಿಸುತ್ತದೆ. ಹೊಸ ಕತೆಗಾರರು ಈಗ ನಾನು ಹೇಳಿದ ಅನುಭವವನ್ನು ಹೊರತುಪಡಿಸಿ, ಬೇರೆ ರೀತಿಯಲ್ಲಿ ಬರೆಯುವ ಪ್ರಯತ್ನವನ್ನು ಮಾಡುವ ಸಾಧ್ಯತೆ ಇದೆ. ಗೆಳೆಯ ವಿವೇಕ ಹೇಳುವ ಹಾಗೆ ಇಂತಹ idealogy ಹೊಸ ಕತೆಗಾರರನ್ನು ಕಾಡುವ ಪ್ರಮಾಣ ಬಹಳ ಹೆಚ್ಚಾಗಿದೆ.

ಎಸ್.ದಿವಾಕರ : ಸ್ವಾತಂತ್ರ್ಯಕ್ಕೆ ಮುಂಚೆ ಇದ್ದಂತಹ ನಮ್ಮ ಆದರ್ಶದ ಮೌಲ್ಯಗಳು ನಮಗೆ ಇಲ್ಲ. ಸ್ವಾತಂತ್ರ್ಯಾನಂತರದ ೬೦ ವರ್ಷಗಳು ಕಳೆದ ಮೇಲೆ ಈ ಮೌಲ್ಯಗಳ ಮಾತು ಹೇಳಿದರೆ ನಾವು ನಗೆಪಾಟಲಾಗುತ್ತೇವೆ. ಇಂತಹ ಸ್ಥಿತಿಯಲ್ಲಿ ಹಿಂದೆ ಇದ್ದಂತಹ ಹಳ್ಳಿಯ ಜೀವನ ಇವತ್ತು ಇದೆಯೇ ಅನ್ನುವುದರ ಬಗ್ಗೆ ನನಗೆ ಸಂಶಯ ಇದೆ. ಮಾಸ್ತಿ, ಕುವೆಂಪು, ಆನಂದ ಮುಂತಾದ ಆ ಕಾಲದ ಕತೆಗಾರರು ಬರೆದಂತಹ ಜೀವನ ಇವತ್ತು ನಮ್ಮಲ್ಲಿ ಕಾಣುವುದರ ಬಗ್ಗೆ ನನಗೆ ಅನುಮಾನವಿದೆ. ಈ ಗ್ಲೋಬಲೈಸೇಷನ್‌ನ ಹಿನ್ನೆಲೆಯಲ್ಲಿ ನೋಡಿದಾಗ ಹಳ್ಳಿ ಹಳ್ಳಿಯಾಗಿ ಉಳಿದಿದ್ದರೂ ಈ ಜಾಗತೀಕರಣದ ಬಿಸಿಲಲ್ಲಿ ತಟ್ಟಾಡುತ್ತಾ ಇದೆಯೇನೋ ಅನಿಸುತ್ತದೆ. ಬೆಂಗಳೂರಿನಂತಹ ನಗರದಲ್ಲೇ ಸುಮಾರು ೨೦ ವರ್ಷಗಳ ಹಿಂದೆ ಕಂಡರಿಯದಂತಹ ನಗರೀಕೃತ ಅಥವಾ ಕಾರ್ಪೋರೇಟ್ ಜಗತ್ತನ್ನು ನಾವು ಇಂದು ನೋಡುತ್ತಿದ್ದೇವೆ. ಇಂತಹ Corporate ಜಗತ್ತಿನಿಂದ ಈ ನಗರ ಜೀವನ ಸಹ ತೀರಾ ಅಸ್ತವ್ಯಸ್ತವಾಗಿದೆ. ಇಂತಹ ವ್ಯತಿರಿಕ್ತ ಸ್ಥಿತಿಯಲ್ಲಿರುವ ಕತೆಗಾರ ಜೀವನವನ್ನು ಹೇಗೆ ಕತೆಗಳಲ್ಲಿ ನಿರ್ವಹಿಸುತ್ತಾನೆ ಅನ್ನುವ ಪ್ರಶ್ನೆ ಸಹ ಇದೆ. ಇದಕ್ಕೆ ಪೂರಕವಾಗಿ ಒಂದು ಮಾತನ್ನು ಹೇಳುತ್ತೇನೆ. ನವೋದಯದ ಕಾಲದ ಲೇಖಕರೆಲ್ಲ ಒಂದು ರೀತಿಯಲ್ಲಿ ಬದುಕನ್ನು ಇಡಿಯಾಗಿ ನೋಡುತ್ತಿದ್ದರು; ನವ್ಯರ ಕಾಲದಲ್ಲಿ ಬದುಕನ್ನು ಬಿಡಿಬಿಡಿಯಾಗಿ ನೋಡುತ್ತಿದ್ದರು. ಒಂದು ಉದಾಹರಣೆಯನ್ನು ಕೊಡುವುದಾದರೆ, ಶಾಂತಿನಾಥ ದೇಸಾಯಿಯಂತಹ ಲೇಖಕ ನವೋದಯದ ಕಾಲದಲ್ಲಿ ಇರಲೇ ಇಲ್ಲ. ಮನುಷ್ಯನ ಮನಸ್ಸನ್ನು

ಪಾತಾಳ ಗರಡಿ ಹಾಕಿ ನೋಡುವಂತಹ ಒಂದು ಕ್ರಮವನ್ನು ಅವರ ಕತೆಗಳಲ್ಲಿ ಮತ್ತು ಕಾದಂಬರಿಯಲ್ಲಿ ನಿರೂಪಿಸಿದರು. ಆದರೆ ಎಲ್ಲ ನವ್ಯರೂ ಹಾಗಿರಲಿಲ್ಲ. ಆದರೆ ಇವತ್ತು ಮನುಷ್ಯನ ಮನೋವ್ಯಾಪಾರಕ್ಕೆ ವಿಶೇಷವಾದಂತಹ ಮಹತ್ವ ಕೊಟ್ಟು ಬಹುಪಾಲು ಕತೆಗಾರರು ಬರೆಯುತ್ತಿದ್ದಾರೆ. ಮತ್ತೆ ಮೊದಲಿನ ತರಹವೇ ಅಂದರೆ ನವೋದಯದ ಕಾಲದಲ್ಲಿದಂತೆಯೇ ಈಗ ಮತ್ತೆ ಸಾಧ್ಯವಾದಷ್ಟು ಮಟ್ಟಿಗೆ ಬದುಕನ್ನು ಇಡಿಯಾಗಿ ನೋಡುತ್ತಿದ್ದಾರೆ. ಜೊತೆಗೆ ಇಡಿಯಾಗಿ ಒಂದೊಂದು Community ಬರುತ್ತಿದೆ. ಅದೇ ಒಂದು ಇಡಿ, ಒಂದು Representation ಅನ್ನುವ ಭಾವನೆ ಬರುವ ಹಾಗೆ ಕತೆಗಳು ಹುಟ್ಟುತ್ತವೆ ಅಂತ ನನಗೆ ಅನ್ನಿಸುತ್ತದೆ. ಈ ಹಿನ್ನೆಲೆಯನ್ನು ಇಟ್ಟುಕೊಂಡು ನೋಡಿದಾಗ ನನಗೆ Linal Trilling ಒಂದು ಕಡೆ ಹೇಳಿದ ಮಾತು ನೆನಪಾಗುತ್ತದೆ. Cannot find Kafka in Talstoy. ಆದರೆ ಟಾಲಸ್ಟಾಯನಲ್ಲಿ ಕಾಫ್ಕ ಕೂಡ ಬಂದು ಹೋಗುತ್ತಾನೆ. ನಮ್ಮಲ್ಲಿ ದೇವನೂರರಲ್ಲಿ ಮಾಸ್ತಿಯಿಲ್ಲ. ಆದರೆ ಮಾಸ್ತಿಯಲ್ಲಿ ದೇವನೂರು ಬಂದು ಹೋಗುತ್ತಾರೆ. ಮಾಸ್ತಿಯವರ ಸಂವೇದನೆಯಾದ ಒಟ್ಟು ಜೀವನವನ್ನು ಹಿಡಿಯಬೇಕು ಅನ್ನುವುದನ್ನು ಮೀರಿದ್ದು ದೇವನೂರದು. ಅಂದರೆ ಇಲ್ಲೊಂದು ಜಗತ್ತಿದೆ ಎಂದು ತೋರಿಸುವಂತಹುದು. ಇದಕ್ಕೆ ಭೂತಗನ್ನಡಿ ಹಿಡಿದಾಗ ಈ ಜಗತ್ತು ನೀವು ಕಲ್ಪಿಸಿಕೊಂಡಂತಹ ಜಗತ್ತಿಗಿಂತ ವಿಶಾಲವಾಗಿದೆ ಅಂತ ತೋರಿಸುವಂತಹದ್ದು. ಇದು ಮುಖ್ಯವಾದ ಬೆಳವಣಿಗೆ ಅಂತ ನನಗೆ ಅನಿಸುತ್ತದೆ.

ಇನ್ನು ನಮ್ಮ ರಾಘವೇಂದರ ಪಾಟೀಲರು ಹೇಳುವಂತಹ ಗ್ರಾಮೀಣ ಪರಿಸರ. ಇದು ನನಗೂ ಬಹಳ ದಿನದಿಂದ ಕಾಡುತ್ತಿರುವಂತಹ ಪ್ರಶ್ನೆ. ನಮ್ಮಲ್ಲಿ ೧೦೦ಕ್ಕೆ ೯೯ರಷ್ಟು ಲೇಖಕರು ಗ್ರಾಮೀಣ ಪರಿಸರದಿಂದ ಬಂದವರಿರಬಹುದು. ಅಂತಹ ಲೇಖಕರು ನಗರದ ಪರಿಸರದಲ್ಲಿದ್ದರೂ ಗ್ರಾಮೀಣ ಅನುಭವವನ್ನು ಅವರ ಕತೆಗಳಲ್ಲಿ ನಾವು ಕಾಣಬಹುದು. ಆದರೆ ನಗರಗಳಲ್ಲೇ ಹುಟ್ಟಿ ಬೆಳೆದಂತಹ ಲೇಖಕರಿಗೆ, ಗ್ರಾಮೀಣ ಪರಿಸರದ ಪರಿಚಯವಿಲ್ಲದವರಿಗೆ, ಅದನ್ನು Source ಆಗಿಟ್ಟುಕೊಂಡು ಕತೆ ಬರೆಯುವ ಸಾಧ್ಯತೆ ಇದೆಯೇ? ಬಹುಶಃ ಆಗುವುದಿಲ್ಲ ಅನಿಸುತ್ತದೆ. ಅಥವಾ ಇದ್ದರೂ ಯಾರೂ ಕತೆ ಬರೆಯುತ್ತಿಲ್ಲವೆ? ಇದು ಕೂಡ ಚರ್ಚೆಯಾಗಬೇಕು.

ಇವತ್ತು ಇನ್ನೊಂದು ಬಗೆಯ ಕತೆಗಾರರನ್ನು ನಾವು ನೋಡುತ್ತಿದ್ದೇವೆ. ಅವರು ಬದುಕನ್ನು ಇಡಿಯಾಗಿ ನೊಡುವುದಕ್ಕಿಂತ ಅವರ ಅನುಭವಕ್ಕೆ ದಕ್ಕುವ ಕೆಲವು ತುಣುಕುಗಳನ್ನಷ್ಟೇ ಇಟ್ಟು ಕತೆಯನ್ನು ರೂಪಿಸುತ್ತಾರೆ. ಅಲ್ಲಿ ಎಷ್ಟು ಸಾಧ್ಯವೋ ಅಷ್ಟು ಕಲಾತ್ಮಕತೆಯನ್ನು ತರುವುದಕ್ಕೆ ಪ್ರಯತ್ನಿಸುತ್ತಾರೆ. ಇದರಿಂದ ಇಡೀ ಕತೆ ಒಂದು ರೂಪಕವಾಗಿ ಅಥವಾ metaphor ಆಗುವುದನ್ನು ನಾವು ನೋಡಬಹುದು.

ಇವತ್ತಿನ ಐಟಿ ಜಗತ್ತು ಮಧ್ಯಮ ವರ್ಗದ ಜನರ ಬದುಕನ್ನು ಏರುಪೇರಾಗಿಸಿದೆ. ಇದು ಒಂದು ಕೌಟುಂಬಿಕವಾಗಿರುವಂತಹ ಒಗ್ಗಟ್ಟನ್ನು ಮುರಿಯುತ್ತಿದೆ. ಹಾಗೆಂದು ಈ ಅನುಭವಗಳನ್ನು ನಾವು ಕಡೆಗಣಿಸುವ ಸ್ಥಿತಿಯಲ್ಲೂ ಇಲ್ಲ. ಐಟಿ ಜಗತ್ತಿನಲ್ಲಿರುವವರು ಕತೆ ಬರೆಯುತ್ತಿದ್ದರೂ ಅದು ನಮ್ಮ ಗ್ರಹಿಕೆಗೆ ಬರುತ್ತಿಲ್ಲ. ಬಹುಶಃ ಆ ಜಗತ್ತಿನ ಅನುಭವ ನಮಗೆ ರೂಪಕ ಆಗುತ್ತಿಲ್ಲ ಅನಿಸುತ್ತದೆ. ನಮ್ಮ ವಸುಧೇಂದ್ರನಂತಹವರು ಹಲವು ಕತೆಗಳಲ್ಲಿ ಯಶಸ್ವಿಯಾದರೂ, ಬಹಳಷ್ಟು ಮಟ್ಟಿಗೆ ಹಳ್ಳಿಯನ್ನು ಕುರಿತೇ ಹೊರತು, ಐಟಿ ಜಗತ್ತಿನ ನಿರೂಪಣೆಯಲ್ಲಲ್ಲ. ಪ್ರತಿದಿನ ಈ ಕಾರ್ಪೊರೇಟ್ ಜಗತ್ತಿನ ಮುಖಾಮುಖಿ ಆಗುತ್ತಿದ್ದರೂ ಅದರ ನಿರೂಪಣೆಯಲ್ಲಿ, ಅದನ್ನು ರೂಪಕವಾಗಿ ಪರಿವರ್ತಿಸುವಲ್ಲಿ ಅವರು ಸೋಲುತ್ತಿದ್ದಾರೆ. ಅದನ್ನು ಕಲಾತ್ಮಕವಾಗಿ ಪರಿವರ್ತಿಸುವಲ್ಲಿ

ಅವರು ಸೋಲುತ್ತಿದ್ದಾರೆ. ಉದಾಹರಣೆಗೆ ಹೇಳುವುದಾದರೆ ಅಮರೇಶ ನುಗಡೋಣಿ ಅವರ ಬಹುಪಾಲು ಕತೆಗಳಲ್ಲಿ, ಸಮಾಜದ ಒಂದು ವರ್ಗದ ಆಚರಣೆಗಳು, ದಿನನಿತ್ಯದ ಬದುಕನ್ನು ತೀರಾ ದಟ್ಟವಾದ ವಿವರಗಳಲ್ಲಿ ಅವರು ಕಟ್ಟಿಕೊಡುತ್ತಾರೆ. ಚೋಮನ ದುಡಿಯಂತಹ ಕಾದಂಬರಿಯನ್ನು ತೆಗೆದುಕೊಂಡರೆ ಇಂತಹ ವಿವರ ನಮಗೆ ಸಿಗುವುದೇ ಇಲ್ಲ. ಚೋಮನ ಸಾಮಾಜಿಕ, ಧಾರ್ಮಿಕ ನಂಬಿಕೆಗಳೆಲ್ಲ ನಗಣ್ಯವಾಗಿಬಿಡುತ್ತವೆ. ಈ ತರಹದ ಕತೆಗಾರರನ್ನು ಇತ್ತೀಚೆಗೆ ಗಮನಿಸಿದ್ದೇನೆ. ಒಂದು ಕತೆಗೆ ಇಷ್ಟು ಸಾಮಾಜಿಕ ವಿವರಗಳು ಅಗತ್ಯವೇ? ಈ ಅಗತ್ಯವಿದ್ದರೆ ಅದು ಕತೆಗೇ ಬಾಧಕವಲ್ಲವೇ? ಇದು ನನಗೆ ತುಂಬಾ ದಿನದ ಪ್ರಶ್ನೆ. ಎಲ್ಲಕ್ಕಿಂತ ಹೆಚ್ಚಾಗಿ ಇವತ್ತು Craftmanship ಬಗ್ಗೆ ನಮ್ಮ ಹಿಂದಿನವರು ತೋರಿಸಿದ ಕಾಳಜಿಯನ್ನು ನಾವು ತೋರಿಸುತ್ತಿಲ್ಲ ಅಂತ ನನಗೆ ಅನ್ನಿಸುತ್ತದೆ.

ಇನ್ನು ವಿಮರ್ಶೆಯ ಬಗ್ಗೆ ಹೇಳುವುದಾದರೆ ನವ್ಯರ ಕಾಲದಲ್ಲಿ ವಿಮರ್ಶಕರು ಹುಟ್ಟಿಕೊಂಡರು ಎನ್ನುವುದು ನಮಗೆಲ್ಲ ಗೊತ್ತು. ಆಗಿದ್ದವರೇ ಈಗಲೂ ವಿಮರ್ಶಕರಾಗಿ ಉಳಿದಿದ್ದಾರೆ. ನಮ್ಮ ಸಮಕಾಲೀನರಲ್ಲಿ ಯಾಕೆ ವಿಮರ್ಶಕರು ಬರುತ್ತಿಲ್ಲ? ಇನ್ನೂ ಕೂಡ ಹಳಬರೇ, ಸಿ.ಎನ್. ರಾಮಚಂದ್ರನ್ ಮುಂತಾದವರೇ ವಿಮರ್ಶೆ ಮಾಡಬೇಕು ಅಂತ ಯಾಕೆ ನಿರೀಕ್ಷಿಸಬೇಕು? ನಮ್ಮ ವಿಮರ್ಶಕರು ಕೂಡ ನಮ್ಮ ಇತ್ತೀಚಿನ ಬಿಕ್ಕಟ್ಟನ್ನು ಬಹಳ ಸಮಗ್ರವಾಗಿ ಗ್ರಹಿಸುತ್ತಾರೆ ಅನ್ನುವುದರ ಬಗ್ಗೆ ನನಗೆ ಸಂಶಯವಿದೆ. ಇತ್ತೀಚಿನ ಸಾಹಿತ್ಯ ಸೃಷ್ಟಿಯನ್ನು ತೀರಾ ಒಳನೋಟದಿಂದ ಗ್ರಹಿಸುವ ಮನಸ್ಸುಗಳು ನಮ್ಮಲ್ಲೇ ಯಾಕೆ ಹುಟ್ಟಿಕೊಳ್ಳುತ್ತಿಲ್ಲ? ಇದು ಚರ್ಚೆಯಾಗಬೇಕು.

ಆನಂದ ಋಗ್ವೇದಿ : ಈ ಹೊತ್ತು ಕತೆಗಳು ಮತ್ತು ಕತೆಗಾರರು ಒಂದು ದೊಡ್ಡ ಬಿಕ್ಕಟ್ಟನ್ನು ಎದುರಿಸುತ್ತಿದ್ದಾರೆ. ಗ್ರಾಮೀಣ ಸಮಾಜವನ್ನು ಇಡಿಯಾಗಿ, ದಟ್ಟವಾಗಿ ಯಾಕೆ ಹಿಡಿದಿಡಲು ಆಗುತ್ತಿಲ್ಲ ಅಂದರೆ ನಮ್ಮ ಬದುಕಿನಲ್ಲಿ ಗ್ರಾಮ್ಯ ಮತ್ತು ನಗರದ ಅನೇಕ ಸಂವೇದನೆಗಳನ್ನು ನಾವು ಒಟ್ಟಾಗಿ ಗ್ರಹಿಸುತ್ತಿದ್ದೇವೆ. ಒಟ್ಟಾಗಿ ಬದುಕುತ್ತಿದ್ದೇವೆ. ಹಾಗಾಗಿ ಈ ಸಂದರ್ಭದಲ್ಲಿ ನಾವು ಗ್ರಾಮ್ಯವನ್ನು ಎಲ್ಲಿ ಹುಡುಕುವುದು? ಅಥವಾ ಬೆಂಗಳೂರು ಹೊರತಾದಂತಹುದು ಗ್ರಾಮೀಣವೋ ಅಥವಾ ಊಳಿಗಮಾನ್ಯವಿರುವಂತಹದ್ದು ಅಥವಾ ರೈತ ಕುಟುಂಬ ಇರುವಂತಹದ್ದು ಅಥವಾ ಈ ತರಹದ ತೊಡಕುಗಳಿಂದಲೇ ಒಂದು ಅಸ್ಪಷ್ಟ ಚಹರೆಯನ್ನು ಇಟ್ಟುಕೊಂಡಿದ್ದೇವೆ. ನಮ್ಮ ಸವಾಲುಗಳು ಹುಟ್ಟಿಕೊಳ್ಳುವುದು ಇಲ್ಲಿಯೇ. ಬಹುಮುಖ್ಯವಾಗಿ ನಮ್ಮ ಹೊಸ ಬರಹಗಾರರಿಗೆ ಇರುವಂಥದ್ದು ಸಾಂಸ್ಕೃತಿಕ ಅನುಸಂಧಾನದ ಕೊರತೆ. ನಾವು ಅನಂತಮೂರ್ತಿ, ಚಿತ್ತಾಲರನ್ನು ಓದಿದ್ದೇವೆ. ಏಕೆಂದರೆ ಜನ ವಿಮರ್ಶೆ ಜಾಸ್ತಿ ಬರೆದಿದ್ದರು. ವಿಮರ್ಶೆ ಓದಿದ್ದರಿಂದ ಕತೆ ಅರ್ಥವಾಯಿತು. ಅದಕ್ಕೇ ಓದಿದ್ದೇವೆ. ೮೦-೯೦ರಲ್ಲಿ ಬಂದಂತಹ ಕತೆಗಳನ್ನು ಯಾಕೆ ಓದಿಲ್ಲ ಅಂದರೆ ಅದಕ್ಕೆಲ್ಲ ವಿಮರ್ಶೆ ಬಂದಿಲ್ಲ. ಇಂತಹ ಸಾಂಸ್ಕೃತಿಕ ಸಿದ್ಧ ಪಟ್ಟಿಯ ಸಿದ್ಧತೆಯನ್ನು ಮಾಡಿಕೊಳ್ಳದೆ ಇದ್ದುದರಿಂದ ನಮ್ಮ ಕತೆಗಳು ತುಂಬ ಪೇಲವವಾಗುತ್ತಿರುವುದು ಸಹಜ. ಆದರೆ ಅದು ಸಮರ್ಥನೀಯ ಅಲ್ಲ ಅನ್ನುವುದು ಸಹ ನಿಜ.

ಕಥಾಬಂಧ ಅನ್ನುವುದು ಕಾಲ್ಪನಿಕತೆಯೋ, ವಾಸ್ತವಿಕತೆಯೋ ಅಥವಾ ಅವೆರಡರ ಮಿಶ್ರಣವಾದಂತಹ magic realism ಅನ್ನುವಂತಹದ್ದೋ, ಈ ಎಲ್ಲ ಜಿಜ್ಞಾಸೆಗಳನ್ನು ನಾವು ಇಟ್ಟುಕೊಂಡಿದ್ದೇವೆ. ಐಟಿ ಮತ್ತು ಕಾಲ್‌ಸೆಂಟರ್ ಜಗತ್ತಿನ ತಲ್ಲಣಗಳನ್ನು, ಸೂಕ್ಷ್ಮಗಳನ್ನು ಬಿಂಬಿಸುವುದಕ್ಕೆ ಆಗುವುದಿಲ್ಲ. ಅಂದರೆ ಆ ಪರಿಸರವನ್ನು, ಆ ಸಂವೇದನೆಯನ್ನು ಕಟ್ಟಿಕೊಟ್ಟರೆ ಆಗ ಓದುಗ ತನ್ನದಲ್ಲದ ಸಂವೇದನೆಯಲ್ಲಿನ ಅನುಭವಗಳನ್ನು ಗ್ರಹಿಸುವುದು ಕಷ್ಟವಾಗುತ್ತದೆ. ಇದು ಬಹಳ ದೊಡ್ಡ ಸಮಸ್ಯೆ. ಇತ್ತ ಗ್ರಾಮ್ಯವೂ ಅಲ್ಲದ, ಅತ್ತ ನಗರೀಕರಣವೂ ಅಲ್ಲದ

ಮಧ್ಯದಲ್ಲಿ ಬೆಳೆದು ಬಂದಂತಹ ಕತೆಗಾರರಿಗೆ ಮತ್ತು ಈ ರೀತಿಯ ಸಿದ್ಧತೆ ಇಲ್ಲದಿರುವಂತಹ ಕತೆಗಾರರಿಗೆ ಈ ನಿಜವಾದ ಸಮಸ್ಯೆಗಳು ವೈಯಕ್ತಿಕ ಒಳತೋಟಗಳು ಸಹ ಹೌದು. ಆ ಆಕೃತಿಯ ಬಗ್ಗೆ, ನಿರೂಪಣೆಯ ತಂತ್ರಗಾರಿಕೆಯ ಬಗ್ಗೆ ಬಹಳ ಗಮನಹರಿಸುವಂತಹ ನನ್ನ ಕತೆಗಳನ್ನು ವಿಮರ್ಶಕರು ನವ್ಯಾತಿನವ್ಯವೆಂದು ಹೇಳುತ್ತಾರೆ. ನಾವು ನಗರೀಕೃತರಾದವರು ಮತ್ತೆ ಹಳೆಯದಕ್ಕೆ ಹೋಗಿ ಬರೆಯುವುದು ಸ್ವಲ್ಪ ಕಷ್ಟವಾಗುತ್ತದೆ. ಈ ವಿನ್ಯಾಸವನ್ನು ನಮಗೆ ಹ್ಯಾಗೆ ಬೇಕೋ ಹಾಗೆ ನಿರ್ಮಾಣ ಮಾಡಿಕೊಳ್ಳುವುದು ಸಾಧ್ಯವಿಲ್ಲ. ಏಕೆಂದರೆ ಇದಕ್ಕೊಂದು ಪರಂಪರೆಯಿದೆ. ಈ ಬಿಕ್ಕಟ್ಟನ್ನು ನಮಗೆ ಗ್ರಹಿಸುವುದಕ್ಕೆ ಸಾಧ್ಯವಿಲ್ಲ ಎಂದರೆ ಇದರ ಸೂಕ್ಷ್ಮ ಚಹರೆಯನ್ನು ಗ್ರಹಿಸುವುದಕ್ಕೂ ಸಾಧ್ಯವಿಲ್ಲ. ಇದಕ್ಕೆ ಆಗಬೇಕಾದಂತಹ ಪ್ರರ್ವಸಿದ್ಧತೆ ಬಹಳ ದೊಡ್ಡದು. ವಿವೇಕ ಶಾನಭಾಗರ 'ಹುಲಿ ಸವಾರಿ' ಬಂದಾಗ ಅದು ಅರ್ಥ ಆಗಲಿಲ್ಲ. ಆದರೆ ಈಗ ನಾವು ಹುಲಿ ಸವಾರಿ ಮಾಡುತ್ತಿರುವುದರಿಂದ ಅದು ಅರ್ಥವಾಗಿದೆ. ಆದರೆ ಹುಲಿ ಸವಾರಿಯನ್ನು ಮಾಡುವವನಿಗೆ ಅದರ ಸ್ಪಷ್ಟ ಚಹರೆ ಗುರುತಿಸಿ ಮತ್ತೆ ಹುಲಿ ಸವಾರಿ ಮಾಡುವುದಕ್ಕೆ ಸಾಧ್ಯವಾದರೆ ನಮ್ಮ ತಲೆಮಾರಿನ ಉತ್ಕೃಷ್ಟ ಕತೆಗಳಲ್ಲದಿದ್ದರೂ, ಪ್ರಾತಿನಿಧಿಕ ಕತೆಗಳು ಬರುವುದಕ್ಕೆ ಸಾಧ್ಯ. ವಿವೇಕ ಶಾನಭಾಗರು 'ದೇಶಕಾಲ'ದಲ್ಲಿ 'ಕತೆಗಾರ ಯಾವುದೇ ಒಂದು ಅಳತೆಗೆ, ಮಾಪನಗಳಿಗೆ ಅನುಗುಣವಾಗಿ ಕತೆ ಬರೆಯಬೇಕು. ಅಂತಹ ಅವಕಾಶ ನಮ್ಮ ಸಾಂಸ್ಕೃತಿಕ, ಸಾಹಿತ್ಯಕ ಲೋಕದಲ್ಲಿ ಬರಬೇಕು' ಅಂತ ಅಭಿಪ್ರಾಯಪಡುತ್ತಾರೆ. ಪ್ರಾಯಶಃ ಅಂತಹ ಅವಕಾಶಗಳು ಹೆಚ್ಚಾದರೆ, ಕತೆಗಳ ವಿಭಿನ್ನತೆ ಹೆಚ್ಚುತ್ತದೆ ಅನ್ನಿಸುತ್ತದೆ.

ಅಶೋಕ ಹೆಗಡೆ: ಮೊದಲನೆಯದಾಗಿ ಗ್ರಾಮೀಣ ಪ್ರದೇಶದಿಂದ ನಗರಕ್ಕೆ ಬಂದಂತಹ, ನಗರದಿಂದ ಗ್ರಾಮೀಣಕ್ಕೆ ಕಾರಣಾಂತರಗಳಿಂದ ಹೋದಂತಹ ಒಬ್ಬ ವ್ಯಕ್ತಿ ಎದುರಿಸುವ ಗೊಂದಲಗಳಿಗೆ ಹೇಗೆ ಉತ್ತರ ಹುಡುಕುವ ರೀತಿಯಲ್ಲಿ ಪ್ರಯತ್ನಿಸುತ್ತಾನೆ ಎನ್ನುವುದರ ಬಗ್ಗೆ ಹೇಳ ಬಯಸುತ್ತೇನೆ. ನನಗೆ ಒಮ್ಮೆ ಓದಿದ ಒಂದು ಮಾತು ಸದಾ ಕಾಡುತ್ತೆ. "ಕತೆಗೆ ಯಾವುದು ತೆರೆದುಕೊಳ್ಳುವುದಿಲ್ಲವೋ ಅದು ಸತ್ಯ ಆಗಿರುವುದಿಲ್ಲ." ಅಂದರೆ ಕತೆಗಳು ಸತ್ಯ ಹುಡುಕುತ್ತ ಹೋಗಬೇಕಾಗುತ್ತೆ. ಈ ಸತ್ಯ ಒಂದು ಸಮಾಜದಲ್ಲಿ ಮೂರು ಅಥವಾ ನಾಲ್ಕು ಸ್ತರಗಳಲ್ಲಿ ನಡೆಯುತ್ತದೆ.

1. ಆರ್ಥಿಕವಾದಂತಹ, ಬದುಕಿನ ಅಸ್ತಿತ್ವವನ್ನು ಗಳಿಸಬೇಕಾದಂತಹ, ಉಳಿಸಬೇಕಾದಂಥವುಗಳ ಕುರಿತು.
2. ಮಾನಸಿಕವಾದಂಥದ್ದು. ನಾನು, ನನ್ನ ಹೆಂಡತಿ, ಬಂಧುಗಳು, ನನ್ನ ಎಲ್ಲ ಸಂಬಂಧಗಳು...... ಅಂದರೆ, ನಾವು ಬೇರೆಯುವರ ಬಗ್ಗೆ ಕಟ್ಟಿಕೊಳ್ಳುವ ಸಂಬಂಧದ ಸಾಧ್ಯತೆಯ ಬಗ್ಗೆ.
3. ಆದರ್ಶದ ಪರಿಕಲ್ಪನೆ. ನಾನು ಸಾಯುವ ಮೊದಲು ಏನನ್ನಾದರೂ ಸಾಧಿಸಬೇಕು ಎನ್ನುವುದರ ಕುರಿತು.
4. ನಾನು. ಮೇಲಿನದೆಲ್ಲ ಸೇರಿಸಿ ತೀರಾ ವೈಯಕ್ತಿಕವಾದಂತಹ ನೆಲೆಯಲ್ಲಿ ಹುಡುಕುವಂಥದ್ದು ನಾನು. ಇದು ತೀರಾ ವೈಯಕ್ತಿಕ ನೆಲೆ.

ಈ ಬದುಕನ್ನು ಹೇಗೆ ಕಟ್ಟಿಕೊಳ್ಳಬೇಕು. ಬದಲಾಗುತ್ತಿರುವ dynamicsನಲ್ಲಿ ಈ ನಾಲ್ಕು ಸ್ತರಗಳನ್ನು ಯಾವ ರೀತಿ ಯೋಚಿಸಬೇಕು ಅನ್ನುವುದರ ಕುರಿತು ಸಾಕಷ್ಟು ಗೊಂದಲಗಳಿವೆ. ಈ ಗೊಂದಲಗಳೇ ಅದರ ಸಾಧ್ಯತೆಯೂ ಆಗಿ, ಅದರ limitation ಸಹ ಆಗಿ ನಾ ಬರೆವ ಕತೆಗಳಲ್ಲಿ ಬರುತ್ತವೆ. ನಮಗಿರುವ ಸವಾಲುಗಳ ಬಗ್ಗೆ ಹೇಳುವುದಾದರೆ, ತೀರಾ ವೈಯಕ್ತಿಕ ನೆಲೆಯನ್ನು ನಿಯಂತ್ರಿಸುವಂತಹ ಬೇರೆ ಬೇರೆ ತರಂಗಗಳ ಬಗ್ಗೆ ಆಳವಾದ ಜ್ಞಾನವಿಲ್ಲದಿರುವುದು. ಸಮಾಜಕ್ಕೆ ಬೌದ್ಧಿಕವಾಗಿ, ಒಟ್ಟಾರೆಯಾಗಿ ಎಷ್ಟು ವಿಫಲರಾಗುತ್ತೀವಿ ಅನ್ನುವುದನ್ನು ನೋಡಬಹುದು.

ಇಲ್ಲಿ ಪ್ರತಿಯೊಂದು ಚಟುವಟಿಕೆಗಳು ನಗರ ಕೇಂದ್ರೀಕೃತವಾಗಿ ವಿಸ್ತಾರಗೊಳ್ಳುತ್ತಿವೆ. ಅಂತಹ ಒಂದು ದುರಂತವನ್ನು ಯಶಸ್ವಿಯಾಗಿ ಕತೆಗಳಲ್ಲಿ ಹಿಡಿಯುವುದಕ್ಕೆ ಆಗುತ್ತಿಲ್ಲವೇನೋ ಎನ್ನುವುದು ನನ್ನ ಸಂಶಯ. ಯಾಕೆಂದರೆ ಒಂದು ಕತೆ ಸತ್ಯದ ಹುಡುಕಾಟ ಆಗಿರಬೇಕು. ಮೇಲ್ನೋಟಕ್ಕೆ ಇರುವ ಪದರ ಕೆದರಿ ಕೆಳಕ್ಕೆ ಇಳಿಯಬೇಕು. ಕತೆಗಳು ಸತ್ಯವನ್ನು ಹುಡುಕುವ ಮೊದಲು ನನ್ನಂತಹವರು ನಗರದಿಂದ ಹಳ್ಳಿಗೆ, ಹಳ್ಳಿಯಿಂದ ನಗರಕ್ಕೆ ಬಂದಂತಹವರು ಬದುಕಿನ ಸತ್ಯಗಳನ್ನು ಗಂಭೀರವಾಗಿ ತೆಗೆದುಕೊಂಡು ಅರಸಬೇಕು. ಬಹುಶಃ ಆಗ ದಿವಾಕರ, ಆನಂದ ಹೇಳಿರುವುದಕ್ಕೆ ನಮ್ಮದೇ ಆದ ನೆಲೆಯಲ್ಲಿ ಉತ್ತರ ಕಂಡುಕೊಳ್ಳಬಹುದು. ಭಾಷೆ, structure ಅಂದರೆ, ಶಿಲ್ಪದ ಬಗ್ಗೆ ತೊಂದರೆಯಿಲ್ಲ. ದೇವನೂರರ ಕುಸುಮಬಾಲೆ ಇದ್ದ ಹಾಗೆ. ಓದಬಹುದು. ಒಂದು ರೀತಿಯಲ್ಲಿ ಹಿಂದಿ ಹಾಡು ಕೇಳಿದ ಹಾಗೆ. ನಮ್ಮ ಮಾನಸಿಕ ನೆಲೆಯೊಳಗೆ ಅದನ್ನು ಅರ್ಥ ಮಾಡಿಕೊಳ್ಳಬಹುದು. ಒಳ್ಳೆಯ ವಿಮರ್ಶೆ ಬರಬೇಕು. ತೀರಾ ಆಳವಾದ ಒಳನೋಟಗಳನ್ನು ಕೊಡುವಂತಹ ಸಾಧ್ಯತೆಗಳು ಬರಬೇಕು. ಎಲ್ಲೋ ಒಂದು ಕಡೆ ಬೇಂದ್ರೆಯವರನ್ನು ದಾಟಿ ಮುಂದೆ ಬರಬೇಕು.

ಟಿ.ಹೆ. ರಘುನಾಥ : ಋಗ್ವೇದಿ ಹೇಳಿದ ಹಾಗೆ ನಮ್ಮ ತಲೆಮಾರಿನ ಕತೆಗಾರರು ಪ್ರಾತಿನಿಧಿಕ ಕತೆಗಳನ್ನು ಕೊಡಲಿಲ್ಲ ಅನ್ನುವುದನ್ನು ನಾನು ಒಪ್ಪುವುದಿಲ್ಲ. ನಮ್ಮ ಹಿರಿಯ ಕತೆಗಾರರು ಕೊಟ್ಟಂತಹ ಕತೆಗಳ ಹಾಗೆ ಅಷ್ಟೇ ಒಳ್ಳೆಯ ಕತೆಗಳು ನಮ್ಮ ತಲೆಮಾರಿನಿಂದ ಬಂದಂಥವೂ ಇವೆ. ಇದು ನಮ್ಮ ಆತ್ಮವಿಶ್ವಾಸ ಅನ್ನಿ ಅಥವಾ ಅಹಂಕಾರ ಅನ್ನಿ. ಅದು ಇರಲಿಲ್ಲ ಅಂದರೆ ನನಗೆ ಕತೆ ಬರೆಯಲು ಆಗುವುದಿಲ್ಲ. ಬಹುಶಃ ಜಾಗತೀಕರಣದ ಬಗ್ಗೆ ನಾವು ಮಾತನಾಡುತ್ತಿದ್ದೇವೆ. ಅದೂ ನಾವು ಅಂದುಕೊಂಡ ಹಾಗೆ ಬಂದಿಲ್ಲ.

ವಸುಧೇಂದ್ರ : ಗ್ರಾಮೀಣ, ನಗರೀಕರಣ ಅಂತ ವಿಭಜನೆ ಮಾಡುವುದು ತಪ್ಪು. ಕತೆಗಾರ ಕತೆಗಾರನೆ. ಅವನ ನಗರ ಪ್ರಪಂಚದಲ್ಲಿ ಆದ ಅನುಭವಕ್ಕೆ ಅದರ ಬಗ್ಗೆ ಕತೆ ಬರೆಯುತ್ತಾನೆ. ಹಳ್ಳಿಯದ್ದಾದರೆ ಅದರ ಬಗ್ಗೆ ಕತೆ ಬರೆಯುತ್ತಾನೆ ಅಥವಾ ಅಮೆರಿಕಕ್ಕೆ ಹೋಗಿ ಅಮೆರಿಕಾದ ಗ್ರಾಮೀಣ ಪ್ರಪಂಚದ ಅನುಭವದಿಂದ ಹೆಚ್ಚು ಪ್ರಭಾವಿತನಾದರೆ ಅದರ ಬಗ್ಗೆ ಬರೆಯುತ್ತಾನೆ. ಗುರುಪ್ರಸಾದ ಕಾಗಿನೆಲೆ ಅಂತಹ ಕತೆ ಬರೆದಿದ್ದಾರೆ. ಅದಕ್ಕೆ ನೀವು ಯಾವ ಹಣೆಪಟ್ಟಿ ಕೊಡುತ್ತೀರಿ? ಕತೆಗಾರಿಕೆಗೆ ಈ ರೀತಿಯ ಗ್ರಾಮ, ನಗರದ ಹಣೆಪಟ್ಟಿ ಕೊಡುವುದು ತಪ್ಪು.

ವಿಮರ್ಶಕರು ಯಾಕೆ ಬರುತ್ತಿಲ್ಲ ಅಂದರೆ ಕತೆ ಬರೆಯುವುದು ಸಾಹಿತ್ಯದ ಹಿನ್ನೆಲೆಯಿಂದಲೇ ಬಂದಂತಹವರು ಅಲ್ಲ. ಕತೆ ಬರೆಯುವುದಕ್ಕೆ ಸಾಹಿತ್ಯದ ಹಿನ್ನೆಲೆ ಬೇಕಾಗಿಲ್ಲ. ಆದರೆ ವಿಮರ್ಶೆಗೆ ಅತ್ಯಂತ ಸ್ಪಷ್ಟವಾಗಿ ಒಳ್ಳೆಯ ಸಾಹಿತ್ಯದ ಹಿನ್ನೆಲೆ ಬೇಕು. ಸಾಹಿತ್ಯವನ್ನು ಓದಿರಬೇಕು. ಎಲ್ಲವನ್ನೂ ತಿಳಿದವನಿರಬೇಕು. ಅಂತಹವನು ವಿಮರ್ಶಕನಾಗುವ ಸಾಧ್ಯತೆಗಳು ಜಾಸ್ತಿಯಿದೆ. ಈ ತರಹದ ಪರಿಸರ ಕಾಣುತ್ತಿಲ್ಲ.

ವಿವೇಕ ಶಾನಭಾಗ : ಹೊಸ ಜಗತ್ತು ಉದಾಹರಣೆಗೆ ಐಟಿ ಜಗತ್ತಿನ ಅನೇಕ ವಿದ್ಯಮಾನದ ಅನುಭವಗಳನ್ನು ಒಳಗೊಳ್ಳಲಿಕ್ಕೆ ಕನ್ನಡ ಭಾಷೆಯಲ್ಲಿ ಸಾಧ್ಯವಾಗುತ್ತಿಲ್ಲ. ನಗರದ ಅನುಭವಗಳನ್ನು ಹೀರಿಕೊಳ್ಳುವುದಕ್ಕೆ ಕಷ್ಟವಾಗುತ್ತಿದೆ. ಒಂದು ರೂಪಕ ಶಕ್ತಿಯ ಭಾಷೆ ಬೇಕು. ಕತೆ ನಮಗೆ ತಟ್ಟುವುದಿಲ್ಲ ಅಂದರೆ ಭಾಷೆ ರೂಪಕವಾಗಿ ಘಟಿಸುತ್ತಿಲ್ಲ ಎಂದರ್ಥ. ಅನುಭವದ ಆಂತರ್ಯದಲ್ಲಿರುವ ಅನುಭವದ Pharseಗಳು ಮುಖ್ಯ.

ಬೇಳೂರು ಸುದರ್ಶನ : ಒಬ್ಬ ಒಳ್ಳೆಯ ಓದುಗ ಒಬ್ಬ ಒಳ್ಳೆಯ ವಿಮರ್ಶಕ ಆಗಬಹುದು. ಅದಕ್ಕೆ ಸಮಕಾಲೀನ ಸಾಹಿತ್ಯ ಪರಿಚಯವಿದ್ದರೆ ಸಾಕು.

ಪದ್ಮರಾಜ ದಂಡಾವತಿ : ನಾನು ನನ್ನ ಊರು ಬಿಟ್ಟು ೨೦ ವರ್ಷ ಆಯಿತು. ಆದರೂ ನನ್ನ ಆಪ್ತಳಿಗೆಗಳಲ್ಲಿ ಊರು ನನ್ನಲ್ಲಿರುತ್ತೆ. ಹಾಗೆಂದರೆ ನಗರ ನನ್ನದಾಗಲಿಲ್ಲವೆ? ಋಗ್ವೇದಿ ಸ್ವಲ್ಪ ಮಟ್ಟಿಗೆ ಉತ್ತರ ಕೊಟ್ಟರು. ಮುಖ್ಯವಾಗಿ ಸಂಬಂಧಗಳು ಗಾಢವಾಗಿ ಇರುವುದರಿಂದ ಅದು ನಮಗೆ ಕಾಡುತ್ತಿದೆ. ಐಟಿಗೆ ಹಾಗೆ ಇಲ್ಲದಿರುವುದರಿಂದ ಅದು ಕಾಣುವುದಿಲ್ಲ. ನನಗೆ ಕಾಡುವುದನ್ನು ನಾನು ಬರೆಯುತ್ತೇನೆ ಅಂತ ಹೇಳಬಹುದು.

ದಿವಾಕರ : ಪದ್ಮರಾಜರು ಹೇಳಿದ್ದನ್ನು ಒಪ್ಪುತ್ತೇನೆ. ಬಹಳಷ್ಟು ಕತೆಗಾರರು ತಮ್ಮ ಬಾಲ್ಯದ ಬಗ್ಗೆ ಬರೆಯುವುದನ್ನು ನೋಡುತ್ತೇವೆ. ಗಾರ್ಕಿಯಂತಹ ಕ್ರಾಂತಿಕಾರಿ ಲೇಖಕ ಸಹ ತನ್ನ ಬಾಲ್ಯದ ಬಗ್ಗೆ ಬರೆಯುವುದನ್ನು ನಾವು ನೋಡುತ್ತೇವೆ. ವಸುಧೇಂದ್ರ ಹೇಳಿದ್ದನ್ನು ನಾನು ಒಪ್ಪುವುದಿಲ್ಲ. ಒಳ್ಳೆಯ ಓದುಗ ಒಳ್ಳೆಯ ಕತೆಗಾರ ಸಹ ಆಗಬಹುದು. ವಿಮರ್ಶೆ ಅನ್ನುವುದು ಒಂದು Thankless job. ಒಬ್ಬ ವಿಮರ್ಶಕನಿಗೆ ಅನೇಕ ಆಯಾಮದಿಂದ ಓದುವುದು ಮುಖ್ಯ. ಬಹಳಷ್ಟು ಓದಬೇಕು. ಬಹಳಷ್ಟು ಗ್ರಹಿಸಬೇಕು. ಒಳ್ಳೆಯ ಕತೆಯನ್ನು ಬೆಲೆ ಕಟ್ಟುವುದು ನಡೆಯುತ್ತಿಲ್ಲ. ಸಂಸ್ಕೃತಿಯ ಅತ್ಯುತ್ತಮವಾದದ್ದನ್ನು ಉಳಿಸುವುದು ಒಂದು ಸಂಸ್ಕೃತಿ.

ರಾಘವೇಂದ್ರ ಪಾಟೀಲ : ನಮ್ಮ ಕತೆಗಳು ಅನೇಕ ಸಲ ಸುಳ್ಳು ಹೇಳುತ್ತಿರುತ್ತವೆ. ವಾಸ್ತವದಲ್ಲಿರುವಂಥ ಅನೇಕ ಸಂಗತಿಗಳನ್ನು ಕತೆ ಕಟ್ಟಿಕೊಡುತ್ತಾಯಿರುತ್ತದೆ. ಒಂದು ಕತೆ ತಾನು ಪರಿಭಾವಿಸಿರುವಂತಹ ಸುಳ್ಳನ್ನು ಎಷ್ಟು ಚೆನ್ನಾಗಿ ಹೇಳುತ್ತೆ ಅನ್ನುವುದು ಸಹ ಮುಖ್ಯ. ಕತೆಗಾರರು ಯಾವ ಆದರ್ಶ ಪ್ರೀತಿಸುತ್ತಾರೆ ಅದನ್ನು ಹತ್ತಾರು ಜನಕ್ಕೆ ಹೇಳುತ್ತಾರಲ್ಲ ಅದನ್ನು ಓದುಗರು ಸಹ ಅಷ್ಟೇ ಪ್ರೀತಿಯಿಂದ ಒಪ್ಪಿಕೊಳ್ಳುವ ಮತ್ತು ಚಿಂತಿಸುವ ದಾರಿಗೆ ತಂದರೆ ಅದು ಒಳ್ಳೆಯ ಕತೆ ಆಗಿರುತ್ತದೆ. ಅದು ಹಾಗೆ ಅನ್ನಿಸದಿದ್ದರೆ ಕತೆ ಎಲ್ಲೋ ಟೊಳ್ಳಾಗಿದೆ. ಅಶೋಕ ಹೆಗಡೆ ಜೀವನದ ನಾಲ್ಕು ನೆಲೆಗಳನ್ನು ಹೇಳಿದರು. ಪ್ರತಿ ಕತೆಯೂ ಅಸ್ತಿತ್ವವಾದದ ನೆಲೆಯಿಂದಲೇ ಪ್ರಾರಂಭವಾಗುತ್ತದೆ. ಪ್ರತಿಯೊಬ್ಬನ ವೈಯಕ್ತಿಕ ನೆಲೆಯಿಂದ ಪ್ರಾರಂಭಗೊಂಡು ಉಳಿದ ಮೂರು ನೆಲೆಯಲ್ಲಿ ಕತೆ ವಿಸ್ತಾರಗೊಳ್ಳುತ್ತದೆ. ಬಹುಶಃ ಈಗ ಏನಾಗಿದೆ ಅಂದರೆ ಮೇಲಿನ ಮೂರು ನೆಲೆಗಳನ್ನು, ಅನುಭವಗಳನ್ನು ಬಾಹ್ಯವಾಗಿ ಗ್ರಹಿಸುತ್ತಾ, ಅದನ್ನು ನಾವು ಎಲ್ಲಿಯೂ ನಮ್ಮ ಅನುಭವಕ್ಕೆ ಬೆರೆಸದೆ ಇರುವುದರಿಂದ ನಮ್ಮ ಕತೆಗಳು ಟೊಳ್ಳಾಗುತ್ತವೆ ಅಂತ ಅನಿಸುತ್ತದೆ. ದಿವಾಕರರು ವಿಮರ್ಶೆಯ ಪ್ರಶ್ನೆ ಎತ್ತಿದರು. ಹೌದು, ಹೊಸ ವಿಮರ್ಶಕರು ಬರುತ್ತಿಲ್ಲ. ಆದರೆ ನನಗೆ ಅನಿಸುವುದು ವಿಮರ್ಶೆಗೆ ಅಗತ್ಯಕ್ಕಿಂತ ಹೆಚ್ಚು ಮಹತ್ವ ಕೊಡುತ್ತಿದ್ದೇವೆ ಅಂತ. ಸಾಂಸ್ಕೃತಿಕವಾಗಿ ನಮಗೆ ವಿಮರ್ಶೆಯೇ ಬೇಡ. ಆದರೆ ಅಕಾಡೆಮಿಕ್ ಆಗಿ ಅಗತ್ಯವಿದೆ. ಎಲ್ಲೋ ದೂರದಲ್ಲಿರುವ ಓದುಗ ದಿವಾಕರರ ಕತೆಯನ್ನು ಓದಿ ಖುಷಿ ಪಡಬಹುದು. ವಿಮರ್ಶಕರು ಕೊಡುವ ಮಾನದಂಡದ ಅವಶ್ಯಕತೆ ಆ ಓದುಗನಿಗೆ ಜೀವನದ ಉದ್ದಕ್ಕೂ ಬೀಳದೇ ಇರಬಹುದು. ನಿಜವಾದ ಅರ್ಥದಲ್ಲಿ ಅದು ಸಾಂಸ್ಕೃತಿಕ ಅವಶ್ಯಕತೆ ಆಗಿರುವುದಿಲ್ಲವೇನೋ ಅಂತ ಅನಿಸುತ್ತದೆ. ಸಾಂಸ್ಕೃತಿಕವಾಗಿ ಅಂತ ದೊಡ್ಡ ಸ್ಥಾನವನ್ನೇನೂ ವಿಮರ್ಶೆಗೆ ಕೊಡುವ ಅಗತ್ಯವಿಲ್ಲ ಅನಿಸುತ್ತದೆ. ಶೈಕ್ಷಣಿಕವಾಗಿ ಖಂಡಿತವಾಗಿಯೂ ವಿಮರ್ಶಕರು ಬೇಕು. ವಿವೇಕ ಐಟಿ ಮತ್ತು ಬಿಟಿಯ ಬಗ್ಗೆ ಚೆನ್ನಾಗಿ ಹೇಳಿದರು. ಐಟಿ, ಬಿಟಿಗಳು ಯಾವಾಗ ಕನ್ನಡದ ಚೌಕಟ್ಟಿನಲ್ಲಿ ಬರುತ್ತವೋ ಆಗ ಅವುಗಳ ಅರ್ಥ ಕರಗುತ್ತೆ. ಆಗ ಆ ಅನುಭವ ಸಾರ್ವತ್ರಿಕಗೊಳ್ಳುತ್ತದೆ. ಇದು ಕತೆ ತಲುಪುವ ರೀತಿ. ಇಂತಹ ಪ್ರಕ್ರಿಯೆ ಆರಂಭವಾಗಿದೆ. ಮುಂದೆ ಆ ಅನುಭವವುಳ್ಳ ಕತೆಗಳು ಬರಬಹುದು ಅಂತ ಅನಿಸುತ್ತದೆ.

'ಸಂಚಯ' ಪ್ರಕಟಿಸಿದ ಚ.ಹ. ರಘುನಾಥರ ಕಥಾಸಂಕಲನದ
ಬಿಡುಗಡೆ ಸಮಾರಂಭದಲ್ಲಿ ನಡೆಸಿದ ಸಂವಾದ



ಅಂಬೇಡ್ಕರ್ ನಂತರದ ವಿಮೋಚನಾ ಚಳುವಳಿಗಳು

◆ ಪ್ರೊ॥ ಕೆ.ಜಿ. ನಾಗರಾಜಪ್ಪ

ಭಾರತದಲ್ಲಿ ಪ್ರಾಚೀನ ಕಾಲದಿಂದಲೂ ಸಾಮಾಜಿಕ, ಧಾರ್ಮಿಕ, ಆರ್ಥಿಕ ಮತ್ತು ರಾಜಕೀಯ ಸಂಘರ್ಷ ನಿರಂತರವಾಗಿ, ಅಸಮಾನತೆಯ ವಿರುದ್ಧ ನಡೆಯುತ್ತಲೇ ಬಂದಿದೆ. ಆರಂಭದಲ್ಲಿ ಅಸಮಾನತೆ ಧಾರ್ಮಿಕ ಸ್ವರೂಪದ್ದು. ಸಂಘರ್ಷ ಹೆಚ್ಚಾಗಿ ವೇದ ಮತ್ತು ಬ್ರಾಹ್ಮಣರ ವರ್ಣ ಮತ್ತು ವರ್ಣಸಂಕರ ಭೇದದ ಅಸಮಾನತೆಯ ವಿರುದ್ಧ, ಅನೇಕ ವೇದ ವಿರೋಧಿ ಪಂಥಗಳು ದನಿ ಎತ್ತಿವೆ. ವರ್ಣದಲ್ಲಿ ಬ್ರಾಹ್ಮಣ ಮತ್ತು ಕ್ಷತ್ರಿಯ, ಬ್ರಾಹ್ಮಣ ಮತ್ತು ಅಸ್ಪೃಶ್ಯರ ಸಂಬಂಧ ಸ್ಪಷ್ಟ. ಆದರೆ ವೈಶ್ಯ ಮತ್ತು ಶೂದ್ರರ ಸಂಬಂಧ ಅನಿಶ್ಚಿತತೆ ಮತ್ತು ಗೊಂದಲಗಳಿಂದ ಕೂಡಿದೆ. ಸಂಬಂಧ ಸ್ಪಷ್ಟ ಅಥವಾ ಅಸ್ಪಷ್ಟವಿದ್ದರೂ, ಅಸ್ಪೃಶ್ಯರ ಸ್ಥಾನ ಮಾತ್ರ ಖಚಿತ. ಅಸ್ಪೃಶ್ಯರು ವೈದಿಕ ಅಥವಾ ಹಿಂದೂ ಸಮಾಜವನ್ನು ಒಪ್ಪಿಕೊಂಡಿದ್ದರೂ, ಶಾಶ್ವತವಾಗಿ ಹೊರಗಿನವರು, ಅವರ್ಣೀಯರು, ಪಂಚಮರು, ವರ್ಣ ಮತ್ತು ಜಾತಿ ಬಾಹಿರರು. ಜಾತಿಗೆ ವರ್ಣ ಸಂಕರವೇ ಮೂಲ ಎಂಬುದನ್ನು ಒಪ್ಪದೆ, ಅನೇಕ ಜಾತಿಯ ಮಿಥ್‌ಗಳಿದ್ದರೂ, ಅಸ್ಪೃಶ್ಯರು ಜಾತಿ ಪಣಕಟ್ಟಿಗೆ ಸೇರಿದ್ದರೂ, ಜಾತಿಗಳಲ್ಲಿ ಜಜಮಾನಿ ಅನುಶ್ರೇಣಿ ರೂಢಿಯಾಗಿ, ವರ್ಣ ಮತ್ತು ಜಾತಿ, ಜಾತಿ ಮತ್ತು ಜಾತಿಗಳ ಸಂಘರ್ಷ ಶಾಶ್ವತವಾಯಿತು. ಜಾತಿಯಲ್ಲಿನ ಪಣಕಟ್ಟು ಪದ್ಧತಿಯಿಂದ ಎಡ ಮತ್ತು ಬಲ ಒಳಪಂಗಡಗಳಾದುವು. ಬಲಗೈ ಅಥವಾ ಬಲಪಂಗಡ ಶ್ರೇಷ್ಠ, ಎಡಗೈ ಅಥವಾ ಎಡಪಂಗಡ ಕನಿಷ್ಠ. ಬ್ರಾಹ್ಮಣರು ಜಾತಿ ಪಣಕಟ್ಟಿಗೆ ಸೇರಿದ ಮಹಾಜನರು. ಅಸ್ಪೃಶ್ಯರು ಜಾತಿ ಪಣಕಟ್ಟಿನಲ್ಲಿ ಬಲ ಮತ್ತು ಎಡ ಪಣವಾದರೂ, ಜಾತಿಯಲ್ಲಿಯೂ ಒಳಗಿನವರಾಗದೆ, ಶಾಶ್ವತವಾಗಿ ಹೊರಗಿನವರೇ ಆಗಿ ಉಳಿದರು. ಜಾತಿಯಲ್ಲಿ ವೃತ್ತಿ ವಿಂಗಡಣೆಯಿಂದ ಕೀಳು ಮತ್ತು ಮೇಲು ವೃತ್ತಿಗಳಾಗಿ, ಅಸ್ಪೃಶ್ಯರು

ಕೀಳು ವೃತ್ತಿಗಳಿಂದ, ಅತ್ಯಂತ ಕೆಳಮಟ್ಟದವರಾಗಿ, ಪ್ರಾಥಮಿಕ ಅಗತ್ಯಗಳಿಂದ ವಂಚಿತರಾಗಿ, ನಾಗರಿಕ ಜಗತ್ತಿಗೆ ಆಗಂತುಕರಾಗಿ, ಶೋಷಣೆ, ತುಳಿತ, ಹಿಂಸೆ, ಅಪಮಾನಗಳಿಗೆ ತುತ್ತಾಗಿ, ಕೀಳರಿಮೆಯಿಂದ, ಅಪಮಾನಗಳನ್ನು ಸಹಿಸುತ್ತ, ಹಿಂದೂ ಧರ್ಮವನ್ನು ಒಪ್ಪಿ, ನಿಷ್ಠೆಯಿಂದ ದುಡಿಯುತ್ತ ಬಂದರೂ, ಮಾನವೀಯತೆ ಮತ್ತು ಮೂಲ ಸೌಲಭ್ಯಗಳ ಹಕ್ಕಿಗೆ ವಂಚಿತರಾದರು.

ಧರ್ಮ, ಅರ್ಥ ಮತ್ತು ಕಾಮ ಶಾಸ್ತ್ರಗಳು–ಶೃತಿ, ಸ್ಮೃತಿ ಮತ್ತು ಪುರಾಣಗಳ ತಳಹದಿಯನ್ನು ಅನುಸರಿಸಿ, ಅಸಮಾನತೆಯ ಆಧಾರದ ಮೇಲೆ ರಚಿತವಾಗಿ, ಹಿಂದೂ ಸಮಾಜದ ಶಾಸ್ತ್ರಗಳಾಗಿ, ಅಧಿಕೃತ ಪಠ್ಯಗಳಾದುವು. ಅಲ್ಲದೆ ಹಿಂದೂ ಸಮಾಜ ಮತ್ತು ಚಿಂತಕರನ್ನು ನಿಯಂತ್ರಿಸಿದವು. ಅನಂತರ ಬಂದ ಸುಧಾರಣೆ ಅಥವಾ ಕ್ರಾಂತಿ, ಆಸ್ತಿಕ ಅಥವಾ ನಾಸ್ತಿಕ ಮತಗಳಾಗಲಿ, ಭಕ್ತಿ ಪಂಥಗಳಾಗಲಿ, ಏಕ ಸೂತ್ರ ಮತ್ತು ಏಕ ಸಿದ್ಧಾಂತದ ಅಭಾವದಿಂದ, ಅವುಗಳೇ ಪಂಗಡಗಳು, ಒಳಪಂಗಡಗಳಾಗಿ, ಜಾತಿಗಳ ಸಂಖ್ಯೆ ಅಧಿಕಗೊಂಡವು. ಇಂಥ ಅನ್ಯಧರ್ಮಿ ವಿರುದ್ಧ ಯುದ್ಧಗಳಲ್ಲಾಗಲೀ, ಒಳಪಂಗಡಗಳಲ್ಲಾಗಲೀ ಅಥವಾ ಮತಾಂತರ ಚಳುವಳಿಗಳಲ್ಲಾಗಲಿ, ಅಸ್ಪೃಶ್ಯರೇ ಪಾಲುಗೊಂಡು ಹೋರಾಡಿ ಅಪಾರ ಕಷ್ಟನಷ್ಟಗಳಿಗೆ ಒಳಗಾದರೂ, ಅವರ ಸ್ಥಿತಿಗತಿ ಕಿಂಚಿತ್ತೂ ಉತ್ತಮವಾಗಲಿಲ್ಲ. ಮತಾಂತರಗಳಿಂದ ಅಸ್ಪೃಶ್ಯರು ಬಹಿರಂಗವಾಗಿ ಒಳಗಿನವರಾಗಿ ಕಂಡರೂ, ಒಳವ್ಯವಹಾರಗಳಲ್ಲಿ ಅಂದರೆ ಅಂತರಂಗದಲ್ಲಿ ಮಾತ್ರ ಹೊರಗಿನವರಾಗಿಯೇ ಅಧಿಕೃತವಾಗಿ ಗುರುತಿಸಲ್ಪಟ್ಟರು. ಅಸ್ಪೃಶ್ಯರು ಎಂದೂ ಧಾರ್ಮಿಕ ಇತಿಹಾಸದಲ್ಲಿ, ಸುಧಾರಿತ ಅಥವಾ ಮತಾಂತರಿ ಮತಗಳಲ್ಲಿ ನಾಯಕರಾಗುವ ಅವಕಾಶವೇ ಇಲ್ಲವಾಯಿತು. ಬುಡಕಟ್ಟಿನ ಕೆಲವರು ಬಾಹುಬಲದಿಂದ ಕ್ಷತ್ರಿಯರಾಗಿ ವರ್ಣ ಮತ್ತು ಜಾತಿ ಧರ್ಮ ರಕ್ಷಣೆಗೆ ಕಂಕಣ ಬದ್ಧರಾದರು. ಇದರಿಂದಾಗಿ ಕೆಲವರು ಮಾತ್ರ ಸಾಮಾಜಿಕ ಸ್ಥಿತಿಗತಿಯ ಬದಲಾವಣೆಯಿಂದ ಒಂದಿಷ್ಟು ಉಸಿರಾಡುವಂತಾಯಿತು. ಇದು ವ್ಯಕ್ತಿ ನೆಲೆಯಲ್ಲಿ ನಡೆಯಿತೇ ಹೊರತು, ಅಸ್ಪೃಶ್ಯ ಸಮುದಾಯದ ಬಿಡುಗಡೆಯಂತೂ ಕನಸಾಗಿಯೇ ಉಳಿಯಿತು, ಇಂಥ ಚಕ್ರಾಕಾರ ಪಂಕ್ತಿಯ ಚಿಂತನೆಯ ವಿಷವೃತ್ತ ಹಿಂದೂ ಸಮಾಜದ ಸುಳಿಯಲ್ಲಿ ಸಿಕ್ಕಿರುವ ಅಸ್ಪೃಶ್ಯರ ಬಿಡುಗಡೆಯ ಹೋರಾಟದ ಚಳುವಳಿಗಳು ಬಂಜರು ಭೂಮಿಯ ಉಳುಮೆಯೇ ಸರಿ. ವೈಚಾರಿಕ ಮನೋಭಾವದ, ಮುಕ್ತ ಚಿಂತಕ ಶಂಕರ್ ಮೊಕಾಶಿ ಪುಣೇಕರರ ನಾಲಿಗೆಯಲ್ಲಿ ಹಿಂದೂ ಸಂಪ್ರದಾಯದ ಅಂತಿಮ ನಿರ್ಣಯವನ್ನು ಗುರುತಿಸಬಹುದಾಗಿದೆ:–" "Caste Society is Unique, It is a good Centered. Otherwise an irrational, ritualistic-caste system could not have been born at all. Its pluralism could not have sustained peaceful co-existence so long without other defence mechanisms like karma and Rebirth. Even after rejecting these defence mechanism as silly, as every modern man should, we should be able to accept them if we have to understand caste. God centeredness and yearning for solvation themselves became the tremendous socialising force. Mutual respect extended to an tolerated both caste differences in the recognition of the tremendous concept of equality of the human soul"-Harijan Contribution to Medieval Indian the thought by Shankar Mokashi Punekar.

ಶಂಕರ್ ಮೊಕಾಶಿ ಪುಣೇಕರ್ ಅಸ್ಪೃಶ್ಯ ಪದದ ವ್ಯಾಪ್ತಿಯನ್ನು ವಿಸ್ತರಿಸಿ, ಅಸ್ಪೃಶ್ಯತೆ ಕೇವಲ ದಲಿತರಲ್ಲಿಯೇ ಅಲ್ಲ, ಅದು ಬ್ರಾಹ್ಮಣ–ಬ್ರಾಹ್ಮಣರಲ್ಲಿ, ಬ್ರಾಹ್ಮಣ–ಬ್ರಾಹ್ಮಣೇತರರಲ್ಲಿಯೂ ಆಚರಣೆಯಲ್ಲಿದೆ ಎಂದು, ಅಸ್ಪೃಶ್ಯತೆಯ ಪದದ ಮಿತಿಯನ್ನು ಹಿಗ್ಗಲಿಸಿದರು. ಅನಂತಮೂರ್ತಿ ಅವರು ಜಾತಿಯನ್ನು ಸೃಜನಶೀಲವಾದುದು ಎಂದರು, ಐತಾಳರು ಮುಂದೆ ಬ್ರಾಹ್ಮಣ ಬಂಡಾಯ ಚಳುವಳಿಯನ್ನೂ ಹುಟ್ಟು ಹಾಕಿದರು. ಹೀಗೆ ಅಸ್ಪೃಶ್ಯತೆಯಂತಹ ಗಂಭೀರ ಸಮಸ್ಯೆಯ ತೀವ್ರತೆಯನ್ನು ಕಡಿಮೆ ಮಾಡಿ, ಬೇರೆ ಕಡೆ ಗಮನ ಸೆಳೆಯುವಂತಹ ಪ್ರಯತ್ನಗಳೂ ನಡೆದಿವೆ. ಶಂಕರ್ ಮೊಕಾಶಿ ಪುಣೇಕರವರ ಹಿಂದೂ ಸಮಾಜದ ಅಸಮಾನತೆಯ ಸಮರ್ಥನೆ ಒಂದು ಅಣಕವೇ ಸರಿ.

ಬ್ರಿಟಿಷರ ಆಳ್ವಿಕೆಯ ವಿರುದ್ಧ ರೂಪುಗೊಂಡ ಸ್ವಾತಂತ್ರ್ಯ ಚಳುವಳಿ ಎಲ್ಲಾ ಚಳುವಳಿಗಿಂತಲೂ ವಿಶಿಷ್ಟ ಮತ್ತು ಭಿನ್ನ ಸ್ವರೂಪದ್ದು. ಅದೇ ಸಂದರ್ಭದಲ್ಲಿ ಬ್ರಿಟಿಷರು ದಲಿತರಲ್ಲಿ ರಾಜಕೀಯ ಪ್ರಾತಿನಿಧ್ಯ ಮತ್ತು ಹಕ್ಕುಗಳ ಜಾಗೃತಿ ಮೂಡಿಸಿ, ಅವರನ್ನು ಹೋರಾಟಕ್ಕೆ ಪ್ರಚೋದಿಸಿದರು. ದಲಿತರಲ್ಲಿ ಹತ್ತಿಸಿದ ಕಿಡಿ, ಅಂಬೇಡ್ಕರರಲ್ಲಿ ಅಗ್ನಿಯಾಗಿ ಉರಿಯತೊಡಗಿತು. ಗಾಂಧೀಜಿಗೆ ಸ್ವಾತಂತ್ರ್ಯ ಚಳುವಳಿ ಮೊದಲು, ಆನಂತರ ದಲಿತರ ಸಮಸ್ಯೆ ಆದರೆ ಅಂಬೇಡ್ಕರರಿಗೆ ದಲಿತ ಸಮಸ್ಯೆ ಮೊದಲು, ಆನಂತರ ಸ್ವಾತಂತ್ರ್ಯದ ಚಳುವಳಿ. ಇಬ್ಬರ ಸಂಘರ್ಷ ತೀವ್ರಗೊಂಡಿತು. ಅಂಬೇಡ್ಕರರು ಸ್ವಾತಂತ್ರ್ಯ ಚಳುವಳಿಯನ್ನು ದಲಿತ ಚಳುವಳಿಯಾಗಿ ಬಳಸಿಕೊಂಡರು. ದಲಿತರಿಗೆ ರಾಜಕೀಯವಾಗಿ ಸಕ್ರಿಯವಾಗಿ ಸಂಘಟಿತರಾಗಿ ಹೋರಾಟಕ್ಕಿಳಿಯಲು ಕರೆ ಕೊಟ್ಟರು. ಅಂಬೇಡ್ಕರರು ದಲಿತ ಚಳುವಳಿಯ ಮುಂಚೂಣಿ ನಾಯಕರಾಗಿ ನೇರವಾಗಿ ಹೋರಾಟಕ್ಕಿಳಿದರು. ಅವರು ಹಿಂದೂಗಳು ತಮ್ಮನ್ನು ಬ್ರಿಟಿಷರ ದಲ್ಲಾಳಿ ಎಂದ ಅಪವಾದಕ್ಕೂ ಜಗ್ಗಲಿಲ್ಲ. ಎಂಥ ಸಂದರ್ಭದಲ್ಲಿಯೂ ಹಿಂದೂಗಳೊಂದಿಗೆ ರಾಜಿಗೆ ಸಿದ್ಧರಾಗಲಿಲ್ಲ. ಅಂಬೇಡ್ಕರ್ ಹಿಂದೂ ಶಾಸ್ತ್ರಗಳನ್ನು ಆಳವಾಗಿ ಅಧ್ಯಯನ ಮಾಡಿ, ಹಿಂದೂ ಧರ್ಮದ ಪೊಳ್ಳುತನವನ್ನು ಬಯಲು ಮಾಡಿದರು. ಅಲ್ಲದೆ ಹಿಂದೂಗಳನ್ನು ಮೋಸಗಾರರು, ಅವರನ್ನು ಎಂದೂ ನಂಬಬಾರದು ಎಂದು ತೀರ್ಮಾನಿಸಿದರು. ಬ್ರಾಹ್ಮಣರ ವರ್ಣ ಮತ್ತು ಜಾತಿ ವಿಷವರ್ತುಲವೇ ಅಸ್ಪೃಶ್ಯತೆಗೆ ಮೂಲವೆಂದು ಬ್ರಾಹ್ಮಣರನ್ನು ದ್ವೇಷಿಸಿದರು.

ಹಿಂದೂ ಸಮಾಜದ ಅಸಮಾನತೆಯಿಂದ ಎಂದೆಂದೂ ದಲಿತರ ಅಭಿವೃದ್ಧಿಯಾಗಲಿ, ಅಸ್ಪೃಶ್ಯತೆಯಿಂದ ಬಿಡುಗಡೆಯಾಗಲಿ ಅಸಾಧ್ಯ ಎಂದು ಮನಗಂಡು, ಸಮಾನತೆ ತತ್ವದ ಬೌದ್ಧ ಧರ್ಮಕ್ಕೆ ಅವರ ಸ್ವಭಾವ ಒಗ್ಗಿತು. ಬೌದ್ಧಧರ್ಮದ ಆಧ್ಯಾತ್ಮಿಕ ಮತ್ತು ತಾತ್ವಿಕ ಚಿಂತನೆಗಳಿಗಿಂತ, ಅದರ ಸಾಮಾಜಿಕ ಮತ್ತು ರಾಜಕೀಯ ವ್ಯಾಖ್ಯಾನದಿಂದ, ಬೌದ್ಧ ತತ್ವಗಳನ್ನು ಪರಿಷ್ಕರಿಸಿ, ದಲಿತರ ಬಿಡುಗಡೆ ಮತ್ತು ಅಭಿವೃದ್ಧಿಯ ಸಾಧನೆಯ ಮೂಲ ಮಂತ್ರವಾಗಿ ಬೌದ್ಧ ಧರ್ಮವನ್ನು ಸ್ವೀಕರಿಸಿದರು. ದಲಿತೇತರರು ತಮ್ಮನ್ನು ನಾಯಕನನ್ನಾಗಿ ಸ್ವೀಕರಿಸುವರೆಂಬುದರಲ್ಲಿ ಅಂಬೇಡ್ಕರರಿಗೆ ಅನುಮಾನವಿತ್ತು ಆದ್ದರಿಂದಲೇ ತಮ್ಮ ನಾಯಕತ್ವವನ್ನು ಸದ್ಯಕ್ಕೆ ದಲಿತರಿಗೆ ಮಿತಗೊಳಿಸಿಕೊಂಡರು. ಅವರು ತಮ್ಮೆಲ್ಲಾ ಶಕ್ತಿಯನ್ನೂ ದಲಿತರ ಸಾಮಾಜಿಕ ಮತ್ತು ರಾಜಕೀಯ ಪ್ರಜ್ಞೆಯ ಜಾಗೃತಿಯಿಂದ ಸಂಘಟಿಸಿ ಹೋರಾಟಕ್ಕೆ ತೊಡಗಿಸುವಲ್ಲಿ ಏಕಾಗ್ರಗೊಳಿಸಿದರು, ಅಲ್ಲದೆ ದಲಿತರು ರಾಜಕೀಯ ಪ್ರಬಲಶಕ್ತಿಯಾಗಿ ರೂಪುಗೊಳ್ಳುವುದೇ ದಲಿತರ ಎಲ್ಲಾ ಸಮಸ್ಯೆಗಳಿಗೆ ಬಿಡುಗಡೆಯ ಆಯುಧವೆಂದು ನಿಶ್ಚಯಿಸಿದರು. ಅವರು ದಲಿತರು ರಾಜಕೀಯ ಪ್ರಬಲ ಶಕ್ತಿಯಾಗಿ ಬೆಳೆಯುವುದರಿಂದಲೇ ದಲಿತರ ಶಿಕ್ಷಣ, ಸಾಮಾಜಿಕ, ಆರ್ಥಿಕ ಮತ್ತು ಧಾರ್ಮಿಕ ಸಮಸ್ಯೆಗಳು ತಾವಾಗಿಯೇ ಬಗೆಹರಿಯುತ್ತದೆಂದು ದೃಢವಾಗಿ ನಂಬಿ, ದಲಿತರಿಗೆ ರಾಜಕೀಯ ಪ್ರಜ್ಞೆಯ ದೀಕ್ಷೆ ಕೊಟ್ಟರು. ದಲಿತ ರಾಜಕೀಯ ಶಕ್ತಿಯಿಂದಲೇ ಶಾಸನ ಸಭೆ, ಲೋಕಸಭೆಗಳಲ್ಲಿ ದಲಿತರಿಗೆ ಪ್ರಾತಿನಿಧ್ಯ ಸಿಕ್ಕಿ, ಅವರ ಭವಿಷ್ಯವೇ ಉಜ್ವಲವಾಗಿ ಬದಲಾಗುವ ಕನಸು ಕಂಡರು. ಅವರು ಒಂದು ಹಂತದಲ್ಲಿ ಹಿಂದೂ ಸಮಾಜದ ದಬ್ಬಾಳಿಕೆಯ ಆಡಳಿತಕ್ಕಿಂತ, ಬ್ರಿಟಿಷರ ಆಡಳಿತದಲ್ಲಿಯೇ ದಲಿತರು ಸುರಕ್ಷಿತರು ಎಂದೇ ಭಾವಿಸಿದರು. ಅಲ್ಲದೆ ಅವರು ಮಾನವೀಯತೆಯಲ್ಲಿ, ಆಧ್ಯಾತ್ಮಿಕ ಮೌಲ್ಯಗಳ ಮಹತ್ವವನ್ನು ಕಂಡುಕೊಂಡು, ಧರ್ಮಕ್ಕೆ ಅವಕಾಶವಿಲ್ಲದ ಮಾರ್ಕ್ಸ್ ತತ್ವಗಳನ್ನು ನಿರಾಕರಿಸಿದರು. ಅಂಬೇಡ್ಕರ್ ತಮ್ಮ ಹೋರಾಟದಲ್ಲಿ ದಲಿತರಿಗೆ ರಾಜಕೀಯ ಪ್ರಾತಿನಿಧ್ಯ ದೊರಕಿಸುವಲ್ಲಿ ಸಫಲರಾದರು. ಅಂತೂ ಸ್ವಾತಂತ್ರ್ಯ ಚಳುವಳಿ ದಲಿತರ ಚಳುವಳಿಯಾಗಿ, ದಲಿತರ ಬದುಕಿನ ಇತಿಹಾಸದಲ್ಲಿ ಅಂಬೇಡ್ಕರ್ ಹೊಸ ದಲಿತ ಶಕೆಯನ್ನು ಆರಂಭಿಸಿದರು. ಅಲ್ಲಿಂದ ಮುಂದೆ ಸ್ವತಂತ್ರ ಭಾರತದ ಇತಿಹಾಸದಲ್ಲಿ ದಲಿತರ ಬದುಕೂ ಒಂದು ಮುಖ್ಯವಾದ ಅಧ್ಯಾಯವಾಯಿತು. ಸಂವಿಧಾನದಲ್ಲಿ ಅಸ್ಪೃಶ್ಯತೆಯ ನಿಷೇಧದ ಅಧಿನಿಯಮವಾಗಿ, ದಲಿತರಿಗೆ ರಕ್ಷಣೆ ದೊರೆಯಿತು. ದಲಿತರೂ ಗೌರವಯುತ ಭಾರತೀಯ ನಾಗರೀಕರಾಗಿ ಬಾಳುವ ಅವಕಾಶ ಸಿಕ್ಕಿತು. ಇಷ್ಟಾದರೂ ಪ್ರಾಂತಭೇದ, ಜನಾಂಗ ಭೇದ, ಭಾಷಾಭೇದ,

ಸಂಸ್ಕೃತಿಭೇದಗಳಿಂದ ದಲಿತ ಸಂಘಟನೆ ಅವರಿಗೆ ಸುಲಭಸಾಧ್ಯವಾಗಲಿಲ್ಲ. ಅಂಬೇಡ್ಕರ್ ಕಟ್ಟಿದ ರಾಜಕೀಯ ಪಕ್ಷ ಅಷ್ಟಾಗಿ ಪ್ರಬಲವಾಗಲಿಲ್ಲ. ಮೂಲಭೂತವಾದಿಗಳು ಅಂಬೇಡ್ಕರರು ದಲಿತರ ವರ್ಣ ವಿರೋಧಕ್ಕಾಗಲಿ, ದಲಿತರು ವಿಭಿನ್ನ ಸಂಸ್ಕೃತಿಯವರು ಎಂಬುದಕ್ಕಾಗಲಿ ಸೂಕ್ತ ಸಮರ್ಥನೆಯನ್ನು, ತಮ್ಮ ಬರವಣಿಗೆಯಲ್ಲಿ ಕೊಡದೆ, ಅನ್ಯಥಾ ಬ್ರಾಹ್ಮಣರನ್ನು ವಿರೋಧಿಸಿದರು ಎಂಬ ಅಪವಾದದ ಗೂಬೆಯನ್ನು ಅವರ ತಲೆಯ ಮೇಲೆ ಕೂರಿಸಲು ಪ್ರಯತ್ನಿಸಿದರು. ಇದ್ಯಾವುದಕ್ಕೂ ಸೊಪ್ಪು ಹಾಕದ ಅಂಬೇಡ್ಕರ್ ಹಿಂದೂ ಧರ್ಮ ಮತ್ತು ಅದರ ಯಜಮಾನಿಕೆಯ ಸಂಪೂರ್ಣ ತಿರಸ್ಕಾರಕ್ಕೆ ಒತ್ತುಕೊಟ್ಟು ಮತ್ತೆ ಮತ್ತೆ ಕರೆಕೊಟ್ಟರು. ಅವರು ದಲಿತರಿಗೆ ಒಡ್ಡಿದ ಅಡ್ಡಿಗಳನ್ನು ನಿವಾರಿಸುತ್ತಾ, ಯಾವುದಕ್ಕೂ ಜಗ್ಗದೆ ಹೋರಾಡಿ, ದಲಿತರಿಗೆ ಆತ್ಮವಿಶ್ವಾಸ ಮತ್ತು ಸಾಮಾಜಿಕ ಮತ್ತು ರಾಜಕೀಯ ಹಕ್ಕುಗಳ ಹೋರಾಟದ ಕಿಚ್ಚನ್ನು ಅವರಲ್ಲಿ ಹತ್ತಿಸಿದ ಕ್ರಾಂತಿ ಪುರುಷ, ದಲಿತರಿಗೆ ಸಂವಿಧಾನದಲ್ಲಿ ಸೌಲಭ್ಯಗಳು ಮತ್ತು ರಕ್ಷಣೆಗೆ ಅವಕಾಶ ಕಲ್ಪಿಸಿದ ಅಂಬೇಡ್ಕರ್ ಸಂವಿಧಾನ ಶಿಲ್ಪಿ.

ನಂತರ, ಅಂಬೇಡ್ಕರರ ಸ್ಥಾನ ತುಂಬುವ ವ್ಯಕ್ತಿ ಯಾರೂ ಬರಲಿಲ್ಲ. ಅವರ ನಂತರ ಮಹಾರಾಷ್ಟ್ರದಲ್ಲಿ ದಲಿತ ಪಾಂಥರ್ ಅಸ್ತಿತ್ವಕ್ಕೆ ಬಂದಿತು. ಅದು ವರ್ಗ ಆಧಾರಿತ ದಲಿತ ರಾಜಕೀಯ ಪಕ್ಷ. ಅದಕ್ಕೆ ಅಮೆರಿಕಾದ ಬ್ಲ್ಯಾಕ್ ಪಾಂಥರ್ ಪ್ರೇರಣೆ. ಅದು ಎಂದೂ ಎಡಪಕ್ಷದೊಂದಿಗೆ ಬೆರೆಯಲಿಲ್ಲ. ಅದಕ್ಕೆ ನಾಮದೇವ ಧಸಾಲೆ ಮತ್ತು ರಾಜ ಧಾಲೆ ನಾಯಕರು. ಕ್ರಮೇಣ ನಾಮದೇವ ಎಡಪಕ್ಷದ ಕಡೆಗೂ, ರಾಜಧಾಲೆ ಬೌದ್ಧಧರ್ಮದ ಕಡೆಗೂ ವಾಲಿದರು. ಹೀಗೆ ದಲಿತ ಪಾಂಥರ್ ಪಕ್ಷ ಅಂತ್ಯಗೊಂಡಿತು. ದಲಿತರಲ್ಲಿ, ಅದರಲ್ಲಿಯೂ ಅಂಬೇಡ್ಕರ್ ಸೇರಿದ ಮಹಾರ್ ವರ್ಗದಿಂದ ಯಾರೂ ತೀವ್ರವಾದಿ ನಾಯಕರು ಮುಂದೆ ಬರಲಿಲ್ಲ. ಅಂಥ ಶೂನ್ಯ ಮಹಾರಾಷ್ಟ್ರದ ದಲಿತ ಚಳುವಳಿಗೆ ಕವಿಯಿತು.

ಮಹಾರಾಷ್ಟ್ರದಲ್ಲಿ ದಲಿತ ಚಳುವಳಿ, ದಲಿತ ಸಾಹಿತ್ಯ ಚಳುವಳಿಯಾಗಿ ಸ್ವರೂಪ ಪಡೆಯಿತು. ಅದು ಸಾಮಾನ್ಯವಾಗಿ ಬ್ರಾಹ್ಮಣ ವಿರೋಧಿ ಪ್ರತಿಭಟನಾ ಸಾಹಿತ್ಯ ಚಳುವಳಿ. ದಲಿತ ಬರಹಗಾರರು. ದಲಿತರ ಬದುಕಿನ ಆಂತರಿಕ ಲೋಕವನ್ನು ತೆರೆದಿಟ್ಟರು. ದಲಿತ ಸಾಹಿತ್ಯ ಮುಖ್ಯವಾಗಿ ರಾಜಕೀಯ ಪ್ರೇರಿತ ಸಾಹಿತ್ಯ. ಗಂಭೀರ ದಲಿತ ಬರಹಗಾರರಿಂದ ಉತ್ತಮ ಕೃತಿಗಳೂ ಹೊರಬಿದ್ದಿವೆ. ದಲಿತರು ಆಕ್ರೋಶ, ನಿರಾಶೆ, ನಿಟ್ಟುಸಿರನ್ನು ಹೊರಹಾಕಲು ಸಾಹಿತ್ಯವನ್ನು ಮಾಧ್ಯಮವಾಗಿ ಬಳಸಿದರು. ದಲಿತರಲ್ಲಿಯೇ ಕೆಲವರು, ಮಹಾರಾಷ್ಟ್ರದ ಸಂತ ಚೋಕಮೇಳನಿಂದ ದಲಿತ ಸಾಹಿತ್ಯವನ್ನು ಗುರುತಿಸಿದರೆ, ಮತ್ತೆ ಕೆಲವರು ತೀವ್ರಗಾಮಿಗಳು ಭಕ್ತಿ ಸಾಹಿತ್ಯದಿಂದ ದಲಿತ ಸಾಹಿತ್ಯವನ್ನು ಗುರುತಿಸಿಕೊಳ್ಳುವುದನ್ನು ವಿರೋಧಿಸಿದರು; ಭಕ್ತಿ ಸಾಹಿತ್ಯ ಮುಖ್ಯವಾಗಿ ಅನುಭಾವದ್ದು, ಅದು ವಿಜ್ಞಾನ ಮತ್ತು ವೈಚಾರಿಕತೆಯ ವಿರೋಧಿ ಎಂದು ಪರಿಗಣಿಸಿ ನಿರಾಕರಿಸಿದರು. ಮಹಾರಾಷ್ಟ್ರದ ದಲಿತ ಸಾಹಿತ್ಯದಲ್ಲಿ ದಲಿತರ ಅತ್ಯುತ್ತಮ ಜೀವನ ಚರಿತ್ರೆಗಳು ಹೊರಬಿದ್ದಿವೆ. ಹೀಗೆ ದಲಿತ ಚಳುವಳಿ ಸಾಹಿತ್ಯ ಚಳುವಳಿಯಾಗಿ, ಸಾಮಾನ್ಯ ದಲಿತರ ಸಂಪರ್ಕದಿಂದ ದೂರ ಸರಿಯಿತು.

ದಲಿತ ಚಳುವಳಿಯ ಹಿಂದೆ-ಮುಂದೆ ಅಲ್ಲಲ್ಲಿ ಕೆಲವು ಚಳುವಳಿಗಳು ನಡೆದಿವೆ. ಅವೆಲ್ಲವೂ ಬ್ರಾಹ್ಮಣೇತರ ಸಾಮಾಜಿಕ ಚಳುವಳಿಗಳು. ಮಹಾರಾಷ್ಟ್ರದಲ್ಲಿ ವಾಲಂಕರ್ ಒಬ್ಬ ಹೋರಾಟಗಾರರು. ಅವರು ಸತ್ಯ ಶೋಧ ಸಮಾಜ ಸೇರಿದರು. ದಲಿತರ ಪರವಾಗಿ ಹೋರಾಡಿದವರಲ್ಲಿ ಜ್ಯೋತಿರಾವ್ ಫುಲೆಯವರೂ ಒಬ್ಬರು. ಕೇರಳದಲ್ಲಿ ನಾರಾಯಣ ಗುರುಗಳೂ ಶೋಷಿತರ ಪರವಾಗಿ ಚಳುವಳಿ ನಡೆಸಿದರು. ಅವರು ಎಳವಾ ಜನಾಂಗದ ಅಭಿವೃದ್ಧಿಗಾಗಿ ದುಡಿದರು. ಮದ್ರಾಸಿನ ಬ್ರಾಹ್ಮಣ ವಿರೋಧಿ ಚಳುವಳಿಗೆ ರಾಮಸ್ವಾಮಿ ನಾಯ್ಕರ್ ಅವರು ನಾಯಕರಾದರು. ಅದರಲ್ಲಿ ಬ್ರಾಹ್ಮಣೇತರರೂ ಮತ್ತು ಹಿಂದುಳಿದವರೂ ಭಾಗವಹಿಸಿದರು. ದ್ರಾವಿಡ ಕಳಗಂನಲ್ಲಿ ಕೆಳವರ್ಗದ ಉತ್ತಮರಾದವರದ್ದೇ ಮೇಲ್ಗೈಯಾಯಿತು. ದಕ್ಷಿಣ ಭಾರತದ ಹಿಂದುಳಿದ ವರ್ಗಗಳ ಚಳುವಳಿಗಳು ಮುಖ್ಯವಾಗಿ ಶಿಕ್ಷಣ ಸೌಲಭ್ಯ, ಉದ್ಯೋಗ, ಮತ್ತು ಸಾಮಾಜಿಕ ಸ್ಥಾನಮಾನ ಪಡೆಯುವ ಗುರಿ ಹೊಂದಿದ್ದವು. ಅವರಿಗೆ

ವಿವಿಧ ಉನ್ನತ ಹುದ್ದೆಗಳು ಮತ್ತು ಅಧಿಕಾರ ಹಿಡಿಯುವ ಆಸೆಯೂ ಇದ್ದಿತು. ಈ ಎಲ್ಲಾ ಚಳುವಳಿಗಳೂ ಮುಖ್ಯವಾಗಿ ಬ್ರಾಹ್ಮಣ ವಿರೋಧಿ ಚಳುವಳಿಗಳು. ಈ ಚಳುವಳಿಗಳ ಫಲವಾಗಿ ಭೂ ಸುಧಾರಣೆ, ಸರ್ಕಾರಿ ಸಾಲ, ಗ್ರಾಮೀಣ ಬ್ಯಾಂಕುಗಳಿಂದ ಸಿಕ್ಕಿದ ನೆರವಿನಿಂದ ಬಡವರು ಭೂಮಾಲೀಕರ ಮಾತನ್ನು ಮೀರಿ ಮತ ಚಲಾಯಿಸುವ ಧೈರ್ಯವನ್ನು ತಂದುಕೊಂಡರು. ಇದೇ ಸಂದರ್ಭದಲ್ಲಿ ಜಯಪ್ರಕಾಶ ನಾರಾಯಣರ ನವನಿರ್ಮಾಣ ಚಳುವಳಿಯನ್ನು ಮತ್ತು ಅಗ್ನಿವೇಶ್‌ರ ಮುಕ್ತಿ ಮೋರ್ಚಾ ಚಳುವಳಿಗಳನ್ನೂ ಹೆಸರಿಸಬಹುದು. ಈ ಯಾವ ಚಳುವಳಿಗಳೂ ರಾಷ್ಟ್ರೀಯ ಸ್ವರೂಪವನ್ನು ಪಡೆಯಲಾಗಲಿಲ್ಲ. ಆದರೆ ಮತ ಚಲಾವಣೆಗಳಿಂದ ಸಾಮಾಜಿಕ ಬದಲಾವಣೆ ಮಾತ್ರ ಸಾಧ್ಯವಾಗಲಿಲ್ಲ. ಚುನಾವಣೆಯಲ್ಲಿ ಭ್ರಷ್ಟ ಮಾರ್ಗಗಳು ಅಧಿಕವಾದವು.

ಮಹಾರಾಷ್ಟ್ರ, ಆಂಧ್ರ ಮತ್ತು ಕರ್ನಾಟಕದಲ್ಲಿ ಅಂಬೇಡ್ಕರರ ದಲಿತ ಚಳುವಳಿ ದಲಿತ ಸಾಹಿತ್ಯ ಚಳುವಳಿಯಾಗಿ ಪ್ರಬಲವಾದವು. ನಮ್ಮ ರಾಜ್ಯದಲ್ಲಿ ದಲಿತ ಸಾಹಿತ್ಯ ಚಳುವಳಿ ಬಸವಲಿಂಗಪ್ಪನವರ ಬೂಸಾ ಸಾಹಿತ್ಯ ಚಳುವಳಿಯಿಂದ ಉದ್ಘಾಟನೆಯಾಯಿತು. ದಲಿತ ಸಂಘರ್ಷ ಸಮಿತಿ ಅಸ್ತಿತ್ವಕ್ಕೆ ಬಂದು ದಲಿತ ಚಟುವಟಿಕೆಗಳು ತೀವ್ರಗೊಂಡವು. ದಲಿತ ಸಂಘರ್ಷ ಸಮಿತಿಯಲ್ಲಿ ದಲಿತ ಬುದ್ಧಿಜೀವಿಗಳು, ದಲಿತ ನೌಕರರು ಮತ್ತು ದಲಿತ ವಿದ್ಯಾರ್ಥಿಗಳು ಸಕ್ರಿಯವಾಗಿ ಭಾಗವಹಿಸಿ ದಲಿತ ಚಳುವಳಿ ತೀವ್ರ ಸ್ವರೂಪ ಪಡೆಯಿತು. ದಲಿತ ಸಂಘರ್ಷ ಸಮಿತಿಯಲ್ಲಿ ಅಂಬೇಡ್ಕರ್‌ವಾದಿಗಳು, ಮಾರ್ಕ್ಸ್‌ವಾದಿಗಳು ಮತ್ತು ಗಾಂಧಿವಾದಿ ದಲಿತರು ಇದ್ದರು. ತತ್ವಭೇದವಿಲ್ಲದೆ ದಲಿತರಿಗೆ ಎಲ್ಲಿಯಾದರೂ ಹಿಂಸೆ, ಅತ್ಯಾಚಾರ, ಅನ್ಯಾಯ ಆದರೂ ಪ್ರತಿಭಟಿಸಿ ದಲಿತ ಸಂಘರ್ಷ ಸಮಿತಿ ಹೋರಾಡಿ ನ್ಯಾಯ ದೊರಕಿಸುತ್ತಿತ್ತು. ಗ್ರಾಮೀಣ ಪ್ರದೇಶಗಳಲ್ಲಿ ಶಿಬಿರ, ವಿಚಾರ ಸಂಕಿರಣ, ಸಂವಾದಗಳನ್ನು ನಡೆಸಿ ದಲಿತ ಪ್ರಜ್ಞೆಯನ್ನು ಜಾಗೃತಗೊಳಿಸುತ್ತಿತ್ತು. ಶಿಕ್ಷಣದಿಂದ ಮಾತ್ರ ದಲಿತರ ಬಿಡುಗಡೆ ಎಂದು ಪ್ರಚಾರ ಮಾಡಿ, ಯುವಕರನ್ನು ಸಂಘಟಿಸಿತು. ದಲಿತರನ್ನು ಕೇವಲ ವೋಟಿನ ಬ್ಯಾಂಕ್ ಮಾಡಿಕೊಂಡಿದ್ದ ಕಾಂಗ್ರೆಸ್ ವಿರುದ್ಧ ದಲಿತರಲ್ಲಿ ಅರಿವು ಮೂಡಿಸಿ ಸವರ್ಣೀಯರಲ್ಲಿ ಸಂಚಲನವನ್ನುಂಟು ಮಾಡುವ ಪ್ರಬಲ ಸಂಘಟನೆಯಾಗಿ ಡಿ.ಎಸ್.ಎಸ್. ಬೆಳೆಯಿತು. ದಲಿತ ಸಂಘರ್ಷ ಸಮಿತಿ ರಾಜಕೀಯ ಶಕ್ತಿಯಾಗದೆ, ದಲಿತ ಸಾಹಿತ್ಯ ಚಳುವಳಿಯ ಅಂಗವಾಗಿಯೇ ಬೆಳೆಯಿತು. ಪ್ರಚಾರಕ್ಕಾಗಿ ಶೋಷಣೆಯ ವಿರುದ್ಧದ ಮಾರ್ಕ್ಸಿಸ್ಟರ ಸಾಮಾಜಿಕ ಹಾಡುಗಳನ್ನು ಬಳಸಿಕೊಂಡಿತು. ಕ್ರಮೇಣ ದಲಿತ ಹಾಡುಗಾರರು ಮತ್ತು ದಲಿತ ಬರಹಗಾರರು ಹುಟ್ಟಿಕೊಂಡರು. ಕರ್ನಾಟಕ ದಲಿತ ಸಾಹಿತ್ಯ ಚಳುವಳಿಗೆ ಮಹಾರಾಷ್ಟ್ರ ದಲಿತ ಸಾಹಿತ್ಯ ಚಳುವಳಿ, ಆಂಧ್ರದ ದಿಗಂಬರ ಸಾಹಿತ್ಯ ಚಳುವಳಿ, ಆಂಧ್ರದ ಗದ್ದರ್‌ರ ಎಡಪಂಥೀಯ ಹಾಡುಗಳು ಮತ್ತು ಪೆರಿಯಾರರ ಚಳುವಳಿಗಳು ಪ್ರೇರಣೆಗಳಾದವು. ಇದರ ಫಲವಾಗಿ ದಲಿತರು ಮಾನವೀಯತೆ ಮತ್ತು ರಾಜಕೀಯ ಹಕ್ಕುಗಳನ್ನು ಕುರಿತು ಸ್ಪಷ್ಟವಾಗಿ, ಖಚಿತವಾಗಿ ಮಾತನಾಡಬಲ್ಲವರಾದರು.

ಕನ್ನಡ ಸಾಹಿತ್ಯದಲ್ಲಿ ಬ್ರಾಹ್ಮಣ ಬರಹಗಾರರ ಗುತ್ತಿಗೆಯನ್ನು ಮುರಿಯುವುದಕ್ಕಾಗಿ ಕೆಲ ಶೂದ್ರ ಬುದ್ಧಿಜೀವಿಗಳು ಮುಂದಾಗಿ ಬಂಡಾಯ ಸಾಹಿತ್ಯವನ್ನು ಹುಟ್ಟು ಹಾಕಿದರು. ಬಂಡಾಯ ಸಾಹಿತ್ಯ ಚಳುವಳಿಯಲ್ಲಿ ಒಕ್ಕಲಿಗರು, ಲಿಂಗಾಯಿತರು, ದಲಿತರು, ಹಿಂದುಳಿದವರು, ಅಲ್ಪಸಂಖ್ಯಾತ ಬುದ್ಧಿ ಜೀವಿಗಳನ್ನು ಕೂಡಿಸಿದರು. ಬಂಡಾಯ ಸಾಹಿತ್ಯ "ಖಡ್ಗವಾಗಲಿ ಕಾವ್ಯ" ಎಂಬ ಘೋಷಣೆಯಿಂದ ಸಾಹಿತ್ಯ ಸಮಾಜಕ್ಕೆ ಬದ್ಧವಾಗಿರಬೇಕೆಂದು ಸಾರಿತು. ನವೋದಯ ಮತ್ತು ನವ್ಯ ಬರಹಗಾರ ಬ್ರಾಹ್ಮಣರು ಬಂಡಾಯ ಸಾಹಿತ್ಯ ನಿಲುವುಗಳಿಗೆ ತೀವ್ರವಾಗಿ ಪ್ರತಿಕ್ರಿಯಿಸಿದರು. ಅಸಡ್ಡೆ ಮತ್ತು ಶೋಷಣೆಗೆ ಒಳಗಾದ ಶೂದ್ರರಿಗೆ ಅಕ್ಷರ ಲೋಕದ ಪ್ರವೇಶ ಮುಕ್ತವಾಯಿತು. ಬಂಡಾಯ ಸಾಹಿತ್ಯ ಚಳುವಳಿ ಬ್ರಾಹ್ಮಣ ಬರಹಗಾರರ ನಿದ್ದೆ ಕೆಡಿಸಿತು. ಶೂದ್ರ ಸಂವೇದನೆಗಳ ಅಭಿವ್ಯಕ್ತಿಗೆ ಬಂಡಾಯ ವೇದಿಕೆ ಸೂಕ್ತ ಅವಕಾಶ ಒದಗಿಸಿತು. ಇದರಿಂದ ಮಹಾರಾಷ್ಟ್ರ, ಆಂಧ್ರ, ಬಂಗಾಳಗಳ ಎಡಪಂಥೀಯ ಮತ್ತು ದಲಿತರ ಸಂಪರ್ಕ ಮತ್ತು ಸಂವಾದಕ್ಕೆ ಅವಕಾಶ ಉಂಟಾಯಿತು. ಬಂಡಾಯ ಸಾಹಿತ್ಯದ ಮೊದಲ ಸಮ್ಮೇಳನದಲ್ಲಿಯೇ

ಬ್ರಾಹ್ಮಣ ಬರಹಗಾರರು ಬಂಡಾಯ ಸಾಹಿತ್ಯದ ಚಳುವಳಿಯ ಸದಸ್ಯರಾಗಬಹುದೋ, ಬೇಡವೋ ಎಂಬ ಚರ್ಚೆ ನಡೆದು, ಬ್ರಾಹ್ಮಣರು ಬಂಡಾಯ ಚಳುವಳಿಗೆ ನಿಷಿದ್ಧರೆಂದು ತೀರ್ಮಾನವಾಯಿತು. ಇದರಿಂದ ಮಾರ್ಕ್ಸಿಸ್ಟ್ ಬ್ರಾಹ್ಮಣ ಬರಹಗಾರರಿಗೆ ಆಘಾತವಾಯಿತು. ವರ್ಗ ಸಮಸ್ಯೆ ಮುಖ್ಯವಾದ ಮಾರ್ಕ್ಸಿಸ್ಟರಿಗೆ, ಅದರ ಬ್ರಾಹ್ಮಣ ಬರಹಗಾರರು, ಬಂಡಾಯ ಸಾಹಿತ್ಯದಲ್ಲಿ ಲಿಂಗಾಯತ ಮತ್ತು ಒಕ್ಕಲಿಗರ, ಬ್ರಾಹ್ಮಣ ವಿರೋಧಿ ಜಾತಿ ಸಂಘಟನೆಯ ಒಳಸಂಚನ್ನು ಗಮನಿಸಿ, ದೂರ ಸರಿದು ತಟಸ್ಥರಾದರು. ಬ್ರಾಹ್ಮಣೇತರ ಮಾರ್ಕ್ಸಿಸ್ಟರು ಬಂಡಾಯ ಸಾಹಿತ್ಯದಲ್ಲಿ ಪ್ರಧಾನ ಪಾತ್ರ ವಹಿಸಿದರು. ಬಂಡಾಯ ಸಾಹಿತ್ಯಕ್ಕೆ ಹಿಂದೆ ನಿಂತು, ಕುಮ್ಮಕ್ಕು ಕೊಟ್ಟು, ಬೆಂಬಲಿಸಿದ ನಿಯಂತ್ರಣ ಶಕ್ತಿಯ ಬೇರನ್ನು ಅಡಿಗ–ಕುವೆಂಪು ಸಂಘರ್ಷದಲ್ಲಿ ಕಂಡುಬಂದುದನ್ನು ಯಾರೂ ಅಲ್ಲಗಳೆಯಲಾರರು. ಒಟ್ಟಿನಲ್ಲಿ ವಿಶ್ವವಿದ್ಯಾಲಯದ ಬ್ರಾಹ್ಮಣೇತರ ಪ್ರಾಧ್ಯಾಪಕರು ಆಡಿಸುವ ಬೊಂಬೆಯಾಟದ ಪಾತ್ರಗಳು ಬಂಡಾಯ ಬರಹಗಾರರು. ಅಂದು ಬಂಡಾಯ–ಸಾಹಿತ್ಯವನ್ನು ಕುರಿತು ತೀವ್ರ ಚರ್ಚೆಯಾಯಿತು. ಸಾಹಿತ್ಯ ಚರ್ಚೆ ಸಾಹಿತ್ಯ ವಲಯವನ್ನೂ ಮೀರಿ, ಬದುಕಿಗೂ ವ್ಯಾಪಿಸಿತು. ಈ ಸಾಹಿತ್ಯ ಚರ್ಚೆಯ ಕಾವಿನಲ್ಲಿ ಮೈಕಾಯಿಸಿ ಲಾಭ ಪಡೆದವರೇ ಬೇರೆ. ಅದಕ್ಕೆ ಸೂಕ್ತ ಬೆಲೆ ತೆತ್ತವರು ದಲಿತರು ಮತ್ತು ಹಿಂದುಳಿದ ಬರಹಗಾರರು. ಬಂಡಾಯ ಚಳುವಳಿಯ ಚರ್ಚೆಯಲ್ಲಿ ತಾತ್ವಿಕ ಚಿಂತಕ ಕವಿ. ಪು.ತಿ.ನ ಅವರೂ ತಲೆಹಾಕಿದರು:- "ನಮ್ಮದು ಅನೇಕ ದೌರ್ಬಲ್ಯಗಳಿಂದ ಪೇಲವವಾದ ಸಮಾಜ ಸಮರ್ಥರೆಲ್ಲರಿಗೂ ಇದನ್ನು ತೋರಿಸಬೇಕು, ಪರಿಹರಿಸಬೇಕು. ಪ್ರವೃತ್ತಿ, ಹುಟ್ಟುವುದು ಸಹಜ. ಈಗಿನ ಸಮಾಜ ಸುಧಾರಣೆ, ಭವರೋಗ ವೈದ್ಯ, ದಲಿತೋದ್ಧಾರ, ಪ್ರಗತಿ ಪ್ರೇರಣೆ ಇಂಥವುಗಳಲ್ಲಿ, ಯಾವುದೋ ಒಂದನ್ನು ಹಠವಾಗಿ ಇಟ್ಟುಕೊಂಡು ಕಾವ್ಯ ಬರೆಯಲು ತೊಡಗುತ್ತಾನೆ. ಇದನ್ನೇ ಗೀಳು ಎಂದು ನೀವು ಕರೆದಿರಬಹುದು. ಕವಿಗಳ ಗೀಳುಗಳು ಸಹೃದಯರನ್ನು ವಿಭಾಗಿಸುತ್ತದೆ. ಇಡೀ ಬೃಹತ್ ಸಮಾಜದ ಮೇಲೆ ಮುದುಕುಗಳಿಗೆ ಮಾತ್ರ ಬೆಳಕು ಚೆಲ್ಲಿ ಖಂಡ ದೃಷ್ಟಿಯನ್ನು ಬೆಳೆಸುತ್ತವೆ. ಕವಿಗೆ ಖಂಡದೃಷ್ಟಿ ಸಲ್ಲದು.......ಕಾವ್ಯ ಹಾಗೇ ಸ್ವಯಂಪೂರ್ಣ" ಎನ್ನುತ್ತ ಬಂಡಾಯ ಚಳುವಳಿಯನ್ನು ಸಾಬೂನಿನ ಗುಳ್ಳೆಯಂತೆ ಎಂದರು. ಅಂದರೆ ಭಾರತೀಯ ಏಕ ಸಂಸ್ಕೃತಿಯ ಸಾಹಿತ್ಯವೊಂದೇ ಪೂರ್ಣದೃಷ್ಟಿಯದು. ಬಹುಸಂಸ್ಕೃತಿ ಸಾಹಿತ್ಯ ಖಂಡದೃಷ್ಟಿಯದು ಎನ್ನುವುದು ಈ ಮಾತಿನ ಧ್ವನಿ. ಇದಕ್ಕೆ ವಿರುದ್ಧವಾಗಿ ಬಂಡಾಯ ಸಾಹಿತ್ಯ ಚಳುವಳಿಗಾರರು "ಬಂಡಾಯ ಸಾಹಿತ್ಯ ಮತ್ತು ದಲಿತ ಚಳುವಳಿಗಳು ಕೆಳವರ್ಗಕ್ಕೆ ಹೊಸ ತಿರುವು ಕೊಟ್ಟವು. ತಮ್ಮ ಸಂಸ್ಕೃತಿ ಬಗ್ಗೆ ಆತ್ಮವಿಶ್ವಾಸ ಮೂಡಿತು. ಕೀಳರಿಮೆ ತೊಲಗುವಂತಾಯಿತು. ಅವರಿಗೆ ತಮ್ಮ ಸಾಹಿತ್ಯ, ಸಂಸ್ಕೃತಿ ಮತ್ತು ರಾಜಕೀಯದ ಅರಿವು ಜಾಗೃತವಾಯಿತು" ಎಂದರು. ಒಟ್ಟಿನಲ್ಲಿ ಬಂಡಾಯ ಸಾಹಿತ್ಯ ಚಳುವಳಿ ಜಾತಿ ಸಂಘರ್ಷಕ್ಕೆ ದಾರಿಯಾಯಿತು. ಬಂಡಾಯ ಸಾಹಿತ್ಯ ಚಳುವಳಿ ಶೂದ್ರರ ಮೇಲಿನ ಸ್ತರದ ಬಲಿಷ್ಠ ವರ್ಗಕ್ಕೆ ಜಾತಿ ಸಂಘರ್ಷಕ್ಕೆ ದಾರಿಯಾಯಿತು. ಬಂಡಾಯ ಸಾಹಿತ್ಯ ಚಳುವಳಿ ಶೂದ್ರರ ಮೇಲಿನ ಸ್ತರದ ಬಲಿಷ್ಠ ವರ್ಗಕ್ಕೆ ನೆರವಾಯಿತೇ ಹೊರತು ದಲಿತರು ಮತ್ತು ಹಿಂದುಳಿದ ಕೆಳಸ್ತರದವರಿಗೆ ಪ್ರಯೋಜನವಾಗಲಿಲ್ಲ ವೆಂಬುದು ವಾಸ್ತವ ಸತ್ಯ. ಬಂಡಾಯ ಸಾಹಿತ್ಯ ಸಾಹಿತ್ಯವೇ ಅಲ್ಲ. ಬಂಡಾಯ ಸಾಹಿತ್ಯದಲ್ಲಿ ಶ್ರೇಷ್ಠ ಕೃತಿ ಸೃಷ್ಟಿಯಾಗಲೇ ಇಲ್ಲ ಎಂಬ ಅಪವಾದವನ್ನು ಕೆಳಸ್ತರದ ವರ್ಗ ಎದುರಿಸಬೇಕಾಗಿ ಬಂದಿತು. ಇದಕ್ಕೆ ಸೂಕ್ತವಾಗಿ ಉತ್ತರಿಸಬಹುದಾದ, ಸಾಹಿತ್ಯ ಕೃಷಿಕರಾದ ಮೇಲಿನ ಸ್ತರದ ಶೂದ್ರರು, ನುಣುಚಿಕೊಂಡು, ಮತ್ತೆ ಭಾರತೀಯ ಸಂಸ್ಕೃತಿಯ ಭಾರತೀಯ ಕಾವ್ಯ ಮೀಮಾಂಸೆಯ ತತ್ವಗಳಿಗೆ ಜೋತು ಬಿದ್ದರು. ಶೂದ್ರರ ಮೇಲಿನ ಸ್ತರದವರ ಕುತಂತ್ರ ದಲಿತರಿಗೆ ಅರಿವಾಯಿತು. ಬಂಡಾಯ ಚಳುವಳಿಯಿಂದ ಸ್ವಾರ್ಥ ಸಾಧಿಸಿಕೊಂಡವರು ಅವರು. ಪ್ರೀತೀಶ್ ನಂದಿಯವರ ಮಾತು ಬಂಡಾಯ ಸಾಹಿತ್ಯ ಚಳುವಳಿಗೆ ಯಥಾವತ್ತಾಗಿ ಅನ್ವಯಿಸುತ್ತದೆ. "It is true that much literature called literature of Protest is .. the literature of Protest in the real sense. It is true that a good number of writers take up the weapon of Protest only to get into establishment their revolt is mainly for selfish motives" ಈ ಮಾತು ನಿಜವಾಗಿ ದಲಿತ ಮತ್ತು ಹಿಂದುಳಿದ ಬರಹಗಾರರನ್ನು ಬಂಡಾಯ

ಚಳುವಳಿ ಅನಾಥರನ್ನಾಗಿಸಿತು. ಶೂದ್ರ ವರ್ಗದ ಮೇಲಿನ ಸ್ತರದ ಒಕ್ಕಲಿಗ ಮತ್ತು ಲಿಂಗಾಯತ ಬರಹಗಾರರು, ಬ್ರಾಹ್ಮಣ ಬರಹಗಾರರಿಂದ ಅಧಿಕೃತವಾಗಿ ಮಾನ್ಯತೆ ಪಡೆದರು. ಇದರ ಅರಿವಾದ ದಲಿತರು ಧಾರವಾಡ ಮತ್ತು ಬೆಂಗಳೂರಿನ ದಲಿತ ಸಾಹಿತ್ಯ ಸಮ್ಮೇಳನದಲ್ಲಿ ಬಂಡಾಯ ಸಾಹಿತ್ಯ ಸತ್ತು ಹೋಯಿತು ಎಂದು ಘೋಷಿಸಿದರು. ಹೀಗೆ ಬಂಡಾಯ ಚಳುವಳಿ ನವ್ಯ ಸಾಹಿತ್ಯಕ್ಕೂ, ದಲಿತ ಸಾಹಿತ್ಯ ಬಂಡಾಯ ಸಾಹಿತ್ಯಕ್ಕೂ ಮಂಗಳ ಹಾಡಿದವು. ಹಿಂದುಳಿದ ವರ್ಗದ ಬರಹಗಾರರು ಎಡಬಿಡಂಗಿಗಳಾದರು.

ದಲಿತ ಸಾಹಿತ್ಯ ಚಳುವಳಿ ಮತ್ತೆ ಸ್ವತಂತ್ರವಾಗಿ ಪುನರುಜ್ಜೀವನಗೊಂಡಿತು. ಸಾಹಿತ್ಯದಲ್ಲಿ ಹಲವಾರು ಪ್ರಶ್ನೆಗಳು ಹುಟ್ಟಿಕೊಂಡವು. ಸಾಹಿತ್ಯದಲ್ಲಿ ಈಗಾಗಲೇ ಪ್ರತಿಭಟನೆಯ ಅಂಶಗಳಿವೆ, ಪ್ರತ್ಯೇಕವಾಗಿ ಪ್ರತಿಭಟನಾ ಸಾಹಿತ್ಯದ ಅಗತ್ಯವಿದೆಯೆ? ಬಂಡಾಯ ಸಾಹಿತ್ಯ ದಲಿತ ಸಾಹಿತ್ಯದ ಒಂದು ಭಾಗ ಏಕಾಗಬಾರದು? ದಲಿತ ಯಾರು? ಶೋಷಣೆಗೆ ಒಳಗಾಗಿರುವ ಎಲ್ಲಾ ವರ್ಗದ ದಲಿತರಿಗೆ ಸಮಾನರಾದ ಬಡವರು ದಲಿತರೊ? ದಲಿತ ಜಾತಿಯಲ್ಲಿ ಹುಟ್ಟಿದವರು ಮಾತ್ರ ದಲಿತರೊ? ಇಂಥ ಪ್ರಶ್ನೆಗಳು ತೀವ್ರವಾದ ಚರ್ಚೆಗೆ ಒಳಗಾಗಿವೆ. ದಲಿತರೆಲ್ಲಾ ಬಂಡಾಯಗಾರರು, ಬಂಡಾಯಗಾರರೆಲ್ಲಾ ದಲಿತರಲ್ಲ ಎಂಬ ರಾಜಿ ಸೂತ್ರವು ಉಚಿತವಲ್ಲ. ಬಂಡಾಯ ಸಾಹಿತ್ಯ ಚಳುವಳಿ ಮತ್ತು ದಲಿತ ಸಾಹಿತ್ಯ ಚಳುವಳಿಯಿಂದ ಎಷ್ಟರ ಮಟ್ಟಿಗೆ ಬರಹಗಾರರು ಸಾಮಾಜಿಕವಾಗಿ ಬದ್ಧರಾಗಿ ಬದುಕಿದರು? ಈ ತೀವ್ರಗಾಮಿ ಸಾಹಿತ್ಯ ಶೋಷಿತರ ಬದುಕನ್ನು ತಿದ್ದುವುದಕ್ಕಾಗಲಿ, ಸಮಾಜ ಬದಲಾವಣೆಯನ್ನು ಮಾಡುವುದಕ್ಕಾಗಲೀ ನೆರವಾಗಿದೆಯೆ? ಎಂಬ ಪ್ರಶ್ನೆ ಎದುರಾಗುತ್ತದೆ.

ಕರ್ನಾಟಕ ದಲಿತ ಸಂಘರ್ಷ ಸಮಿತಿ ಸಾಹಿತ್ಯ ಚಳುವಳಿಯಾಗಿ ಕಾರ್ಯ ಚಟುವಟಿಕೆಗಳನ್ನು ನಡೆಸಿತೇ ಹೊರತು ಒಂದು ರಾಜಕೀಯ ಸಂಘಟನೆಯಾಗಿ ಬೆಳೆಯಲಿಲ್ಲ. ರಾಜಕೀಯ ಪಕ್ಷಗಳ ರಾಜಕೀಯದಿಂದ ದೂರ ಇದ್ದ ಡಿ.ಎಸ್.ಎಸ್, ಜನತಾದಳ ಪಕ್ಷಗಳು ಬೆಂಬಲಿಸುವ ನಿರ್ಣಯದಿಂದ ದಲಿತ ಸಂಘರ್ಷ ಸಮಿತಿ ಒಡೆದು ಛಿದ್ರವಾಯಿತು. ಬುದ್ಧಿಜೀವಿ ದಲಿತರ ಕುತಂತ್ರ ಮತ್ತು ಆಮಿಷಗಳೇ ದಲಿತ ಸಂಘರ್ಷ ಸಮಿತಿಯನ್ನು ಬಲಿ ತೆಗೆದುಕೊಂಡು, ದಲಿತರನ್ನು ತಬ್ಬಲಿಗಳನ್ನಾಗಿಸಿತು. ದಲಿತ ಸಾಹಿತಿಗಳೂ ದಲಿತ ಸಾಹಿತ್ಯಕ್ಕೆ ಸ್ಥಳೀಯ ಕಾವ್ಯ ಮೀಮಾಂಸೆಯ ತತ್ವಗಳನ್ನು ಗುರುತಿಸಿಕೊಳ್ಳುವುದರಲ್ಲಿ ವಿಫಲರಾದರು. ದಲಿತ ಸಂಸ್ಕೃತಿ ಕೇಂದ್ರಿತ ಪ್ರಜ್ಞೆ ದಲಿತ ನಾಯಕ ಕೇಂದ್ರ ಪ್ರಜ್ಞೆಯಾಯಿತು. ದಲಿತ ನೌಕರರು ಬ್ರಾಹ್ಮಣೀಕರಣ ಮತ್ತು ಸಂಸ್ಕೃತೀಕರಣಕ್ಕೆ ಒಳಗಾಗಿ ಸವರ್ಣೀಯರನ್ನೂ ಮೀರಿಸಿದರು. "ಈಗ ದಲಿತ ಸಂಘರ್ಷ ಸಮಿತಿ ತನ್ನ ಹಿಂದಿನ ಶಕ್ತಿ, ಬಲ, ಗತ್ತು, ಒಗ್ಗಟ್ಟು, ಎದೆಗಾರಿಕೆಗಳೆಲ್ಲವನ್ನೂ ಕಳೆದುಕೊಂಡು ಬಡಕಲು ಮನೆಯಾಗಿದೆ." ಅಂಬೇಡ್ಕರರ ಸಿದ್ಧಾಂತದ ಆಚೆಯ ಗ್ರಾಮೀಣ ದಲಿತರ ನರಕ ಜೀವನದ ಅರಿವು ಬುದ್ಧಿಜೀವಿಗಳಿಗೆ ಆಗುತ್ತಿಲ್ಲ. ದಲಿತರೇ ದಲಿತರ ಬದುಕಿಗೆ ಕಂಟಕವಾಗುತ್ತಿರುವುದು ಒಂದು ದುರಂತ. ಅದೂ ಅಲ್ಲದೆ ಹೊಲೆಯ ಮತ್ತು ಮಾದಿಗ ಭೇದ ದಲಿತರನ್ನು ರಾಜಕೀಯವಾಗಿ ದುರ್ಬಲಗೊಳಿಸುತ್ತದೆ. ಬುದ್ಧಿಜೀವಿ ದಲಿತರ ಮೇಲೆ ಮೇಲ್ವರ್ಗದ ಹಿಂದೂಗಳ ಪ್ರಭಾವ ಹೆಚ್ಚಿದೆ. ಅವರಲ್ಲಿ ಬುದ್ಧಿಜೀವಿಗಳ ಸೋಗು ಹೆಚ್ಚಿದೆ. ದಲಿತ ನಾಯಕರೇ ಸವರ್ಣೀಯರು ಮತ್ತು ದಲಿತರ ನಡುವಣ ಅಂತರವನ್ನು ಹೆಚ್ಚು ಮಾಡಿ ಸ್ವಾರ್ಥ ಸಾಧಿಸಿಕೊಳ್ಳುತ್ತಿದ್ದಾರೆ. ದಲಿತರ ಮೇಲೆ ಹಿಂಸೆ, ದೌರ್ಜನ್ಯ, ಲೈಂಗಿಕ ಕಿರುಕುಳಗಳು ಹೆಚ್ಚುತ್ತಿವೆ. ಬುದ್ಧಿಜೀವಿ ದಲಿತರು ಮತ್ತು ಸಾಮಾನ್ಯ ಗ್ರಾಮೀಣ ದಲಿತರ ಅಂತರ ಹೆಚ್ಚುತ್ತಿದೆ.

ಯಾವುದೇ ರಾಜಕೀಯ ಪಕ್ಷದ ಆಡಳಿತ ಮೇಲ್ವರ್ಗದ ಪರವಾಗಿರುತ್ತದೆ. ಆಧುನಿಕ ಜಗತ್ತಿನಲ್ಲಿಯೂ ಸಂಪ್ರದಾಯವಾದಿಗಳು ದಲಿತರ ಪ್ರಗತಿಗೆ ಹೊಸ ಹೊಸ ಅಡ್ಡಿ ಸೃಷ್ಟಿಸುತ್ತಿದ್ದಾರೆ. ದಲಿತರೂ ಅಂಬೇಡ್ಕರ್ ತತ್ವಗಳಿಂದ ದೂರ ಸರಿಯುತ್ತಿದ್ದಾರೆ. ದಲಿತರ ಅನ್ಯಾಯಗಳ ವಿರುದ್ಧ ದಲಿತ ಪ್ರತಿಭಟನೆಗಳಂತೂ 'ರಿಚುಯಲ್'ಗಳಾಗಿ ನಡೆಯುತ್ತಿದ್ದು ಅರ್ಥ ಕಳೆದುಕೊಂಡು ಅಪಹಾಸ್ಯಕ್ಕೆ ಗುರಿಯಾಗುತ್ತಿವೆ.



ಪ್ರತಿಭಟನೆಗಳೇನೋ ಅಗತ್ಯ. ಆದರೆ ಪ್ರತಿಭಟನೆ ಮೀರಿ, ಸಂಘಟನೆಯಿಂದ ಹೋರಾಡುವ, ಹೊಸ ರಾಜಕೀಯ ತಂತ್ರವನ್ನು ದಲಿತರು ರೂಢಿಸಿಕೊಳ್ಳುವ ಅಗತ್ಯವಿದೆ. ದಲಿತರ ಮುಂದಿರುವ ಈಗಿನ ಸವಾಲು ಎಂದರೆ "What is needed therefore is to think of new strategies of political organization and action that can submerge internal differentiations and divisions among dalits and weave them together into a strong, purposeful and determined political force" -Ramashraya Roy ಒಟ್ಟಿನಲ್ಲಿ ಎಲ್ಲಾ ಭೇದ ಮರೆತು ದಲಿತರು ಒಂದು ಪ್ರಬಲ ರಾಜಕೀಯ ಶಕ್ತಿಯಾಗಿ ಸಂಘಟಿತರಾಗಬೇಕು.

ಹಿಂದೂ ಸಂಪ್ರದಾಯವಾದಿಗಳ ದಲಿತರ ಮೇಲಿನ ದೌರ್ಜನ್ಯ ಮತ್ತು ಆಧುನಿಕ ಪ್ರಲೋಭನೆಗೆ ಸಿಕ್ಕಿ ಗ್ರಾಮಾಣ ದಲಿತರನ್ನು ಕಡೆಗಣಿಸಿರುವ ದಲಿತ ಸಾಹಿತಿಗಳು, ಬುದ್ಧಿಜೀವಿಗಳು ಮತ್ತು ನಾಯಕರ ಭ್ರಷ್ಟಾಚಾರದ ವಿವರಣೆಗಳ ಪ್ರಸ್ತಾಪದಿಂದ ದಲಿತ ಸಮಸ್ಯೆಗಳು ಬಗೆ ಹರಿಯುವುದಿಲ್ಲ. ಎಲ್ಲಾ ರಾಜಕೀಯ ಪಕ್ಷಗಳೂ ಜನರನ್ನು ಕರೆತಂದು ಪ್ರತಿಭಟನೆ ನಡೆಸಿ, ಶಕ್ತಿ ಪ್ರದರ್ಶಿಸುವುದಕ್ಕಿಂತ, ದಲಿತ ಪ್ರತಿಭಟನೆಗಳೇನೂ ಉತ್ತಮ ಮಟ್ಟದಲ್ಲಿ ಪ್ರದರ್ಶಿತವಾಗುತ್ತಿಲ್ಲ. ಸಂಪ್ರದಾಯ ಹಿಂದೂಗಳಾಗಲಿ, ಆಡಳಿತ ನಡೆಸುವವರಾಗಲಿ, ಬುದ್ಧಿಜೀವಿ ದಲಿತರೂ ದಲಿತ ಪ್ರತಿಭಟನೆಗಳಿಗೆ ಸೂಕ್ಷ್ಮತೆ ಕಳೆದುಕೊಳ್ಳುತ್ತಿರುವುದು ಒಂದು ಗಂಭೀರ ವಿಷಯ. ಒಂದು ಹಂತದಲ್ಲಿ ದಲಿತರಿಗೆ ಯಾವ ರೀತಿಯ ಮೀಸಲಾತಿಯೂ ಬೇಡ, ಅವರು ಸ್ವಸಾಮರ್ಥ್ಯದಿಂದಲೇ ಅಭಿವೃದ್ಧಿ ಸಾಧಿಸುತ್ತಾರೆ ಎಂಬಂಥ ತೀಕ್ಷ್ಣ ಹೇಳಿಕೆ ಕೊಟ್ಟ ಬುದ್ಧಿಜೀವಿಗಳೇ ಇಂದು ಬಾಯಿ ಮುಚ್ಚಿಕೊಂಡು, ಪದವಿ, ಹಣ, ಅಧಿಕಾರಕ್ಕಾಗಿ ಮೇಲ್ವರ್ಗದ ರಾಜಕಾರಣಿಗಳ ಮನೆಗಳ ಬಾಗಿಲು ತಟ್ಟುತ್ತಿರುವುದಂತೂ ನಾಚಿಕೆಗೇಡಿನ ಪ್ರಸಂಗವೇ ಸರಿ. ಅಲ್ಲದೆ ದಲಿತರು ಎಲ್ಲಾ ರಾಜಕೀಯ ಪಕ್ಷದಲ್ಲಿಯೂ ಇದ್ದು, ದಲಿತ ಅಭಿವೃದ್ಧಿ ಮತ್ತು ದಲಿತ ಭ್ರಷ್ಟಾಚಾರಿಗಳ ವಿಷಯವಾಗಿ ಪರಸ್ಪರ ವಿರುದ್ಧದ ದಲಿತರ ಹೇಳಿಕೆಗಳು, ಮೇಲ್ವರ್ಗದ ಭ್ರಷ್ಟರ ಅಪಹಾಸ್ಯಕ್ಕೂ ಮತ್ತು ಸಾಮಾನ್ಯ ದಲಿತರು ಎದೆಗುಂದಿ, ಕಳವಳಕ್ಕೂ ಕಾರಣವಾಗುತ್ತಿರುವುದು ಅಂಬೇಡ್ಕರ್ ತತ್ವಗಳ ಅಣಕವೇ ಆಗಿದೆ. ದಲಿತರು ಹಿಂದುಳಿದ ವರ್ಗದ ಹಿತಚಿಂತಕರನ್ನು ಅನುಮಾನದಿಂದ ನೋಡುವುದು ಮತ್ತು ಸೋಗಲಾಡಿ ಮೇಲ್ವರ್ಗದವರನ್ನು

ನಂಬುವುದು ವಿಚಿತ್ರವಾಗಿದೆ. ಹೀಗಾಗಿ ಇಂದಿನ ದಲಿತ ಚಳುವಳಿಗಳು ಅಸಲಿ ದಲಿತ ಚಳುವಳಿಗಳಾಗಿ ಉಳಿದಿಲ್ಲ. ರಾಜಕೀಯ ಪ್ರೇರಿತ ಮತ್ತು ಪ್ರಚೋದಿತ ಚಳುವಳಿಗಳಾಗಿವೆ. ಕಾಂಗ್ರೆಸ್ ದಲಿತರು, ಬಿಜೆಪಿ ದಲಿತರು, ಜೆಡಿಎಸ್ ದಲಿತರು, ಎಸ್‌ಪಿ ದಲಿತರು, ಬಿಎಸ್‌ಪಿ ದಲಿತರು, ಮಾದಿಗ ದಲಿತರು, ಹೊಲೆಯ ದಲಿತರಿದ್ದು, ಅಸಲಿ ದಲಿತರು ಕರ್ನಾಟಕದಲ್ಲಿ ತೀರಾ ಅಲ್ಪ ಸಂಖ್ಯಾತರಾಗಿರುವುದೊಂದು ವಿಪರ್ಯಾಸ. ಇಂಥ ಒಂದು ಛಿದ್ರಗೊಂಡ ಪರಿಸ್ಥಿತಿಯಲ್ಲಿ ಮತ್ತೆ ದಲಿತ ಚಳುವಳಿಗಳು ಮೂಲಸ್ವರೂಪದಿಂದ ಒಂದು ಸಾಮಾಜಿಕ-ರಾಜಕೀಯ ಪ್ರಬಲ ಶಕ್ತಿಯಾಗಲು ಸಾಧ್ಯವೇ ಎಂಬುದರ ಬಗ್ಗೆ ದಲಿತ ನಾಯಕರು ಮತ್ತು ಬುದ್ಧಿಜೀವಿಗಳು ಆತ್ಮನಿರೀಕ್ಷೆ ಮಾಡಿಕೊಳ್ಳಬೇಕಿದೆ.

ದಲಿತ ಸಾಂಸ್ಕೃತಿಕ ಕ್ಷೇತ್ರವೂ ಕದಡಿ ಹೋಗಿದೆ. ದಲಿತ ಸಾಂಸ್ಕೃತಿಕ ನಾಯಕರು ತಮ್ಮ ತಮ್ಮ ಮೂಲ ಸಾಂಸ್ಕೃತಿಕ ಬೇರುಗಳನ್ನು ಕಂಡುಕೊಳ್ಳುವ ಮೊದಲೇ ಭಾರತೀಯ ಶೋಷಣೆ ಸಂಸ್ಕೃತಿ ಮತ್ತು ಪಾಶ್ಚಾತ್ಯ ಜಾಗತಿಕ ಸಂಸ್ಕೃತಿಗೆ ಬಲಿಯಾಗುತ್ತಿದ್ದಾರೆ. ತೀವ್ರವಾಗಿ ಬಂಡಾಯ ಮತ್ತು ದಲಿತ ಸಾಹಿತ್ಯವನ್ನು ವಿರೋಧಿಸಿದ ಬ್ರಾಹ್ಮಣರು, ಈಗ ಒಲವು ತೋರಿಸುತ್ತಿದ್ದಾರೆ. ಬ್ರಾಹ್ಮಣರನ್ನು ತೀವ್ರವಾಗಿ ವಿರೋಧಿಸುತ್ತಿದ್ದ ದಲಿತರು, ಬ್ರಾಹ್ಮಣರತ್ತ ಒಲವು ತೋರುತ್ತಿದ್ದಾರೆ. ಸಮಾನ ಸಂಸ್ಕೃತಿಯ, ಬದುಕಿನಲ್ಲಿ ಅಂದರೆ ಅನಕ್ಷರತೆ, ಬಡತನ ಮೌಢ್ಯತೆಯಲ್ಲಿ ಸಮಾನವಾಗಿ ಶೋಷಣೆಗೆ ಒಳಗಾಗಿ, ನೋವು ಸಂಕಟಗಳನ್ನು, ತಮ್ಮಷ್ಟೇ ಅನುಭವಿಸುತ್ತಿರುವ ಬಹುಸಂಸ್ಕೃತಿ ಮತ್ತು ಬಹು ಸಮಾಜಕ್ಕೆ ಸೇರಿದ ಹಿಂದುಳಿದ ವರ್ಗಗಳ ಪ್ರೀತಿ ವಿಶ್ವಾಸ ಕಡಿದುಕೊಂಡು, ದಲಿತರು ದೂರ ಸರಿಯುತ್ತಿದ್ದಾರೆ. ದ್ವೇಷಿಸುವವರಲ್ಲಿ ಪ್ರೀತಿ, ಪ್ರೀತಿಸುವವರಲ್ಲಿ ದ್ವೇಷ ತಾಳುತ್ತಿರುವುದು ದಲಿತರ ಅಭಿವೃದ್ಧಿ ಮತ್ತು ಚಳುವಳಿಗಳಿಗೆ ಕಂಟಕವೇ ಸರಿ. ಮಲೆಗಳಲ್ಲಿ ಮದುಮಗಳು ಕಾದಂಬರಿಯು ದಲಿತ ಪಾತ್ರಗಳ ಮರು ವಿಮರ್ಶೆಯಿಂದ ಹೊಸ ತಿರುವು ಪಡೆಯಿತು. ಈ ವಿಮರ್ಶೆಯಿಂದ ಬ್ರಾಹ್ಮಣರು ನೇರವಾಗಿ ದಲಿತರ ಶೋಷಕರಲ್ಲ, ಒಕ್ಕಲಿಗರು, ಲಿಂಗಾಯತರು ಮತ್ತು ಹಿಂದುಳಿದವರೆ ನೇರವಾಗಿ ದಲಿತರ ಶೋಷಕರು ಎಂಬ ಹೊಸ ವ್ಯಾಖ್ಯಾನ ಚಾಲನೆ ಪಡೆಯಿತು. ಆದರೆ ಉತ್ತರ ಕರ್ನಾಟಕದಲ್ಲಿ ಲಿಂಗಾಯತರ ಅನ್ಯಾಯಗಳ ವಿರುದ್ಧ ಹೋರಾಡುವ ದಲಿತ ಸಂಘಟನೆ ಎಂದೂ ಬಲವಾಗಲಿಲ್ಲ. ಹಳೆಯ ಮೈಸೂರಿನ ಒಕ್ಕಲಿಗರ ಅನ್ಯಾಯಗಳ ವಿರುದ್ಧ ದಲಿತ ಸಂಘಟನೆಗಳು ಎಂದೂ ಪ್ರಬಲವಾಗಿ ಹೋರಾಟ ನಡೆಸಲಾಗಲಿಲ್ಲ. ಹೆಚ್ಚಾಗಿ ದಲಿತ ಸಂಘಟನೆಗಳು ಮತ್ತು ಚಳುವಳಿಗಳು, ತಮ್ಮಷ್ಟೇ ಅಸಂಘಟಿತರಾದ, ದಲಿತರಿಗೆ ಸಮಾನರಾದ ಹಿಂದುಳಿದ ವರ್ಗಗಳ ವಿರುದ್ಧ ಹೋರಾಡಿ, ತಮ್ಮ ಪೌರುಷವನ್ನು ಮತ್ತು ಹೋರಾಟದ ಅಸ್ತಿತ್ವವನ್ನು ರಕ್ಷಿಸಿಕೊಂಡು ಚಳುವಳಿಗಳನ್ನು ಮುಂದುವರಿಸಿಕೊಂಡು, ಜೀವಂತವಾಗಿಸಿಕೊಂಡಿದ್ದಾರೆ. ಇದು ಅಂಬೇಡ್ಕರರ 'Be Lion and fight' ಎಂಬ ಕರೆಗೆ ಎಷ್ಟು ವಿರುದ್ಧವಾದುದು ಎನ್ನಬಹುದು. ಮೇಲ್ವರ್ಗ ತಮ್ಮ ಮೇಲೆ ನಡೆಸುತ್ತಿರುವ ದೌರ್ಜನ್ಯವನ್ನು, ತಮಗಿಂತಲೂ ದುರ್ಬಲರ ಮೇಲೆ ದಲಿತರ ದೌರ್ಜನ್ಯ ಸೇಡು ತೀರಿಸಿಕೊಳ್ಳುವುದು ಮಾನವೀಯವೆ? ಸಾಮಾಜಿಕ ನ್ಯಾಯವೆ? ದಲಿತರು ಅಸ್ಪೃಶ್ಯ ನಿಷೇಧದ ಅಪರಾಧಗಳನ್ನು ಯಾರ ವಿರುದ್ಧ ಬಳಸಿ ಗೆದ್ದಿದ್ದಾರೆ ಎಂಬ ಅಪರಾಧಗಳ ಅಂಕಿಅಂಶಗಳ ಪರಿಶೀಲನೆಯಿಂದ ಇದು ಸ್ಪಷ್ಟವಾಗುತ್ತದೆ. ಪ್ರಾಂತೀಯ ಹಿಂದುಳಿಯುವಿಕೆಯ ಅಸಮಾನತೆಗೂ, ದಲಿತ ಮತ್ತು ಹಿಂದುಳಿದವರ ಹಿಂದುಳಿವಿಕೆಯ ಅಸಮಾನತೆಗಳಿಗೂ ವ್ಯತ್ಯಾಸವಿದೆ. ಹಿಂದುಳಿಯುವಿಕೆಯ ಪ್ರಾಂತಗಳ ದಲಿತ ಮತ್ತು ಹಿಂದುಳಿದಿರುವ ವರ್ಗಗಳ ಅಸಮಾನತೆಯ ಬಗ್ಗೆ ಸಮೀಕ್ಷೆ ಅಗತ್ಯವಾಗಿದೆ. ಅಲ್ಲದೆ ಅಸಮಾನತೆ ಆಧಾರದ ಅಭಿವೃದ್ಧಿ ನೆರವಿನ ಸಿಂಹಪಾಲು ಪಡೆಯುತ್ತಿರುವವರ ಸಮೀಕ್ಷೆಯೂ ಜೊತೆ ಜೊತೆಯಲ್ಲಿ ನಡೆಯಬೇಕಿದೆ. ಪ್ರಾಂತೀಯ ಅಸಮಾನತೆಗೆ ಯೋಜನೆಗಳನ್ನು ರೂಪಿಸುವಂತೆ ಹಿಂದುಳಿದ ಮತ್ತು ದಲಿತರ ಅಸಮಾನತೆಯ ನಿವಾರಣೆಗೆ ಯೋಜನೆಯನ್ನು ರೂಪಿಸುವಂತೆ ಹೋರಾಡುವ ನೈತಿಕತೆ ಚಳುವಳಿಗಳಿಗಿವೆಯೆ? ದಲಿತ ಬರಹಗಾರರು ಬ್ರಾಹ್ಮಣ ಬರಹಗಾರರ ಮುನ್ನುಡಿಗೆ, ಬ್ರಾಹ್ಮಣ ಬರಹಗಾರರು ದಲಿತ ಕೃತಿಗಳ ಮುಖಸ್ತುತಿಗೆ ತುದಿಗಾಲಿನಲ್ಲಿ ನಿಂತಿರುವುದು ಸಾಹಿತ್ಯ ಇತಿಹಾಸದ ವಿಪರ್ಯಾಸವಲ್ಲದೆ ಮತ್ತೇನು? ಲಿಂಗಾಯತ

ಬರಹಗಾರರು ಮತ್ತು ಒಕ್ಕಲಿಗ ಬರಹಗಾರರು ಹಿಂದುಳಿದ ಬಹು ಸಮಾಜ ಮತ್ತು ಬಹುಸಂಸ್ಕೃತಿಗಳ ವಕ್ತಾರರಂತೆ ವರ್ತಿಸುತ್ತಿರುವುದಂತೂ ಕನ್ನಡ ಸಂಸ್ಕೃತಿಗೆ ಆಗುತ್ತಿರುವ ಅಪಮಾನವೇ ಸರಿ. ಕರ್ನಾಟಕ ಸಂಸ್ಕೃತಿ ಯಾವುದು? ಜೈನ ಸಂಸ್ಕೃತಿಯೆ? ಲಿಂಗಾಯತ ಸಂಸ್ಕೃತಿಯೆ? ಬ್ರಾಹ್ಮಣ ಸಂಸ್ಕೃತಿಯೆ? ದಲಿತ ಸಂಸ್ಕೃತಿಯೆ? ಹಿಂದುಳಿದವರ ಸಂಸ್ಕೃತಿಯೆ? ರಾಜಕೀಯ ದಬ್ಬಾಳಿಕೆಯ ಸಂಸ್ಕೃತಿಯೆ? ಕರ್ನಾಟಕ ಸಂಸ್ಕೃತಿ ಯಾವುದು? ಅದರ ಲಕ್ಷಣಗಳೇನು? ಎಂಬುದು ಮೊದಲು ಸ್ಪಷ್ಟವಾಗಬೇಕಿದೆ.

ಸಾಹಿತ್ಯ ಕ್ಷೇತ್ರದಲ್ಲಿಯಂತೂ ಸೌಲಭ್ಯಗಳಿಗಾಗಿ ಬ್ರಾಹ್ಮಣರೂ ದಲಿತರಾಗುವ, ಸೌಲಭ್ಯಗಳಿಂದ ದಲಿತರೂ ಬ್ರಾಹ್ಮಣರಾಗುವ ವಿಷಮ ಸನ್ನಿವೇಶದಲ್ಲಿ ಹಿಂದುಳಿದ ವರ್ಗಗಳ ಬರಹಗಾರರಿಗೆ ತ್ರಿಶಂಕು ಸ್ಥಿತಿ ಒದಗಿದೆ. ಇಂಥ ವಾಸ್ತವಿಕ ಸ್ಥಿತಿಗತಿಯಿಂದ ಕನ್ನಡ ನಾಡು, ನುಡಿ, ಸಾಹಿತ್ಯ ಮತ್ತು ಸಂಸ್ಕೃತಿಯನ್ನು ಅರಿಯಬೇಕಿದೆ. ಎಲ್ಲಾ ವರ್ಗಗಳೂ ಅಂತರಂಗದಲ್ಲಿ ಜಾತಿ ಬದ್ಧತೆ, ಬಹಿರಂಗದಲ್ಲಿ ಜ್ಯಾತ್ಯತೀತ ನಿಲುವು–ಇಬ್ಬಂದಿತನದಿಂದ, ಕರ್ನಾಟಕ ಜನ ಮತ್ತು ಸಂಸ್ಕೃತಿ, ದ್ವಿ ಆತ್ಮದಿಂದ (two souls) ನರಳುತ್ತಿದೆ. ದಲಿತರೂ ಮತ್ತು ದಲಿತ ಚಳವಳಿಗಳೂ ಇದಕ್ಕೆ ಹೊರತಲ್ಲ. ಪರಸ್ಪರ ನಾಶಕರವಾದ ಮೋಹಿನಿ–ಭಸ್ಮಾಸುರ ನಾಟಕಕ್ಕೆ ಕೊನೆ ಎಂದು.?

ಯಾವ ಚಳುವಳಿಗಳಿಂದಲೂ ಮಾನವೀಯತೆಯಾಗಲಿ, ಸಾಮಾಜಿಕ ಬದಲಾವಣೆಯಾಗಲಿ, ಸಾಮಾಜಿಕ ನ್ಯಾಯ ಒದಗುವುದರಿಂದ ದೇಶ ಜಾರುಗತಿಯಲ್ಲಿ ತೀವ್ರವಾಗಿ ಚಲನೆಯಲ್ಲಿದೆ. ಭಾರತ ಜಗತ್ತಿನ ಕಣ್ಣಲ್ಲಿ ಪ್ರಗತಿ ಸಾಧಿಸುತ್ತಿದೆ. ಆದರೆ ಯಾವ ವರ್ಗ ಮತ್ತು ಹೇಗೆ ಎಂಬ ವಾಸ್ತವಿಕ ಅರಿವಿಲ್ಲದೆ ಭ್ರಮೆಯಲ್ಲಿದೆ. ಕರ್ನಾಟಕದ ದಲಿತ ಸಂಘರ್ಷ ಸಮಿತಿ ಸ್ಥಾಪಿಸಿ, ಹೋರಾಡಿ ಅಂತ್ಯದಲ್ಲಿ ಅಸಡ್ಡೆಗೆ ಈಡಾದ ಬಿ. ಕೃಷ್ಣಪ್ಪನವರ ಮಾತು ನೆನಪಿಗೆ ಬರುತ್ತದೆ "ಇಪ್ಪತ್ತೈದು ವರುಷಗಳಷ್ಟು ಹಿಂದೆ ನಾನು ಆರಂಭಿಸಿದ ದಲಿತ ಚಳುವಳಿಯ ನಾಯಕರು ಇಂದು, ಆಳುವ ಜಾತಿಗಳ ಮನೆ ಬಾಗಿಲಲ್ಲಿ ಭಿಕ್ಷೆ ಬೇಡುತ್ತಾ ನಿಂತಿದ್ದಾರೆ. ಆದರೆ ಹದಿಮೂರು ವರುಷಗಳ ಹಿಂದೆ, ಬಹುಜನ ಸಮಾಜ ಪಾರ್ಟಿಯನ್ನು ಕಟ್ಟಿದ ಕಾನ್ಷಿರಾಮ್‌ರವರು, ಇಂಡಿಯಾದ ಅತಿದೊಡ್ಡ ರಾಜ್ಯದಲ್ಲಿ ಸರ್ಕಾರ ರಚಿಸಿದ್ದಾರೆ ಮತ್ತು ಇಡೀ ದಲಿತ ಸಮೂಹದ ನಡುವೆ ಸ್ವಾಭಿಮಾನವನ್ನು ತುಂಬಿದ್ದಾರೆ ಹಾಗೂ ನಾಳೆ ಈ ನಾಡನ್ನು ಆಳುವ ಕನಸುಗಳನ್ನು ನಮಗೆ ಕೊಟ್ಟಿದ್ದಾರೆ". ಮಧ್ಯಪ್ರದೇಶದಲ್ಲಿ ಮಾಯಾವತಿ ಕನಸನ್ನು ನನಸು ಮಾಡಿ ದಲಿತ ಮುಖ್ಯಮಂತ್ರಿಯಾಗಿ, ರಾಜಕೀಯ ಗದ್ದುಗೆ ಹಿಡಿದಿದ್ದಾರೆ. ಇದು ಅಂಬೇಡ್ಕರರ ತತ್ವಕ್ಕೆ ನಿಷ್ಠವೆ? ಇದರಿಂದ ದಲಿತರ ಸಮಗ್ರ ಅಭಿವೃದ್ಧಿ ಸಾಧ್ಯವೆ? ರಾಜರುಗಳ ಸರ್ವಾಧಿಕಾರಿ ಯುಗದಲ್ಲಾಗಲಿ, ಮತಾಂತರದಲ್ಲಿಯಾಗಲಿ, ಪ್ರಜಾಪ್ರಭುತ್ವದಲ್ಲಾಗಲಿ, ಜಾಗತೀಕರಣದ ಮಾಹಿತಿ ಯುಗದಲ್ಲಾಗಲಿ, ಬ್ರಾಹ್ಮಣಶಾಹಿ ನುಸುಳಿ, ದಲಿತ ಮತ್ತು ಹಿಂದುಳಿದ ವರ್ಗಗಳ ಚಳುವಳಿಗಳನ್ನು ಹತ್ತಿಕ್ಕಿ, ಅಭಿವೃದ್ಧಿಯನ್ನು ವಿಫಲಗೊಳಿಸಿರುವುದು ಭಾರತದ ಇತಿಹಾಸ. ಇಂದು ಬ್ರಾಹ್ಮಣಿಕೆ ಬ್ರಾಹ್ಮಣ ವರ್ಗಕ್ಕೇ ಮೀಸಲಲ್ಲ. ಎಲ್ಲಾ ವರ್ಗಗಳಿಗೂ ವ್ಯಾಪಿಸಿ, ಬ್ರಾಹ್ಮಣಶಾಹಿ ವಿಶ್ವ ವ್ಯಾಪಿಯಾಗಿದೆ. ಕೇವಲ ಅಧಿಕಾರದ ಗದ್ದುಗೆಗಾಗಿ ಬಿ.ಎಸ್.ಪಿ. ಬ್ರಾಹ್ಮಣ ವರ್ಗದೊಂದಿಗೆ ಅಧಿಕಾರ ಹಿಡಿದು ಮಧುಚಂದ್ರ ಅನುಭವಿಸುತ್ತಿರುವುದು ಎಲ್ಲಿಯ ತನಕ? ದಲಿತರು ದಲಿತರ, ಹಿಂದುಳಿದ ವರ್ಗಗಳು ಹಿಂದುಳಿದ ವರ್ಗಗಳ ಪ್ರತಿಭಾ ಭ್ರೂಣಹತ್ಯೆಗೆ ಇಳಿದಿರುವಾಗ ಸಂಘಟನೆ ಮತ್ತು ಚಳುವಳಿಗಳು ಸಾಧ್ಯವೆ? ಇದು ನಿರಾಶೆಯ ಮಾತಲ್ಲ. ಕೇವಲ ಆದರ್ಶಗಳ ಭ್ರಮೆಯ ಕನಸು ಬಿತ್ತುವವರ ಕುತಂತ್ರಗಳ ವಾಸ್ತವ ಚಿತ್ರ. ಇಂದು ಸಾಹಿತ್ಯ ಕ್ಷೇತ್ರ ಜಾತಿ, ಪ್ರಭಾವ, ಗುಂಪುಗಳಿಂದ ರಾಡಿಯಾಗಿ ಅಪಮೌಲ್ಯೀಕರಣಗೊಂಡಿದೆ. ಹಿಂದಿಗಿಂತಲೂ ಇಂದು ಅಭಿವ್ಯಕ್ತಿಯ ಹಕ್ಕು ತುಳಿತಕ್ಕೆ ಒಳಗಾಗಿ ಜಾತಿ ಸಾಹಿತಿಗಳು, ಮಠಾಧಿಪತಿಗಳು, ರಾಜಕಾರಣಿಗಳು ಮತ್ತು ಆಡಳಿತಗಾರರ ಕೆಂಗಣ್ಣಿಗೆ ಅಭಿವ್ಯಕ್ತಿ ಸ್ವಾತಂತ್ರ್ಯ ಗುರಿಯಾಗಿದೆ. ಅದನ್ನು ಪ್ರಶ್ನಿಸುವವರ ಬದುಕು ಮಣ್ಣುಗೂಡುತ್ತದೆ. ಕರ್ನಾಟಕದಲ್ಲಿ ಸಂಶೋಧನೆಯ ಕ್ಷೇತ್ರದಷ್ಟು ಹದಗೆಟ್ಟಿರುವ ಯಾವ ಕ್ಷೇತ್ರವೂ ಇಲ್ಲ. ಇದಕ್ಕೆ ಮಾಧ್ಯಮಗಳ ಕುಮ್ಮಕ್ಕೂ ಇದೆ. ಇವತ್ತಿನ ಕನ್ನಡದ ಬರಹಗಾರರಿಗೆ ತಾತ್ವಿಕ ಚಿಂತನೆಯಾಗಲಿ, ಕರ್ನಾಟಕ ಸಂಸ್ಕೃತಿಯ

ಆಳವಾದ ಹಿನ್ನೆಲೆಯಾಗಲಿ ಇಲ್ಲ. ಕೇವಲ ಊಹೆಯ ಮೇಲೆ ನಿಂತ, ಆಧಾರ ಸಾಕ್ಷಿಗಳ ಅಭಾವದ ಸಾಹಿತ್ಯ ಚಿಂತನೆಗಳು ಮೇಲ್ವರ್ಗದ ಅಥವಾ ಅಧಿಕ ಸಂಖ್ಯಾ ಬಲದ, ಅಸಮಗ್ರ ಅಧ್ಯಯನದ ಜಾತಿ, ಮಠಮಾನ್ಯ, ಫ್ಯೂಡಲ್ ಮನೋಭಾವದ ಹುಸಿ ಸಾಹಿತ್ಯ, ಜನರ ದಿಕ್ಕು ತಪ್ಪಿಸುತ್ತ ವಿಜೃಂಭಿಸುತ್ತಿದೆ. ದಲಿತರು ಮತ್ತು ಹಿಂದುಳಿದ ವರ್ಗಗಳು ಅಸಲಿ ಚಿಂತನೆಗಳನ್ನು ಗುರುತಿಸಿ. ಬೆಳೆಸಿ, ರೂಢಿಸಿಕೊಳ್ಳದೆ, ಪದವಿ, ಪ್ರಶಸ್ತಿ ಅಧಿಕಾರ, ಹಣದ ಪ್ರಲೋಭನೆಗಳಿಗೆ ಮರುಳಾಗಿ, ಹುಸಿಚಿಂತನೆಗಳ ಅನುಕರಣೆಗಳಿಂದ ಒಗ್ಗಟ್ಟು ಸಾಧಿಸುವುದು ಸಾಧ್ಯವೆ? ಮಾನವೀಯ ಮತ್ತು ರಾಜಕೀಯ ಹಕ್ಕುಗಳಿಗೆ ಅಧಿಕೃತವಾದ ಮಾನ್ಯತೆ ಇಲ್ಲದ ಈ ಹುಸಿ ಚಿಂತನೆಗಳಿಂದ ದಲಿತರ ಅಭಿವೃದ್ಧಿ ಸಾಧ್ಯವೆ? ಬಡತನ ಶತಶತಮಾನಗಳಿಂದ ಬೆನ್ನು ಹತ್ತಿರುವ ದಲಿತರು ಜಾಗತೀಕರಣದಲ್ಲಿ ವ್ಯಾಪಾರೀಕರಣದ ಮನುಷ್ಯರ ಕಳ್ಳ ಸಾಗಾಣಿಕೆಯಂಥ ಭ್ರಷ್ಟ ಬಂಡವಾಳಗಾರರ ಹಣ, ಅಧಿಕಾರದೊಂದಿಗೆ ದಲಿತ ಚಳುವಳಿಗಳು ಪ್ರಬಲವಾಗಿ ಬೆಳೆಯುವುದು ಸಾಧ್ಯವೆ? ದಲಿತ ಸಾಹಿತ್ಯ ವಿಮರ್ಶೆಗೆ, ಸ್ಥಳೀಯ ಸಾಹಿತ್ಯ ವಿಮರ್ಶೆಯ ಪದ್ಧತಿಯನ್ನು ಗುರುತಿಸಿ, ಅನ್ವಯಿಸಿಕೊಂಡು, ಬೆಳೆಸುವುದರಲ್ಲಿ ವಿಫಲರಾಗಿ, ಭಾರತೀಯ ಸಂಸ್ಕೃತಿ ವರ್ಣಸಂಸ್ಕೃತಿಯ ಕಾವ್ಯ ಮೀಮಾಂಸೆ ಮತ್ತು ಒಗ್ಗದ ಪಾಶ್ಚಾತ್ಯ ಕಾವ್ಯ ಮೀಮಾಂಸೆ ವಿಮರ್ಶಾ ತತ್ತ್ವಗಳಿಗೆ ಶರಣಾದುದೇ, ದಲಿತ ಅಥವಾ ಬಂಡಾಯ ಸಾಹಿತ್ಯ ಬೆಳೆಯದೆ, ದಲಿತ ಮತ್ತು ಬಂಡಾಯ ಚಳವಳಿಗಳು ಬೆಳೆದವು. ಸ್ಥಳೀಯ ಕಾವ್ಯ ಮೀಮಾಂಸೆಯ ತತ್ತ್ವಗಳು. ನೀಗ್ರೋ ಕಾವ್ಯ ಮೀಮಾಂಸೆಯ ಮತ್ತು ರಾಜಕೀಯ ಹಾಗೂ ಕಲಾತತ್ತ್ವಗಳು, ಮತ್ತು ಮಾರ್ಕ್ಸ್ ಕಾವ್ಯ ವಿಮರ್ಶಾ ತತ್ತ್ವಗಳಿಂದ ನಿಜವಾದ ಪ್ರೇರಣೆ ಪಡೆಯದ ದಲಿತ-ಬಂಡಾಯ ಸಾಹಿತ್ಯ ಪೇಲವವಾಯಿತು ಮತ್ತು ಸಾಹಿತ್ಯ ಚಳುವಳಿಗಳೂ ದುರ್ಬಲಗೊಂಡವು. ಸಂಸ್ಕೃತಿಯ ತಳಹದಿ ಇಲ್ಲದೆ ಬಂಡಾಯ ದಲಿತ ಸಾಹಿತ್ಯದ ಕಟ್ಟಡ ನಿರ್ಮಾಣ ಕುಸಿಯಿತು. ದಲಿತ ಬಂಡಾಯ ಸಾಹಿತಿಗಳು ಗುರುತಿಸಿಕೊಂಡ ಸಾಹಿತ್ಯ ವಚನ ಮತ್ತು ಕುವೆಂಪು ವಿಚಾರ ಕ್ರಾಂತಿಯ ಹಂತದಲ್ಲಿಯೇ ತೇಲಾಡಿತ್ತೇ ಹೊರತು, ಸೃಜನಾತ್ಮಕವಾಗಿ ಕ್ರಿಯಾಶೀಲ ಚಾಲನೆ ಪಡೆಯಲಿಲ್ಲ. ಬುದ್ಧ, ಬಸವ ಮತ್ತು ಅಂಬೇಡ್ಕರ್. ಬುದ್ಧ, ಮಾರ್ಕ್ಸ್, ಅಂಬೇಡ್ಕರ್, ಲೋಹಿಯಾ, ಅಂಬೇಡ್ಕರ್ ಮತ್ತು ಮಾರ್ಕ್ಸ್ ಮುಂತಾದ ಎಡಪಂಥೀಯ ಚಿಂತನೆಗಳು ಕೇವಲ ವಿಚಾರ ಸಂಕಿರಣ, ಸಂವಾದಗಳು ಬುದ್ಧಿಜೀವಿಗಳ ಅಮೂರ್ತ ಚಿಂತನೆಗಳ ಕಸರತ್ತು ನಡೆಯಿತೇ ಹೊರತು ಅವು ಸಾಮಾನ್ಯರ ಮೂರ್ತ ಗ್ರಹಿಕೆಯ ಅನುಭವಕ್ಕೆ ಇಳಿಸುವ ಪ್ರಯತ್ನ ನಡೆಯಲೇ ಇಲ್ಲ. ಬುದ್ಧಿಜೀವಿಗಳ (ಮೇಲ್ವರ್ಗದ) ಸಂಪರ್ಕ, ಸಹವಾಸ, ಒಡನಾಟ ದಲಿತರಿಗೆ ಹೆಮ್ಮೆಯ ವಿಷಯವಾಯಿತು. ಹೀಗಾಗಿ ರೈತ ಚಳುವಳಿಗಳು. ಸ್ತ್ರೀ ಚಳುವಳಿಗಳು, ವಿದ್ಯಾರ್ಥಿ ಚಳುವಳಿಗಳು, ಸಾಹಿತ್ಯ ಚಳುವಳಿಗಳು, ಕಾರ್ಮಿಕ ಚಳುವಳಿಗಳು ಧಾರ್ಮಿಕ ವಿಧಿಗಳಂತೆ ಕೇವಲ ರಿಚುಯಲ್‌ಗಳಾದವು. ಅಲ್ಲದೆ ತಮ್ಮ ತಮ್ಮ ಮಠಗಳನ್ನು ಕಟ್ಟಿ, ಜಗದ್ಗುರುಗಳಿಗೆ ಪಟ್ಟ ಕಟ್ಟುವುದಕ್ಕೆ ಸಾಂಸ್ಥಿಕ ಸ್ವರೂಪ ಪಡೆದವು. ಇಂದಿನ ಸಂಘಟನೆ ಮತ್ತು ಒಗ್ಗೂಡವಿಕೆ ಅಂದೇ ವಿವಾಹ ಮತ್ತು ವಿಚ್ಛೇದನದಷ್ಟು ಸರಳವಾಗಿದೆ. ಇಂದು ದಲಿತ ಮತ್ತು ಹಿಂದುಳಿದ ವರ್ಗಗಳ ಚಳುವಳಿಗಳು ಸಕಾರಾತ್ಮಕ ಸಂಘಟನೆಯ ಶಕ್ತಿಯನ್ನು ಕಳೆದುಕೊಂಡಿವೆ. ಆದರೆ ಬದುಕು ಸಾಮೂಹಿಕ ಸ್ಫೋಟದ ಸ್ಥಿತಿಗೆ ಮುಟ್ಟಿದೆ. ಇನ್ನು ಅದು ಅಗ್ನಿ ಪರ್ವತದ ಲಾವಾರಸವಾಗಿಯೊ, ಬಿರುಗಾಳಿಯಾಗಿಯೊ, ಸುನಾಮಿ ಅಲೆಯಾಗಿಯೊ, ಅತಿವೃಷ್ಟಿ, ಅನಾವೃಷ್ಟಿಯಾಗಿಯೊ, ಅಣು ಸ್ಫೋಟನೆಯಾಗಿಯೊ ಪ್ರಕೃತಿಯೇ ನಕಾರಾತ್ಮಕ ಚಳುವಳಿಯಿಂದ ಮಾನವನ ಭ್ರಷ್ಟ ಬದುಕನ್ನ ಸರಿಪಡಿಸಿ, ನಾಶದಲ್ಲಿ ನವ ಸೃಷ್ಟಿಯ ಮಾನವೀಯತೆಯನ್ನು ಮೆರೆಯಬೇಕಿದೆ.

೭೩, ೫ನೇ ಮುಖ್ಯರಸ್ತೆ, ಮಾರುತಿ ಎಚ್.ಬಿ.ಸಿ.ಎಸ್.ಲೇಔಟ್
ಗುರಪ್ಪನಪಾಳ್ಯ, ಬಿ.ಟಿ.ಎಂ. ಮೊದಲನೆ ಹಂತ, ಬೆಂಗಳೂರು-೫೬೦ ೦೭೬.



ತಸ್ಲಿಮಾ ನಸ್ರೀನ್ ಉಚ್ಚಾಟನೆ ಕುರಿತು ಅರುಂಧತಿ ರಾಯ್

ಸಂದರ್ಶನ: ***ಕರಣ್ ಥಾಪರ್***

ಕನ್ನಡಾನುವಾದ: ***ಬಾಲಸುಬ್ರಹ್ಮಣ್ಯ ಕಂಜರ್ಪಣೆ***

ತಸ್ಲಿಮಾ ನಸ್ರೀನ್ ಬಾಂಗ್ಲಾದೇಶದ ಲೇಖಕಿ. ತನ್ನ ಪ್ರಗತಿಪರ ಬರಹಗಳಿಂದ ಬಾಂಗ್ಲಾದೇಶದ ಇಸ್ಲಾಮಿಕ್ ಮತಾಂಧರ ಕೆಂಗಣ್ಣಿಗೆ ಗುರಿಯಾಗಿ ದೇಶ ತೊರೆದು ಭಾರತಕ್ಕೆ ಬಂದು ಕಲ್ಕತ್ತದಲ್ಲಿ ನೆಲೆಸಿ ಕಳೆದ ನಾಲ್ಕು-ಐದು ವರ್ಷಗಳಿಂದ ಪಶ್ಚಿಮ ಬಂಗಾಳ ಸರಕಾರದ ಆಶ್ರಿತಳಾಗಿದ್ದವಳು. ಈ ವಿವಾದಾತ್ಮಕ ಲೇಖಕಿಯ ಕೃತಿ 'ದ್ವಿಖಂಡಿತೋ' ಪಶ್ಚಿಮ ಬಂಗಾಳದಲ್ಲಿ ತನ್ನ ಮೂಲ ಸ್ವರೂಪದಲ್ಲಿ ಮತ್ತು ಭಾರತದ ಇತರೆಡೆ ಇಂಗ್ಲಿಷ್ ಅನುವಾದದಲ್ಲಿ ಸಾಕಷ್ಟು ಜನಪ್ರಿಯವಾಯಿತು.

೨೦೦೭ರಲ್ಲಿ ಪಶ್ಚಿಮ ಬಂಗಾಳದ ನಂದಿಗ್ರಾಮದ ಕೃಷಿಭೂಮಿಯನ್ನು ಟಾಟಾ ಕಂಪನಿಯ ಕೈಗಾರಿಕಾ ಉದ್ದೇಶಗಳಿಗಾಗಿ ಸ್ವಾಧೀನಪಡಿಸಲು ಪಶ್ಚಿಮ ಬಂಗಾಳದ ಎಡಪಂಥೀಯ ಸರಕಾರವು ಮುಂದಾದಾಗ ಅಲ್ಲಿನ ರೈತರಿಂದ ಸಾಕಷ್ಟು ಪ್ರತಿರೋಧವನ್ನು ಎದುರಿಸಬೇಕಾಯಿತು. ಇದನ್ನು ಹತ್ತಿಕ್ಕಲು ಸರಕಾರ ಮತ್ತು ಆಡಳಿತ ಪಕ್ಷದ ಕಾರ್ಯಕರ್ತರು ಹಿಂಸಾತ್ಮಕ ಬಲಪ್ರಯೋಗ ನಡೆಸಿದರು. ಭಾರೀ ಸಾವು ನೋವುಂಟಾಯಿತು. ವಿಶೇಷ ಆರ್ಥಿಕ ವಲಯ ಸೃಷ್ಟಿಯ ಕುರಿತು ರಾಷ್ಟ್ರಮಟ್ಟದಲ್ಲಿ ಚರ್ಚೆಯಾಯಿತು. ಈ ಹಂತದಲ್ಲಿ ಪಶ್ಚಿಮ ಬಂಗಾಳ ಸರಕಾರವು ನಂದಿಗ್ರಾಮದಿಂದ ಜನರ ಗಮನವನ್ನು ಬೇರೊಂದೆಡೆಗೆ ಸೆಳೆಯಲು ತಸ್ಲಿಮಾ ನಸ್ರೀನ್‌ಳನ್ನು, ಅವಳು ತನ್ನ 'ದ್ವಿಖಂಡಿತೋ' ಕೃತಿಯಲ್ಲಿ ಇಸ್ಲಾಮಿನ ಕುರಿತು ಬರೆದಳೆನ್ನಲಾದ ಕೆಲವು ವಾಕ್ಯಗಳಿಂದ ಅಲ್ಪಸಂಖ್ಯಾತ ವರ್ಗದ ಜನತೆಯ ಭಾವನೆಗಳನ್ನು ಘಾಸಿ ಮಾಡಿದ್ದಾಳೆಂಬ ಕುಂಟುನೆಪ ಹೂಡಿ ರಾಜ್ಯ ತೊರೆಯಲು ಹೇಳಿತು. ನಂತರದ ವಾರಗಳಲ್ಲಿ ದೇಶಾದ್ಯಂತ ಈ ಕುರಿತು ಚರ್ಚೆಯಾಯಿತು. ಆದರೆ ಅಮೆರಿಕಾ, ಗುಜರಾತಿನ ಕುರಿತು ಎಲ್ಲೆಂದರಲ್ಲೆಡೆ ಹುಯಿಲೆಬ್ಬಿಸುವ ಸ್ವಘೋಷಿತ ದೇಶಿ ಬುದ್ಧಿಜೀವಿಗಳು ನಂದಿಗ್ರಾಮ ಮತ್ತು ತಸ್ಲಿಮಾ ನಸ್ರೀನ್- ಈ ಎರಡೂ ಸಂದರ್ಭಗಳಲ್ಲಿ ಜಾಣ ಮೌನ ತಾಳಿದರು.

ಆದರೆ ತಸ್ಲಿಮಾ ನಸ್ರೀನ್‌ಳ ನೆಪದಲ್ಲಿ ನಂದಿಗ್ರಾಮದ ಹತ್ಯಾಕಾಂಡ ಮಾಧ್ಯಮಗಳಲ್ಲಂತೂ ತಣ್ಣಗಾದದ್ದು, ಪಶ್ಚಿಮ ಬಂಗಾಳ ಸರಕಾರದ ಸಂಚು ಯಶಸ್ವಿಯಾಯಿತು ಎಂಬುದು ಈಗ ಇತಿಹಾಸದ ದುರಂತಗಳಲ್ಲೊಂದಾಗಿ ಉಳಿಯಲಿದೆ.

ಈ ಸಂದರ್ಭದಲ್ಲಿ ಸಿಎನ್‌ಎನ್ ಐಬಿಎನ್ (ಟಿವಿ ಛಾನಲ್)ನ ಡೆವಿಲ್ಸ್ ಅಡ್ವೋಕೇಟ್ ಖ್ಯಾತಿಯ ಕರಣ್ ಥಾಪರ್ ಬೂಕರ್ ಪ್ರಶಸ್ತಿ ವಿಜೇತೆ ಕಾದಂಬರಿಗಾರ್ತಿ ಮತ್ತು ನರ್ಮದಾ ಬಚಾವೋ ಆಂದೋಲನದಲ್ಲಿ ಮೇಧಾ ಪಾಟ್ಕರ್ ಜೊತೆಯಲ್ಲಿ ಚಳವಳಿ ಹೂಡಿ ದೇಶಾದ್ಯಂತ ಸಂಚಲನ ಮೂಡಿಸಿದ ಮತ್ತು ನ್ಯಾಯಾಲಯ ನಿಂದನೆಯ ಹೆಸರಿನಲ್ಲಿ ಸೆರೆಮನೆವಾಸವನ್ನನುಭವಿಸಿದ ಅರುಂಧತಿ ರಾಯ್ ಜೊತೆಗೆ ನಡೆಸಿದ ಸಂದರ್ಶನದ ಕನ್ನಡಾನುವಾದ ಇಲ್ಲಿದೆ. ಗುಜರಾತಿನಿಂದ ಪಶ್ಚಿಮ ಬಂಗಾಳದವರೆಗಿನ ರಾಜಕಾರಣೆಗಳ ಮತ್ತು ಬೌದ್ಧಿಕ ಜಗತ್ತಿನ ಅನೇಕ(ರ) ವಿರೋಧಾಭಾಸಗಳು ಮತ್ತು ಅಪಾಥಭೂತಿತನವನ್ನು ಬಯಲಿಗೆಳೆಯುವಲ್ಲಿ ಅರುಂಧತಿ ರಾಯ್ ತನ್ನ ಅಭಿವ್ಯಕ್ತಿಯನ್ನು ಯಾವ ಬ್ರ್ಯಾಂಡ್‌ಗೂ ಒಪ್ಪಿಸಿಕೊಂಡಿಲ್ಲದಿರುವುದು ಇಲ್ಲಿ ಅನಾವರಣಗೊಂಡಿವೆಯೆಂಬುದೇ ಈ ಸಂದರ್ಶನದ ವೈಶಿಷ್ಟ್ಯ. ಸಾಮಾಜಿಕ ಪರಿಸ್ಥಿತಿಯಲ್ಲಿ ಚಿಂತಕರು ಪ್ರತಿಕ್ರಿಯಿಸಬೇಕಾದ ಮಾದರಿಗೆ ಇಲ್ಲಿ ಕೆಲವಾದರೂ ಸೂಚನೆಗಳಿವೆ.

–ಅನುವಾದಕ

ಕರಣ್ ಥಾಪರ್: ಕಳೆದ ಎರಡು ವಾರಗಳಲ್ಲಿ ತಸ್ಲಿಮಾ ನಸ್ರೀನ್‌ಳನ್ನು ನಡೆಸಿಕೊಂಡ ಬಗ್ಗೆ ಭಾರತದ ಪ್ರಮುಖ ಲೇಖಕರು ಹೇಗೆ ಪ್ರತಿಕ್ರಿಯಿಸಿದ್ದಾರೆ? ಇದೀಗ ಮುಖ್ಯ ಪ್ರಶ್ನೆ. ನಾನಿಂದು ಬೂಕರ್ ಪ್ರಶಸ್ತಿ ವಿಜೇತ ಕಾದಂಬರಿಗಾರ್ತಿ ಅರುಂಧತಿ ರಾಯ್‌ಳೊಂದಿಗೆ ಈ ಮುಖ್ಯ ಅಂಶವನ್ನು ಚರ್ಚಿಸಲಿದ್ದೇನೆ.

ಕರಣ್ ಥಾಪರ್: ಅರುಂಧತಿ ರಾಯ್, ನಾನು ಈ ಒಂದು ಪ್ರಶ್ನೆಯೊಂದಿಗೆ ಆರಂಭಿಸುತ್ತೇನೆ. ಕಳೆದ ಸುಮಾರು ೧೫ ದಿನಗಳಲ್ಲಿ ತಸ್ಲಿಮಾ ನಸ್ರೀನ್‌ಳನ್ನು ನಡೆಸಿಕೊಂಡ ಬಗ್ಗೆ ನೀವು ಹೇಗೆ ಪ್ರತಿಕ್ರಿಯಿಸುತ್ತೀರಿ?

ಅರುಂಧತಿ ರಾಯ್: ಅದು ವಾಸ್ತವವಾಗಿ ಸುಮಾರು ೧೫ ವರ್ಷಗಳು. ಆದರೆ ಇದೀಗ ಅದು ೧೫ ದಿನಗಳಷ್ಟೇ. ಮತ್ತು ನಾನು ಪ್ರತಿಕ್ರಿಯಿಸುತ್ತಿರುವುದು ನಿರಾಶೆಯಿಂದ. ಆದರೆ ಅಚ್ಚರಿಯಿಂದಲ್ಲ; ಏಕೆಂದರೆ ನಾನದನ್ನು ಪ್ರತಿಯೊಬ್ಬರೂ ತಮ್ಮ ತಮ್ಮ ಸಾಲುಗಳನ್ನು ಹೇಳುತ್ತಾ, ಅವುಗಳ ಒಂದಂಶವನ್ನು ವಿನಿಮಯಿಸುತ್ತಾ ಇರುವ ಒಂದು ದೊಡ್ಡ ಸಂಭಾಷಣೆಯ ಭಾಗದಂತೆ ಕಾಣುತ್ತಿದ್ದೇನೆ.

ಕರಣ್‌ಥಾಪರ್: ಆಕೆ ನಿಮ್ಮೊಂದಿಗೆ ಸಂಪರ್ಕದಲ್ಲಿದ್ದಾರೆಂದುಕೊಂಡಿದ್ದೇನೆ. ತನ್ನ ಅನುಭವ ಕುರಿತು ಅವಳು ನಿಮಗೆ ಏನು ಹೇಳಿದ್ದಾಳೆ?

ಅರುಂಧತಿ ರಾಯ್: ಅವಳು ಹೇಳಿದ್ದನ್ನು ಕೇಳುತ್ತ ನಾನು ಜರ್ಝರಿತಳಾಗಿದ್ದೇನೆಂದು ಹೇಳಬೇಕಾಗುತ್ತದೆ. ಏಕೆಂದರೆ ಇಲ್ಲೊಬ್ಬಳು ಹೆಂಗಸು ದೇಶಭ್ರಷ್ಟಳಾಗಿ ಮತ್ತು ಒಂಟಿಯಾಗಿ ಇದ್ದಾಳೆ. ಆಗಸ್ಟ್‌ನಿಂದ ಆಕೆ ಅನುದಿನ ತನ್ನನ್ನು ಭೇಟಿಯಾಗುವ ಪಶ್ಚಿಮ ಬಂಗಾಳದ ಪೊಲೀಸರಿಂದ 'ಇಲ್ಲಿಂದ ಹೊರಹೋಗು. ಕೇರಳಕ್ಕಾದರೂ ಹೋಗು. ಯೂರೋಪಿಗಾದರೂ ಹೋಗು, ರಾಜಸ್ಥಾನಕ್ಕಾದರೂ ಹೋಗು, ಏನಾದರೂ ಮಾಡು, ಆದರೆ ಇಲ್ಲಿಂದ ಹೊರಹೋಗು. ಜನರು ನಿನ್ನನ್ನು ಕೊಲ್ಲಲು ಯತ್ನಿಸುತ್ತಿದ್ದಾರೆ" ಎನ್ನುತ್ತಾ ರಕ್ಷಣೆಯನ್ನು ನೀಡದೆ ಹೊರ ನಡೆಯಲು ಹೇಳುವ ಒತ್ತಡವನ್ನನುಭವಿಸುತ್ತಿದ್ದೇನೆಂದು ಅವಳು ಹೇಳಿದಳು. ನವೆಂಬರ್ ೧೫ರಂದು ನಂದಿಗ್ರಾಮದ

ವಿರುದ್ಧ ಕಲ್ಕತ್ತಾದಲ್ಲಿ ಒಂದು ದೊಡ್ಡ ಮೆರವಣಿಗೆ ನಡೆದಾಗ ಅವರು 'ಈಗ ನೀನು ಕೊಲ್ಲಲ್ಪಡಬಹುದ್ದಾದ್ದರಿಂದ ನಾವು ನಿನ್ನನ್ನು ನಿನ್ನ ಫ್ಲ್ಯಾಟ್‌ನಿಂದ ಬೇರೊಂದು ಜಾಗಕ್ಕೆ ವರ್ಗಾಯಿಸುತ್ತೇವೆ" ಎಂದು ಹೇಳಿದರು, ಮತ್ತು ಅವರು ಅದನ್ನು ಮಾಡಿದರು. ಅದರೆ ಅವಳಿಗೆ ನೀಡಲಾದ ಬಹುಪಾಲು ಭದ್ರತೆಯನ್ನು ಹಿಂದಕ್ಕೆ ಪಡೆದರು. ಇದು ವಿರೋಧಾಭಾಸವಾಗಿದೆ. ಏಕೆಂದರೆ ಯಾವ ದಿನ ಅವಳಿಗೆ ಅತೀ ಅಪಾಯವಿತ್ತೋ ಅಂದು ಅವಳಿಗೆ ರಕ್ಷಣೆಯೇ ಇರಲಿಲ್ಲ. ಕೆಲ ದಿನಗಳ ನಂತರ ಅವರು ಅವಳಿಗೆ ಟಿಕೇಟು ನೀಡಿ ರಾಜ್ಯದಿಂದ ಹೊರ ತಳ್ಳಿದರು.

ಕರಣ್ ಥಾಪರ್: ಅವಳು ತನ್ನ ಬಗ್ಗೆ ನಿಮ್ಮಲ್ಲಿ ಹೇಳಿದ ಕತೆಯನ್ನು ಕೇಳುತ್ತಿದ್ದರೆ ಪಶ್ಚಿಮ ಬಂಗಾಳ ಸರಕಾರದ ವರ್ತನೆಯು ಸ್ವೀಕಾರಾರ್ಹವಲ್ಲವೆನ್ನಿಸುತ್ತಿದೆಯೇ?

ಅರುಂಧತಿ ರಾಯ್: ಹೌದು, ಅದು ಹಾಸ್ಯಾಸ್ಪದವಾಗಿದೆ ಮತ್ತು ಪೂರ್ಣವಾಗಿ ಅಸ್ವೀಕಾರಾರ್ಹ. ಅಂದರೆ, ಈ ಬಗ್ಗೆ ನಾನೇನು ಹೇಳಲಿ? ಇಲ್ಲಿ ಒಬ್ಬ ವ್ಯಕ್ತಿಯನ್ನು ನಿಜವಾಗಿಯೂ ಪೆದರಿಸುವ, ಒತ್ತಡಕ್ಕೀಡು ಮಾಡುವ ಸ್ಥಿತಿಯಿದೆ.

ಕರಣ್ ಥಾಪರ್: ಅವಳನ್ನು ರಕ್ಷಿಸುವ ಬದಲು, ಅವಳನ್ನು ಪೆದರಿಸುತ್ತಿದ್ದರೇ?

ಅರುಂಧತಿ ರಾಯ್: ಖಂಡಿತಾ.

ಕರಣ್ ಥಾಪರ್: ಬುದ್ಧದೇವ ಭಟ್ಟಾಚಾರ್ಯಜೀ ಬಗ್ಗೆ ಏನು ಹೇಳುತ್ತೀರಿ? ಅವರೊಬ್ಬ ಕವಿ ಅವರೊಬ್ಬ ಲೇಖಕ; ಈ ಕತೆಯಲ್ಲಿ ಅವರ ಪಾತ್ರ ನಿರ್ವಹಣೆಯೇನು?

ಅರುಂಧತಿ ರಾಯ್: ನಾನು ಹೇಳುವುದಾದರೆ, ಅವರು ಮುಖ್ಯ ಕಥಾ ರಚನಾಕಾರರಾಗಿ ಮತ್ತು ನಂದಿಗ್ರಾಮದಿಂದ ಎಲ್ಲರ ಗಮನವನ್ನು ತಸ್ಲಿಮಾಳ ಕಡೆಗೆ ಹೊರಳಿಸಿದ ಜಾಣ ಸೂತ್ರಧಾರರಾಗಿ ಹೊರಹೊಮ್ಮಿದ್ದಾರೆ; ಮತ್ತು ನಂದಿಗ್ರಾಮದ ಬಡರೈತರನ್ನು ಸ್ಥಳಾಂತರಿಸುತ್ತಿರುವುದು ತಸ್ಲಿಮಾಳಲ್ಲ. ಜನರ ದಿನದಕೂಳನ್ನು ಕಸಿಯುತ್ತಿರುವ ವ್ಯಕ್ತಿ ಅವಳಲ್ಲ.

ಕರಣ್ ಥಾಪರ್: ಹಾಗಾದರೆ ಅವರು ನಂದಿಗ್ರಾಮದ ಸ್ಥಿತಿಯ ಒತ್ತಡದಿಂದ ತನ್ನನ್ನು ಪಾರು ಮಾಡಿಕೊಳ್ಳಲು ಒಂದು ದಾಳವಾಗಿ ಅವಳನ್ನು ಉಪಯೋಗಿಸಿದರೇ?

ಅರುಂಧತಿ ರಾಯ್: ಬಹಳ ಯಶಸ್ವಿಯಾಗಿಯೇ ಅದು ನಡೆದಿದೆಯೆಂದು ನಾನು ಭಾವಿಸುತ್ತೇನೆ. ಏಕೆಂದರೆ ನಾವೀಗ ಅವಳ ಬಗ್ಗೆ ಚರ್ಚಿಸುತ್ತಿದ್ದೇವೆಯೇ ಹೊರತು ನಂದಿಗ್ರಾಮದ ಕುರಿತಲ್ಲ.

ಕರಣ್ ಥಾಪರ್: ಹಾಗಾದರೆ ಅವರು ಮುಖ್ಯಮಂತ್ರಿಯಾಗಿ ಎತ್ತಿ ಹಿಡಿಯಬೇಕಾಗಿದ್ದ ಸಾಂವಿಧಾನಿಕ ಕರ್ತವ್ಯಗಳಲ್ಲಿ ವಿಫಲರಾಗಿದ್ದಾರೆಯೇ?

ಅರುಂಧತಿ ರಾಯ್: ಈ ಹಂತದಲ್ಲಿ ನಾನು ಹೇಳಬೇಕಾದ್ದೆಂದರೆ ನಮಗೆ ವಾಕ್ ಸ್ವಾತಂತ್ರ್ಯದ ಸಾಂವಿಧಾನಿಕ ಹಕ್ಕು ಇಲ್ಲ. ವಾಕ್ ಸ್ವಾತಂತ್ರ್ಯ ಮತ್ತು ನಮ್ಮ ನಡುವೆ ಅನೇಕ ಆತಂಕಗಳಿವೆಯಾದ್ದರಿಂದ ಅವರು ನಮಗೆ ವಾಕ್ ಸ್ವಾತಂತ್ರ್ಯಪರವಾದ ಸಾಂವಿಧಾನಿಕ ಹಕ್ಕುಗಳನ್ನು ಎತ್ತಿ ಹಿಡಿದಿದ್ದಾರೆಂದು ಹೇಳಬಹುದು.

ಕರಣ್ ಥಾಪರ್: ಶುಕ್ರವಾರ ತಸ್ಲಿಮಾಳು ತನ್ನ ಆತ್ಮಚರಿತ್ರೆಯಾದ 'ದ್ವಿಖಂಡಿತೋ'ದಿಂದ ಟೀಕಾಕಾರರಿಗೆ ಆಕ್ಷೇಪಾರ್ಹವಾಗಿ ಕಂಡಿದೆಯೆನ್ನಲಾದ ಮೂರು ಪುಟಗಳನ್ನು ಹಿಂದೆ ಪಡೆಯುವುದಾಗಿ ಹೇಳಿದಳು. ನೀವದನ್ನು ಒಂದು ಪ್ರಜ್ಞಾವಂತ ರಾಜಿಯೆಂದು ಕಾಣುತ್ತೀರೋ ಅಥವಾ ಪ್ರಮಾದವೆಂದು ಕಾಣುತ್ತಿರೋ?

ಅರುಂಧತಿ ರಾಯ್: ಇವೆರಡೂ ಅಲ್ಲ. ಅವಳಿಗೆ ಆಯ್ಕೆಗಳೇ ಇಲ್ಲ. ಅವಳೀಗ ಒಂದರ್ಥದಲ್ಲಿ ರಾಜಸತ್ತೆಯೇ ಆಗಿರುವ ಮಾಫಿಯಾದ ರಕ್ಷಣೆಯಲ್ಲಿರುವ ವ್ಯಕ್ತಿಯಂತಿದ್ದಾಳೆ. ಅವಳು ಎಲ್ಲಿಗೂ ಹೋಗಲು ಸಾಧ್ಯವಿಲ್ಲ. ಅವಳಿಗೆ ರಕ್ಷಣೆಯಿಲ್ಲ. ಅವಳು ಈ ರೀತಿಯ ಅವಮಾನದ ಮೂಲಕ ಎಡವುತ್ತಲೇ ಇರಬೇಕು. ಮತ್ತು ಅವಳಿಗಾಗಿ ನಾನು ಮರುಗುತ್ತಿದ್ದೇನೆ.

ಕರಣ್ ಥಾಪರ್: ನೀವು ಒಂದು ಆಕರ್ಷಕ ನುಡಿಗಟ್ಟನ್ನು ಬಳಸಿದಿರಿ. ಅವಳು ಈ ರೀತಿಯ ಅವಮಾನದ ಮೂಲಕ ಎಡವುತ್ತಲೇ ಇರಬೇಕು ಎಂದು. ನಿಜವಾಗಿ ಒತ್ತಡದಿಂದಲೇ ಮೂರು ಪುಟಗಳನ್ನು ಹಿಂದಕ್ಕೆ ಪಡೆಯುವುದು ತಪ್ಪೇ?

ಅರುಂಧತಿ ರಾಯ್: ನನಗೆ ಗೊತ್ತಿಲ್ಲ. ಪ್ರಾಮಾಣಿಕವಾಗಿ, ನಾವೆಲ್ಲರೂ ನಮ್ಮ ಬದುಕಿನ ಭದ್ರತೆಯಲ್ಲಿ ಧೈರ್ಯದಲ್ಲಿರಬಹುದು; ಆದರೆ ಅವಳು ಯಾರತ್ತಲೂ ಎಲ್ಲಿಗೂ ರಕ್ಷಣೆಗಾಗಿ ಮುಖ ಮಾಡುವಂತಿಲ್ಲ. ಅಂತಹ ಪರಿಸ್ಥಿತಿಯಲ್ಲಿ ನಾನೇನು ಮಾಡುತ್ತಿದ್ದೆನೆಂದು ನನಗೆ ಹೇಳಲು ಸಾಧ್ಯವಿಲ್ಲ.

ಕರಣ್ ಥಾಪರ್: ಪ್ರಾಯಃ ಅವಳಿಗೆ ಬೇರೆ ಆಯ್ಕೆಯಿರಲಿಲ್ಲ.

ಅರುಂಧತಿ ರಾಯ್: ಅವಳು ನಿಜಕ್ಕೂ ಒಂದು ಗೊಂದಲದಲ್ಲಿದ್ದಾಳೆ. ಅದು ನಮ್ಮೆಲ್ಲರ ಪ್ರತಿಬಿಂಬವೆಂದು ನನಗನ್ನಿಸುತ್ತಿದೆ.

ಕರಣ್ ಥಾಪರ್: ನಾವು ವಿವಾದದ ಅಂಶಗಳ ಮತ್ತು ತಸ್ಲಿಮಾ ನಸ್ರೀನಳ ಕತೆಯೆಂದು ನಾನು ಹೇಳುವುದರ ತಳದಲ್ಲಿರುವ ತತ್ವಗಳತ್ತ ಗಮನ ಹರಿಸೋಣ. ಮೊದಲಿಗೆ, ವಾಕ್ ಸ್ವಾತಂತ್ರ್ಯವನ್ನು ನೀವು ಅನಿರ್ಬಂಧಿತ ಪೂರ್ಣ ಸ್ವಾತಂತ್ರ್ಯವೆಂದು ಕಾಣುತ್ತೀರೋ ಅಥವಾ ನಾವೆಲ್ಲರೂ ಸ್ವೀಕರಿಸಲೇಬೇಕಾದ ಕೆಲವು ವಿಶಿಷ್ಟ ನಿರ್ಬಂಧಗಳಿವೆಯೆಂದು ನೀವು ಒಪ್ಪುತ್ತೀರೋ?

ಅರುಂಧತಿ ರಾಯ್: ಅದೊಂದು ಸಂಕೀರ್ಣ ಪ್ರಶ್ನೆ ಮತ್ತು ಅನೇಕ ಬಾರಿ ಚರ್ಚಿತಗೊಂಡದ್ದು. ನಾನು ವೈಯಕ್ತಿಕವಾಗಿ, ಅನೇಕ ಪ್ರತಿಪಾದಿತ ನಂಬಿಕೆಗಳು, ಅನೇಕ ಭಿನ್ನ ವಿಚಾರಗಳು ಇರುವ ಒಂದು ಸ್ಥಳದಲ್ಲಿ, ಶಕ್ತರಷ್ಟೇ ಆ ಆತಂಕಗಳು ಏನಿರಬೇಕು ಎಂಬುದನ್ನು ನಿರ್ಧರಿಸುತ್ತಾರೆಂಬ ಮತ್ತು ಆ ಆತಂಕಗಳನ್ನು ಶಕ್ತರೇ ಉಪಯೋಗಿಸುತ್ತಾರೆಂಬ ಒಂದೇ ಸರಳ ಕಾರಣಕ್ಕಾಗಿ ಅದನ್ನು ಆತಂಕರಹಿತ ವಿಚಾರವಾಗಿ ಕಾಣಬಯಸುತ್ತೇನೆ.

ಕರಣ್ ಥಾಪರ್: ಹಾಗಾದರೆ ಬಹಳಷ್ಟು ಜನ ನಿರ್ಬಂಧಕ್ಕೆ ಭಯ ಪಡುತ್ತಾರೆಂಬ ವಿಚಾರದಿಂದಾಗಿ ಅವರಿಗೆ ವಾಕ್ ಸ್ವಾತಂತ್ರ್ಯವು 'ಆತಂಕರಹಿತವಾಗಿರಬೇಕು. ಅದು ಪೂರ್ಣವಾಗಿರಬೇಕು ಮತ್ತು ಅದೊಂದೇ ಅವರ ರಕ್ಷಣೆ'ಯೆಂದು ಹೇಳುತ್ತೀರಾ?

ಅರುಂಧತಿ ರಾಯ್: ನನಗೆ ಹಾಗನ್ನಿಸುತ್ತದೆ. ಏಕೆಂದರೆ ನೀವು ವಸ್ತುಸ್ಥಿತಿಯನ್ನು ಗಮನಿಸಿದರೆ, ನಿಮಗೆ ಕಾಣುವುದು ವಿಎಚ್‌ಪಿ ಅಥವಾ ಭಜರಂಗ ದಳದಂತಹ ಸಂಘಟನೆಗಳು ಅಥವಾ ಯುಪಿ ಚುನಾವಣೆಗಳಲ್ಲಿ ಬಿಜೆಪಿ ನಿರ್ಮಿಸಿದ ಸಿ.ಡಿ.ಗಳು. ಮತ್ತು ತಾವಿಷ್ಟಪಟ್ಟದ್ದನ್ನು ಅವರು ಮಾಡುತ್ತಾರೆಂಬುದು. ವಾಕ್ ಸ್ವಾತಂತ್ರ್ಯದ ಅಗತ್ಯವಿರುವುದೇ ಅಶಕ್ತರಿಗೆ ಮತ್ತು ಭೀತರಿಗೆ.

ಕರಣ್ ಥಾಪರ್: ನೀವು ಗಮನಿಸುತ್ತಿರುವ ಸ್ಥಿತಿಯನ್ನು ಶೋಧಿಸೋಣ–ವಾಕ್ ಸ್ವಾತಂತ್ರ್ಯವು ಒಂದು ಪೂರ್ಣ ಸ್ವಾತಂತ್ರ್ಯ ಮತ್ತು ಅದರ ಮೇಲೆ ಯಾವ ನಿರ್ಬಂಧವೂ ಇರಬಾರದು. ಇಸ್ಲಾಮನ್ನು ಟೀಕಿಸುವ ಮೂಲಕ ತಸ್ಲಿಮಾಳು ಹತ್ತಾರು ಮಿಲಿಯ ಭಾರತೀಯರ, ಪ್ರಾಯಃ ನೂರಾರು ಮಿಲಿಯ ಜನರು ಪವಿತ್ರವೆಂದು ಭಾವಿಸುವ ನಂಬಿಕೆಗಳಿಗೆ ಆಘಾತವನ್ನುಂಟು ಮಾಡಿದ್ದಾಳೆಂಬ ದೃಷ್ಟಿಕೋನದ ಕುರಿತು ಏನು ಹೇಳುತ್ತೀರಿ?

ಅರುಂಧತಿ ರಾಯ್: ಹತ್ತು ಮಿಲಿಯನ್ ಜನರ ಗೌರವವನ್ನು ತಸ್ಲಿಮಾ ನಸ್ರೀನಳಂತಹ ಲೇಖಕಿ ಘಾಸಿಗೊಳಿಸುತ್ತಾಳೆಂದು ನನಗನ್ನಿಸುವುದಿಲ್ಲ. ಇಷ್ಟಕ್ಕೂ ಅವಳು ಯಾರು? ಅವಳು ಇಸ್ಲಾಮಿನ ತಜ್ಞೆಯಲ್ಲ. ಇಸ್ಲಾಮ್ ತನ್ನ ಪರಿಣತಿಯ ವಿಷಯವೆಂದು ಅವಳೆಂದೂ ಹೇಳಿಲ್ಲ. ಅವಳು ಇಸ್ಲಾಮಿನ ಕುರಿತು ಅತೀ ಮೂರ್ಖತನದ ಮಾತುಗಳನ್ನು ಹೇಳಿರಬಹುದು. ಅವಳ ಕೃತಿಯಲ್ಲಿ ನಾನು ಕೇಳಿದ ಉಲ್ಲೇಖಗಳು ನನಗೆ ಸಮಸ್ಯೆಯಾಗಲೇ ಇಲ್ಲ. 'ದ್ವಿಖಂಡಿತೋ' ಇಂಗ್ಲೀಷಿಗೆ ತರ್ಜುಮೆಯಾಗಿಲ್ಲ, ಆದರೆ ಅವಳು ಹೇಳಿದ್ದು ಮೂರ್ಖತನದ್ದು ಮತ್ತು ಇಸ್ಲಾಮಿಗೆ ಅವಮಾನವಾಗುವಂಥದ್ದು ಎಂದೇ ಭಾವಿಸೋಣ, ಆದರೆ ಗೌಣವಾದ ಸಂಗತಿಗಳಿಂದ ಅವಮಾನಕ್ಕೊಳಗಾಗುವುದಕ್ಕೆ ನೀವು ತಯಾರಿರಬೇಕು.

ಕರಣ್ ಥಾಪರ್: 'ದ್ವಿಖಂಡಿತೋ'ದಲ್ಲಿ ಅವಳು ಹೇಳಿದ್ದನ್ನು ಬಿಟ್ಟು ಅವಳು 'ದಿ ಬ್ಲಾಂಕೆಟ್'ನ ಅಂಥೋಣಿ ಮೆಕಿಂಟೈರ್‌ನಿಗೆ ೨೦೦೬ರಲ್ಲಿ ನೀಡಿದ ಸಂದರ್ಶನದಲ್ಲಿ ಆಡಿದ ಮಾತುಗಳನ್ನು ಉಲ್ಲೇಖಿಸೋಣ: 'ಇಸ್ಲಾಮ್ ಮನುಕುಲಕ್ಕೆ ಒಳ್ಳೆಯದೆಂದು ಹೇಳುವುದು ಸರಿಯಲ್ಲ. ಅದು ಒಳ್ಳೆಯದು ಅಲ್ಲವೇ ಅಲ್ಲ. ಇಸ್ಲಾಮ್ ಮಾನವ ಹಕ್ಕುಗಳನ್ನು ನಿರಾಕರಿಸುತ್ತದೆ." ಬೇರೊಂದು ಕಡೆ ಅವಳು ಇಸ್ಲಾಮನ್ನು ವಿಷಪೂರಿತ ಹಾವೆಂದು ಕರೆಯುವ ವಿಚಾರದ ಬಗ್ಗೆ ಮಾತನಾಡುತ್ತಾಳೆ. ಅದು ಸರಳ ಟೀಕೆಯ ಮಿತಿಯನ್ನು ದಾಟಿ ಉದ್ದೇಶಪೂರ್ವಕ ಕೆರಳಿಸುವಿಕೆಯಂತೆ ಭಾಸವಾಗುತ್ತದೆ.

ಅರುಂಧತಿ ರಾಯ್: ನನಗದು ಡೊನಾಲ್ಡ್ ರಮ್ಸ್‌ಫೀಲ್ಡ್‌ನಂತೆ ಇಲ್ಲವೇ ಒಬ್ಬ ಕ್ರೈಸ್ತ ಮೂಲಭೂತವಾದಿಯ ಮಾತುಗಳಂತೆ ಕೇಳುತ್ತದೆ.

ಕರಣ್ ಥಾಪರ್: ನೀವವನನ್ನು ಟೀಕಿಸುತ್ತೀರಿ, ಮತ್ತೆ ಅವಳನ್ನೇಕೆ ಟೀಕಿಸುವುದಿಲ್ಲ?

ಅರುಂಧತಿ ರಾಯ್: ಹೌದು. ಆದರೆ ನಾನು ಅವನನ್ನು ಬಹಿಷ್ಕರಿಸಿ ಅಥವಾ ಕೊಂದು ಹಾಕಿ ಎಂದೇನೂ ಹೇಳುವುದಿಲ್ಲ. ಎಂಥಾ ನೀಚ ಎಂದಷ್ಟೇ ಹೇಳುತ್ತೇನೆ. ಎಂಥ ಕೆಟ್ಟ ಸಂಗತಿ. ಎಲ್ಲದಕ್ಕೂ ಹಾಗೆ ಪ್ರತಿಕ್ರಿಯಿಸುವುದನ್ನು ಆರಂಭಿಸುವುದಾದರೂ ಹೇಗೆ? ಈ ಜಗತ್ತಿನಲ್ಲಿ ಅಸಂಖ್ಯ ಮೂರ್ಖತನಗಳಿವೆ. ಪ್ರತೀ ಮೂರ್ಖತನದ ಘಟನೆಗಳೂ ನಿಮ್ಮ ಬುನಾದಿಯನ್ನು ಅಲ್ಲಾಡಿಸುವುದಾದರೂ ಹೇಗೆ?

ಕರಣ್ ಥಾಫರ್: ಅದನ್ನು ಹೀಗೆ ಹೇಳೋಣ, ವಾಕ್ ಸ್ವಾತಂತ್ರ್ಯವು ಪರನಿಂದೆಯನ್ನೊಳಗೊಂಡಿದೆಯೇ?

ಅರುಂಧತಿ ರಾಯ್: ಒಬ್ಬ ವ್ಯಕ್ತಿಯ ನಿಂದೆಯೆಂದರೆ ಇನ್ನೊಬ್ಬ ವ್ಯಕ್ತಿಯ ಸ್ವಾತಂತ್ರ್ಯ

ಕರಣ್ ಥಾಪರ್: ಅದು ಇಂಗ್ಲೆಂಡ್ ಮತ್ತು ಅಮೆರಿಕಾದಲ್ಲಿ ಸರಿಯಿರಬಹುದು. ಏಕೆಂದರೆ ಪಾಶ್ಚಾತ್ಯ ಶಿಕ್ಷಣ ಮಟ್ಟ ಹಿಂಸಾತ್ಮಕ ಪ್ರತಿಕ್ರಿಯೆಗಳಿಲ್ಲದೆ ನಿಂದೆಯನ್ನು ಕೇಳಲು ಜನರನ್ನು ಸಿದ್ಧಗೊಳಿಸಿವೆ. ಆದರೆ ಭಾರತದಲ್ಲಿ ಶಿಕ್ಷಣ ಮಟ್ಟಗಳು ಎಷ್ಟು ಅಸಮಾನವಾಗಿದೆಯೆಂದರೆ ಧರ್ಮವನ್ನು ಭಾವನಾತ್ಮಕವಾಗಿ ಮತ್ತು ಆವೇಶಪೂರ್ವಕವಾಗಿ ಮಾತ್ರ ನೋಡಲಾಗುತ್ತದೆ. ಮತ್ತು ಆಗ ವಾಕ್ ಸ್ವಾತಂತ್ರ್ಯ ಮತ್ತು ಪರನಿಂದೆಯ ಹಕ್ಕುಗಳು ಮುಖಾಮುಖಿಯಾದರೆ ಕೊನೆಗೆ ಅದು ಜನರನ್ನು ಹಿಂಸೆಗೆ ಮತ್ತು ಪ್ರಾಣಹಾನಿಗೆ ಪ್ರೇರೇಪಿಸುತ್ತದೆ.

ಅರುಂಧತಿ ರಾಯ್: ಮೊದಲಿಗೆ ನಾವು ಯೋಚಿಸಬೇಕಾದ್ದೆಂದರೆ, ಶಿಕ್ಷಣವೆಂಬುದು ಬಹಳ ಗಹನವಾದ ಪದ; ಏಕೆಂದರೆ ಆಧುನಿಕತೆಯು ಈ ರೀತಿಯ ಉಗ್ರ ಮೂಲಭೂತವಾದವನ್ನು ಸೃಷ್ಟಿಸುತ್ತಿದೆ. ಅದೀಗ ಪಾರಂಪರಿಕ ಭಾರತದಂತಿಲ್ಲ. ಅಧ್ಯಯನಗಳನ್ನು ಪರಿಶೀಲಿಸಿದರೆ, ವಾಸ್ತವವಾಗಿ ಮತೀಯ ಗಲಭೆಗಳು ಹೆಚ್ಚಾಗಿವೆಯೆಂಬುದು ಗೊತ್ತಾಗುತ್ತದೆ.

ಕರಣ್ ಥಾಪರ್: ನೀವು ನನ್ನ ವಿಚಾರದಿಂದ ಜಾರಿಕೊಳ್ಳುತ್ತಿದ್ದೀರಲ್ಲ? ಆಧುನಿಕತೆ ಮತ್ತು ಶಿಕ್ಷಣದ ಅರ್ಥವನ್ನು ನೀವು ಪ್ರಶ್ನಿಸುತ್ತಿದ್ದೀರಿ. ಆದರೆ ನಿಮಗೂ ನನಗೂ ಗೊತ್ತಿರುವ ವಿಚಾರವೆಂದರೆ ನಿಮ್ಮ ಧರ್ಮದ ನಿಂದೆ ಇಲ್ಲವೇ ನಿಮ್ಮ ದೇವರ ಟೀಕೆಯನ್ನು ನಿಭಾಯಿಸುವ ಸುಶಿಕ್ಷಿತತೆಯು ತೀರಾ ಭಿನ್ನವಾಗಿರುತ್ತದೆ.

ಅರುಂಧತಿ ರಾಯ್: ನಾನು ಹೇಳುವುದೇನೆಂದರೆ ಈ ಸುಶಿಕ್ಷಿತತೆಯ ಮಟ್ಟವು ನಗರ ಪ್ರದೇಶಗಳಿಗಿಂತ ಹಳ್ಳಿಪ್ರದೇಶಗಳಲ್ಲಿ ಉತ್ತಮವಾಗಿದೆ.

ಕರಣ್ ಥಾಪರ್: ಅಂದರೆ ರಾಮ ಅಥವಾ ಅಲ್ಲಾಹುವಿನ ನಿಂದೆಯನ್ನು ಸ್ವೀಕರಿಸುವುದರಲ್ಲಿ ಗ್ರಾಮೀಣ ಭಾರತೀಯರೇ ಉತ್ತಮರೆಂದು ನಿಮ್ಮ ಅಭಿಪ್ರಾಯವೇ?

ಅರುಂಧತಿ ರಾಯ್: ಹಳ್ಳಿ ಮತ್ತು ನಗರ ಪ್ರದೇಶಗಳಲ್ಲಿ ನಡೆಯುವ ಗಲಭೆಗಳ ಲಕ್ಷಣಗಳನ್ನು ಚಾರಿತ್ರಿಕವಾಗಿ ನೋಡಿದರೆ ಹಾಗನ್ನಿಸುತ್ತದೆ.

ಕರಣ್ ಥಾಪರ್: ನಿಮಗೆ ನಾನೊಂದು ಸ್ಪಷ್ಟ ಉದಾಹರಣೆಯನ್ನು ನೀಡುತ್ತೇನೆ. ತಸ್ಲಿಮಾ ನಸ್ರೀನ್ ಇಸ್ಲಾಮಿನ ಕುರಿತು ಮಾಡಿದ ಟೀಕೆಯಿಂದ ಜನ ಬೀದಿಗಿಳಿದು ಗಲಭೆಯನ್ನು ಮಾಡಿ ಮುಗ್ಧಜನರ ಹತ್ಯೆ ನಡೆಯುತ್ತಿದೆ; ಸಾಯುವ ಸ್ಥಿತಿ ಎದುರಾಗುವ ಆತಂಕವುಂಟಾದರೆ ಅಂತಹ ಸಂದರ್ಭದಲ್ಲಿ ಸರಕಾರದ ಆದ್ಯತೆಯೇನಿರಬೇಕು – ವಾಕ್ ಸ್ವಾತಂತ್ರ್ಯವನ್ನು ರಕ್ಷಿಸುವುದೇ ಅಥವಾ ಮಾನವ ಜೀವನಷ್ಟವನ್ನು ತಡೆಯುವುದೇ?

ಅರುಂಧತಿ ರಾಯ್: ಅದೊಂದು ಆಯ್ಕೆಯೆಂದು ನನಗನ್ನಿಸುವುದಿಲ್ಲ. ಅವರು ವಾಕ್ ಸ್ವಾತಂತ್ರ್ಯವನ್ನು ರಕ್ಷಿಸಬೇಕು ಮತ್ತು ಜೀವಹಾನಿಯನ್ನು ತಪ್ಪಿಸುವುದಕ್ಕೆ ಮಾಡಬಹುದಾದ್ದನ್ನೆಲ್ಲಾ ಮಾಡಬೇಕು ಏಕೆಂದರೆ ಇಲ್ಲಿ ಆಗುತ್ತಿರುವುದು ಪ್ರಜಾಸತ್ತಾತ್ಮಕ ರಾಜಕಾರಣದಲ್ಲಿ ಪರನಿಂದೆಯ ಹಕ್ಕು ಮತ್ತು 'ನನ್ನ ಭಾವನೆಗಳಿಗೆ ಘಾಸಿಯಾಗಿದೆ' ಎನ್ನುವುದು ಒಂದು ವ್ಯಾಪಾರವಾಗಿದೆ. ಜೀವಹಾನಿ ಯಾಗುವಂತಹ ಸಂದರ್ಭಕ್ಕೆ ಕಾರಣವಾಗುವ ಇಂತಹ ಸ್ಥಿತಿಗಳನ್ನು ರಾಜಕೀಯ ಪಕ್ಷಗಳು ನಿರ್ಮಿಸುತ್ತಿವೆಯೆಂದು ನನಗನ್ನಿಸುತ್ತಿದೆ, ಇಲ್ಲವಾದರೆ ನಾಲ್ಕು ವರ್ಷಗಳ ಕಾಲ ಪಶ್ಚಿಮ ಬಂಗಾಳದಲ್ಲಿ ದ್ವಿಖಂಡಿತೋ ಹೆಚ್ಚು ಮಾರಾಟವಾದ ಕೃತಿಪಟ್ಟಿಯಲ್ಲಿದ್ದರೂ ಏನೂ ಆಗಿಲ್ಲದೆ, ಒಮ್ಮೆಗೇ ಸಿಪಿಎಂ ವಿರುದ್ಧ ಭಾರೀ ಸಂಚಲನ ಮತ್ತು ಆಂದೋಲನ ನಡೆಯುತ್ತಿದೆ. ಈ ಕೃತಿಯು ಒಮ್ಮೆಗೇ ಹೊಸತಾಗಿ ಉದ್ಭವಿಸಿ ಜನರ ಶ್ರದ್ಧೆಯನ್ನು ಅವಮಾನಿಸಿತೇ?

ಕರಣ್ ಥಾಪರ್: ಅಂದರೆ ನೀವು ಹೇಳುವುದು ತಂಟೆಕೋರರು, ಸಂಚುಕೋರರು ಈ ಕೃತಿಯು ಪ್ರಕಟವಾದ ನಾಲ್ಕು ಅಥವಾ ಐದು ವರ್ಷಗಳ ನಂತರ ತಸ್ಲಿಮಾಳನ್ನು ಮೂಲೆಗೆ ತಳ್ಳಲು ಮತ್ತು ಪ್ರಾಯಃ ಪಶ್ಚಿಮ ಬಂಗಾಳ ಸರಕಾರಕ್ಕೆ ಅನುಕೂಲವಾಗುವ ವಾತಾವರಣವನ್ನು ಸೃಷ್ಟಿಸಲೋಸುಗ ಜನರ ಭಾವನೆಗಳನ್ನು ಕೆರಳಿಸಿದರೆಂದಲ್ಲವೇ?

ಅರುಂಧತಿ ರಾಯ್: ಇದರಿಂದ ಯಾರಿಗೆ ಲಾಭವಾಯಿತೆಂದು ಗಮನಿಸಿ. ನಂದಿಗ್ರಾಮದ ಕುರಿತಾದ ಎಲ್ಲ ಸಿಟ್ಟು ಒಮ್ಮೆಗೇ ಬದಲಾಗಿ ನಾವು ನಂದಿಗ್ರಾಮದ ಜನರನ್ನು ಕೊಲೆ ಮಾಡಿದ ಅದೇ ರಾಜ್ಯವನ್ನು ತಸ್ಲಿಮಾ ನಸ್ರೀನ್‌ಳನ್ನು ರಕ್ಷಿಸಿ ಎಂದು ಕೇಳುವಂತೆ ಮಾಡಿದೆ.

ಕರಣ್ ಥಾಪರ್: ಅಂದರೆ ಈ ಘಟನೆಯ ಮೂಲಕ ಜನರ ಗಮನವನ್ನು ನಂದಿಗ್ರಾಮದಿಂದ ತಸ್ಲೀಮಾಳ ಕಡೆಗೆ ಸೆಳೆಯುವುದಕ್ಕಾಗಿ ಪಶ್ಚಿಮ ಬಂಗಾಳ ಸರಕಾರವು ಸೃಷ್ಟಿಸಿತೆಂದು ನಿಮ್ಮ ಅಭಿಪ್ರಾಯವೇ?

ಅರುಂಧತಿ ರಾಯ್: ಈ ಘಟನೆಯಲ್ಲಿ ಅಂತಹ ಎಲ್ಲ ಲಕ್ಷಣಗಳೂ ಇವೆಯೆಂದು ನಾನು ನಂಬುತ್ತೇನೆ. ಇಂತಹ ಸಂಗತಿಗಳನ್ನು ಸೃಷ್ಟಿಸುವುದು ಈಗ ಬಹು ಸುಲಭ.

ಕರಣ್ ಥಾಪರ್: ಈ ಪರಿಸ್ಥಿತಿಯು ನಿರ್ಮಾಣವಾದಾಗ ಇದು ಬುದ್ಧದೇವ ಭಟ್ಟಾಚಾರ್ಯರ ಸಂದಿಗ್ಧವೆಂದು ತಿಳಿಯಬಹುದಿತ್ತು. ಒಬ್ಬ ಕವಿ ಮತ್ತು ಲೇಖಕನಾಗಿ ಅವರಿಗೆ ವಾಕ್ ಸ್ವಾತಂತ್ರ್ಯವನ್ನು ರಕ್ಷಿಸುವುದು ಅಥವಾ ಅಂತಹ ರಕ್ಷಣೆಯನ್ನು ಬಯಸುವುದು ಅಗತ್ಯವೆನ್ನಿಸಿರಬಹುದು. ಮುಖ್ಯಮಂತ್ರಿಯಾಗಿ ಅವರಿಗೆ ಜೀವಹಾನಿಯನ್ನು ನಿಲ್ಲಿಸುವ ಮತ್ತು ತಡೆಯುವ ಜವಾಬ್ದಾರಿಯಿತ್ತು. ಆದ್ದರಿಂದ ಒಂದು ವೇಳೆ, ಸ್ವಲ್ಪ ಕಾಲ ರಾಜ್ಯವನ್ನು ಬಿಟ್ಟು ಹೋಗಲು ತಸ್ಲಿಮಾ ನಸ್ರೀನ್‌ಳ ಮೇಲೆ ಒತ್ತಡ ಹೇರುವುದರ ಮೂಲಕ ಕಲ್ಕತ್ತದ ಬೀದಿಗಳಲ್ಲಿ ಕಳೆದುಹೋಗಬಹುದಾಗಿದ್ದ ಹತ್ತು ಅಥವಾ ಹದಿನೈದು ಜೀವಗಳನ್ನು ಉಳಿಸಲು ಅವರಿಗೆ ಸಾಧ್ಯವಾಯಿತು. ಎಂದರೆ ಅವರು ಮಾಡಿದ್ದು ಸರಿಯೆಂದಾಗುವುದಿಲ್ಲವೇ?

ಅರುಂಧತಿ ರಾಯ್: ನನಗೆ ಹಾಗನ್ನಿಸುವುದಿಲ್ಲ. ಅದು ಅವರು ನಾವು ಆಡಬೇಕೆಂದು ಬಯಸುವ ಆಟ. ಆದರೆ ನನಗನ್ನಿಸುವಂತೆ ಈ ನಿಗೂಢ ರಾಜ್ಯವನ್ನು ಹಾಗೆ ಅರ್ಥ ಮಾಡಿಕೊಳ್ಳುವುದರಲ್ಲಿ ಇನ್ನೂ ನಿಗೂಢ ರಹಸ್ಯವಿದೆ. ಈ ಸಂಗತಿಯು ನಿಜವಾಗಿಯೂ ಜೀವಹಾನಿಗೆ ಕಾರಣವಾಗುವಂತಹ ಕುಮ್ಮಕ್ಕು ಆಗುತ್ತಿತ್ತು ಹೌದು, ಆದರೆ ನಾನು ಆಗಲೇ ಹೇಳಿದಂತೆ ಆ ಪುಸ್ತಕ ನಾಲ್ಕು ವರ್ಷ ಮಾರುಕಟ್ಟೆಯಲ್ಲಿದ್ದೂ ಯಾವುದೇ ಜೀವಹಾನಿಯಾಗದಿರಲು ಕಾರಣವೇನು? ಎಲ್ಲವೂ ಸಮಯಸಾಧಕತನದಲ್ಲಿದೆ.

ಕರಣ್ ಥಾಪರ್: ನೀವು ನಿಗೂಢ ರಾಜ್ಯದಂತಹ ಉಕ್ತಿಗಳನ್ನು ಬಳಸುವಾಗ ನಮಗದು ಪೂರ್ಣ ಅರ್ಥವಾಗದಿದ್ದರೂ ಗಮನವನ್ನು ನಂದಿಗ್ರಾಮದಿಂದ ತಸ್ಲಿಮಾಳತ್ತ ಸೆಳೆಯಲು ಮತ್ತು ಸರಕಾರವು ಅವಳನ್ನು ತಾನಾಗಿಯೇ ಹೊರದಬ್ಬದೇ ಅವಳಾಗಿಯೇ ಹೋಗುವಂತಹ ಒತ್ತಡದ ಸ್ಥಿತಿಯಲ್ಲಿ ಅವಳನ್ನು ಹೊರಹಾಕುವ ಸಂಚು ಇದೆಯೆಂದು ನೀವು ನಂಬುತ್ತೀರಾ?

ಅರುಂಧತಿ ರಾಯ್: ನಾನು ಸಂಚು ಎಂಬ ಪದವನ್ನು ಉಪಯೋಗಿಸುವುದಿಲ್ಲ, ಏಕೆಂದರೆ ಅದೊಂದು ರಹಸ್ಯ ಕಾರ್ಯಾಚರಣೆಯಂತೆ ಭಾಸವಾಗುತ್ತದೆ; ಆ ಹಂತಕ್ಕೆ ಇದನ್ನು ಎಳೆಯುವುದು ಬೇಡ. ಆದರೆ ನಾನು ಖಂಡಿತವಾಗಿ ಹೇಳಬಯಸುವುದೇನೆಂದರೆ, ನೀವು ಈ ಘಟನೆಗಳ ಸಮಯ ಪ್ರಜ್ಞೆಯನ್ನು ಗಮನಿಸಬೇಕು; ಏಕೆಂದರೆ ನಮಗೆ ಈ ದೇಶದಲ್ಲಿ ಅದೊಂದೇ ಉಳಿದಿರುವುದು. ಯಾರಿಗೂ ಎಲ್ಲದರ ತಳಕ್ಕೆ ತಲುಪಲು ಸಾಧ್ಯವಿಲ್ಲ. ಯಾವಾಗಲೂ ಯಾರಿಗೆ ಅದರಿಂದ ಅನುಕೂಲವಾಯಿತು, ಅದು ಈಗಲೇ ಯಾಕೆ ಆಗಬೇಕು ಎಂಬಂತಿದೆ. ಅದು ಈಗ ಯಾಕೆ ಆಯಿತೆಂಬುದನ್ನು ತಿಳಿಯಲು ನನಗೆ ಆಸಕ್ತಿಯಿದೆ.

ಕರಣ್ ಥಾಪರ್: ಹಾಗಾದರೆ ನೀವು ಹೇಳುವುದು ಸ್ಪಷ್ಟ. ತೀರಾ ಸರಳವಾಗಿದೆ. ಪಶ್ಚಿಮ ಬಂಗಾಳ ಸರಕಾರವು ಅಸ್ವೀಕಾರಾರ್ಹ ರೀತಿಯಲ್ಲಿ ವರ್ತಿಸಿದೆ. ಅಲ್ಲೊಂದು ಮೆಕೈವಲ್ಲಿಯ ರೀತಿಯ ಉದ್ದೇಶವಿತ್ತು. ಒಳಸಂಚಲ್ಲದಿದ್ದರೂ ಈ ಆಟದ ಹಿಂದೆ ಮೆಕೈವಲ್ಲಿಯ ರೀತಿಯ ಉದ್ದೇಶವಿತ್ತು.

ಅರುಂಧತಿ ರಾಯ್: ನನಗೆ ಆಳವಾದ ಒಳನೋಟವಿದೆಯೆಂದು ಅನ್ನಿಸುವಂತೆ ನೀವು ಪ್ರತಿಪಾದಿಸುತ್ತಿದ್ದೀರಿ.

ಕರಣ್ ಥಾಪರ್: ಹಾಗಲ್ಲ. ನಿಮಗೆ ಆಳವಾದ ಅಪನಂಬಿಕೆ ಮತ್ತು ಭಾರೀ ಸಂಶಯವಿದೆ.

ಅರುಂಧತಿ ರಾಯ್: ಅದು ಹೌದು, ಆದರೆ ಇದು ಬೀದಿಯ ಮಾತೆಂದು ನನಗೆ ಗೊತ್ತಿದೆ. ಇದನ್ನು ಕಂಡುಹಿಡಿಯುವುದಕ್ಕೆ ನಿಮಗೆ ರಾಕೆಟ್ ವಿಜ್ಞಾನಿಯ ಅಗತ್ಯವಿಲ್ಲ. ನಾವು ಮತ್ತೆ ಮತ್ತೆ ಘಟಿಸುವುದನ್ನು ಕಾಣುವ ಸಂಗತಿ ಅದು. ಅದು ಕುತೂಹಲ ಅಥವಾ ಬೆರಗನ್ನು ಹುಟ್ಟಿಸುವ ಸಂಗತಿಯಲ್ಲ.

ಕರಣ್ ಥಾಪರ್: ನಾವೀಗ ತಸ್ಲಿಮಾ ನಸ್ರೀನ್‌ಳ ಕುರಿತು ಕೇಂದ್ರ ಸರಕಾರವು ಪ್ರತಿಕ್ರಿಯಿಸಿದ ರೀತಿಯನ್ನು ನೋಡೋಣ. ಸಂಸತ್ತಿನಲ್ಲಿ ಬುಧವಾರ ಮಾತನಾಡುತ್ತ, ಪ್ರಣಬ್ ಮುಖರ್ಜಿಯವರು ಭಾರತವು ತಸ್ಲಿಮಾ ನಸ್ರೀನ್‌ಳಿಗೆ ರಕ್ಷಣೆ ಮತ್ತು ಆಶ್ರಯವನ್ನು ಮುಂದುವರಿಸುತ್ತದೆಂದು ಹೇಳಿದರು ಮತ್ತು ನಂತರ ಅತಿಥಿಗಳು ನಮ್ಮ ಜನತೆಯ ಭಾವನೆಗಳನ್ನು ಘಾಸಿಗೊಳಿಸಬಲ್ಲ ಚಟುವಟಿಕೆಗಳಿಂದ ದೂರವಿರುವರೆಂದು ನಿರೀಕ್ಷಿಸಲಾಗುತ್ತದೆಯೆಂದು ಹೇಳಿದರು. ಇದಕ್ಕೆ ನೀವು ಹೇಗೆ ಪ್ರತಿಕ್ರಿಯಿಸುತ್ತೀರಿ?

ಅರುಂಧತಿ ರಾಯ್: ಇದು ನಿಮ್ಮ ಬದುಕಿನ ಉಳಿದ ಅವಧಿಗೆ ಒಳ್ಳೆಯ ನಡತೆಯ ಪಾಲನೆಯ ಶಿಕ್ಷೆಯನ್ನು ನೀಡಿದಂತಿದೆ. ಮತ್ತು ಅದು ಒಬ್ಬ ಲೇಖಕನ ಪಾಲಿಗೆ ಮರಣದಂಡನೆಯೇ ಸರಿ. ಅಂತಹ ಪರಿಸ್ಥಿತಿಯಲ್ಲಿ ನಾನು ಬದುಕುವುದಿದ್ದರೆ ನಾನು ಯೋಗ ಶಿಕ್ಷಕಿಯೋ, ಇನ್ನೇನೋ ಆಗುತ್ತಿದ್ದೆ. ಅದು ಎಷ್ಟು ಕಷ್ಟದ ಸಂಗತಿಯೆಂದರೆ ನಾನು ಬರೆಯುವುದನ್ನೇ ತ್ಯಜಿಸುತ್ತಿದ್ದೆ. ಇಲ್ಲೊಬ್ಬಳು ಬಂಗಾಳಿ ಭಾಷೆಯಲ್ಲಿ ಬರೆಯುವ ಮಹಿಳೆಯಿದ್ದಾಳೆ. ಅವಳು ಹೊರಗೆ ಬದುಕಲಾರಳು. ಹೇಗಿದ್ದರೂ ಅದೊಂದು ತಾತ್ವಿಕ ವಿಚಾರ. ಅದು ಅವಳ ಕುರಿತಾದ್ದಲ್ಲ, ನಮ್ಮ ಕುರಿತಾದ್ದು. ನಾವೆಂತಹ ಸಮಾಜವನ್ನು ಸೃಷ್ಟಿಸುತ್ತಿದ್ದೇವೆ? ಖಂಡಿತವಾಗಿಯೂ ಅವಳು ಇಸ್ಲಾಮಿನ ಕುರಿತು ಆಡಿದ ವಿಷಯಗಳು ಸುಲಭದಲ್ಲಿ ಪಥ್ಯವಾಗವು; ಆದರೆ ಅವಳನ್ನು ಬೌದ್ಧಿಕ ಅಥವಾ ಇತರ ಹಂತದಲ್ಲಿ ನಿಯಂತ್ರಿಸಬೇಕು. ಹೀಗೆ, ಅವಳು ಯಾರಿಗಾಗಿಯೋ ಹುತಾತ್ಮಳಾಗುವಂತಹ ಸ್ಥಿತಿಯ ಮೂಲಕ ಅಲ್ಲ.

ಕರಣ್ ಥಾಪರ್: ಪ್ರಣಬ್ ಮುಖರ್ಜಿಯವರು ಅತಿಥಿಗಳು ನಮ್ಮ ಜನತೆಯ ಭಾವನೆಗಳನ್ನು ಘಾಸಿಗೊಳಿಸಬಲ್ಲ ಚಟುವಟಿಕೆಗಳಿಂದ ದೂರವಿರುವರೆಂದು ನಿರೀಕ್ಷಿಸಲಾಗುತ್ತದೆಯೆಂದು ಹೇಳಿದಾಗ ಅವರು ನಿಜವಾಗಿಯೂ ಮುಸ್ಲಿಂ ಮೂಲಭೂತವಾದಿಗಳಿಗೆ ತಸ್ಲಿಮಾ ಏನು ಬರೆಯಬೇಕು ಮತ್ತು ಈ ಕಾರಣದಿಂದ ಅವಳು ಕಲ್ಕತ್ತದಲ್ಲಿ ಉಳಿಯಬಹುದೇ ಎಂದು ನಿರ್ಣಯಿಸುವ ಹಕ್ಕನ್ನು ನೀಡಿದರಲ್ಲವೇ?

ಅರುಂಧತಿ ರಾಯ್: 'ನಮ್ಮ ಜನ' ಎಂದು ಅವರು ಯಾರನ್ನು ಹೇಳುತ್ತಿದ್ದಾರೆ? ಉದಾಹರಣೆಗೆ ನಾನು ಅಲ್ಲಿ ಸೇರುತ್ತಿದ್ದೇನೆಯೇ? ನೀವು ನಿಜಕ್ಕೂ ಜನರ ಭಾವನೆಗಳನ್ನು ಅರ್ಥೈಸಲಾರಿರಿ.

ಕರಣ್ ಥಾಪರ್: ನೀವು ಹೇಳುವುದು ಸರಿ. 'ನಮ್ಮ ಜನ' ಎಂಬುದು ಎಲ್ಲಾ ರೀತಿಯ ಜನರನ್ನು ಒಳಗೊಳ್ಳುತ್ತದೆಯಾದರೂ ತಸ್ಲಿಮಾಳನ್ನು ವಿರೋಧಿಸಿ ಕಲ್ಕತ್ತೆಯ ಬೀದಿಗಳಲ್ಲಿ ಪ್ರತಿಭಟಿಸುತ್ತಿರುವ ಜನರನ್ನು ಮನಸ್ಸಿನಲ್ಲಿಟ್ಟುಕೊಂಡು ಹೇಳಿದರೆಂದು ನನಗೆ ಅನ್ನಿಸುತ್ತದೆ. ಆದ್ದರಿಂದ ಅವರು ನಿಜವಾಗಿಯೂ ಮುಸ್ಲಿಂ ಮೂಲಭೂತವಾದಿಗಳಿಗೆ ತಸ್ಲಿಮಾ ಏನು ಬರೆಯಬೇಕು ಮತ್ತು ಈ ಕಾರಣದಿಂದ ಅವಳು ಕಲ್ಕತ್ತದಲ್ಲಿ ಉಳಿಯಬಹುದೇ ಎಂದು ನಿರ್ಣಯಿಸುವ ಹಕ್ಕನ್ನು ನೀಡಿದರಲ್ಲವೇ?

ಅರುಂಧತಿ ರಾಯ್: ಅದು ಅವಳಿಗೆ ಮಾತ್ರವಲ್ಲ. ನಮ್ಮೆಲ್ಲರ ಮೇಲೆ ನಿರ್ಣಯಿಸುವ ಹಕ್ಕನ್ನು ನೀಡಿದರು. ಅಂದರೆ ನನಗೂ ಸರ್ವೋಚ್ಚ ನ್ಯಾಯಾಲಯವು ನಾನು ಮುಂದೆ ಅವರು ಅಪೇಕ್ಷಿಸುವಂತೆ ವರ್ತಿಸಬೇಕು ಮತ್ತು ಅವರು ಹೇಳುವ ರೀತಿಯಲ್ಲಿ ನಾನು ಬರೆಯಬೇಕು ಎಂದು ಹೇಳಿತು. ನಾನು ಹಾಗಿರಲಾರೆ. ಅಂತಹ ನಿರ್ಣಯಗಳು ಎಲ್ಲರನ್ನೂ ಆವರಿಸಲೆಂದು ನಾನು ಆಶಿಸುತ್ತೇನೆ.

ಕರಣ್ ಥಾಪರ್: ತಸ್ಲಿಮಾಳ ಪ್ರಕರಣವು ಪ್ರತ್ಯೇಕವಾದ್ದಲ್ಲದಿದ್ದರೆ, ನೀವು ಸರ್ವೋಚ್ಚ ನ್ಯಾಯಾಲಯದಿಂದ ತೊಂದರೆ ಪಟ್ಟಿದ್ದೀರಿ, ಎಂ.ಎಫ್. ಹುಸೇನ್ ತೊಂದರೆ ಅನುಭವಿಸಿದ್ದಾರೆ, ಬರೋಡಾದ ಕಲಾ

ವಿದ್ಯಾರ್ಥಿಗಳು ತೊಂದರೆ ಅನುಭವಿಸಿದ್ದಾರೆ, ಯೂಟ್ಯೂಬಿನಲ್ಲಿ ವ್ಯಂಗ್ಯಚಿತ್ರ ಮತ್ತು ವ್ಯಂಗ್ಯಲೇಖನಗಳನ್ನು ಬರೆಯುವವರನ್ನೂ ಈ ತೊಂದರೆ ಬಿಟ್ಟಿಲ್ಲ. ನಾವು ತಾಳ್ಮೆಗೆಟ್ಟ ಜನವೇ?

ಅರುಂಧತಿ ರಾಯ್: ನಾವು ಗೊಂದಲದ ಜನ. ಒಂದೋ ನಮಗೆ ವಾಕ್ ಸ್ವಾತಂತ್ರ್ಯದ ಸಿದ್ಧಾಂತವಿದೆ, ಇಲ್ಲವೇ ಈ ಇಡೀ ಕೋಣೆಯನ್ನು ತುಂಬಬಲ್ಲ ನಿರ್ಣಯಗಳಿವೆ ಮತ್ತು ನಮ್ಮ ಸದ್ದಡಗುತ್ತದೆ. ಆಗ ಕಲೆಯೂ ಇಲ್ಲ, ಸಂಗೀತವೂ ಇಲ್ಲ ಮತ್ತು ಸಿನಿಮಾವೂ ಇಲ್ಲ.

ಕರಣ್ ಥಾಪರ್: ವಾಕ್ ಸ್ವಾತಂತ್ರ್ಯವನ್ನು ಹತ್ತಿಕ್ಕುವ ನಿರ್ಣಯಗಳು ಹೆಚ್ಚಿ ಕಲಾತ್ಮಕವಾಗಿರುವ ಸ್ವಾತಂತ್ರ್ಯವೇ ಇಲ್ಲದ ದಿಕ್ಕಿನತ್ತ ನಾವು ಸರಿಯುತ್ತಿದ್ದೇವೆಯೇ?

ಅರುಂಧತಿ ರಾಯ್: ನಾನು ಏನು ಹೇಳುತ್ತಿದ್ದೇನೆಂಬುದು ಮುಖ್ಯವಲ್ಲ. ನಾನು ಈ ಕುರಿತು ವಿಶ್ವಾಸದಿಂದಿರಬಲ್ಲೆ, ಆದರೆ ನಾಳೆ ನಾನು ಸರಕಾರದ ಖೂಳರೊಂದಿಗೆ, ಮೂಲಭೂತವಾದದ ನ್ಯಾಯಾಲಯಗಳೊಂದಿಗೆ, ಮತ್ತು ಇತರರೊಂದಿಗೆ ವ್ಯವಹರಿಸಬೇಕಾಗುತ್ತದೆಂಬುದನ್ನು ಬಲ್ಲೆ. ಇಲ್ಲಿ ಬದುಕಬೇಕಾದರೆ ನೀವು ಒಂದು ಗ್ಯಾಂಗ್‌ವಾರ್‌ನ ನಡುವೆ ಬದುಕುತ್ತಿದ್ದೇನೆಂಬ ಅರಿವು ಬೇಕು. ಹಾಗಾಗಿ ನಾನು ಏನನ್ನು ನಂಬುತ್ತೇನೆ ಅಥವಾ ನಂಬುವುದಿಲ್ಲ ಎಂಬುದು ಪ್ರಮೇಯಾತ್ಮಕವಷ್ಟೇ ಆಗುತ್ತದೆ. ನಾನು ಹೇಗೆ ಅದನ್ನು ಅಳವಡಿಸುತ್ತೇನೆಂಬುದು ಪ್ರತ್ಯೇಕ ವಿಷಯ. ಕಳ್ಳರ ನಡುವೆ ಬದುಕುವ ಹಾಗೆ ನಮ್ಮ ಬದುಕು.

ಕರಣ್ ಥಾಪರ್: ಆದರೆ ನೀವು ಹೇಳುವುದರ ಪರಿಣಾಮವೂ ಬಹಳ ಮುಖ್ಯವಾಗುತ್ತದೆ. ಕಲಾವಿದರು, ಅದರಲ್ಲೂ ಬದುಕನ್ನು ವಿಭಿನ್ನವಾಗಿ ಕಾಣುವವರು, ಸ್ಪಷ್ಟವಾಗಿ ಗುರುತಿಸಿ ಹೇಳುವುದಾದರೆ ಆಧುನಿಕರಾಗಿ ಹೊಸ ವಿಚಾರವನ್ನು ಅನುಸರಿಸುವವರು ನೀವು ಹೇಳುವ ಈ ಕಳ್ಳರನ್ನು, ಸರಕಾರವನ್ನು ಮತ್ತು ತಮ್ಮನ್ನು ಹಿಂದೆ ತಳ್ಳುವ ಬಹುಸಂಖ್ಯಾತರನ್ನು ನಿಭಾಯಿಸಬೇಕಾಗುತ್ತದೆ.

ಅರುಂಧತಿ ರಾಯ್: ಹೌದು. ನಾವು ಹಾಗೆ ಮಾಡುತ್ತೇವೆ ಮತ್ತು ಹಾಗಿರುತ್ತೇವೆ. ನಾನು ಪುಕ್ಕಲುತನದಲ್ಲಿರಲು ಬಯಸುವುದಿಲ್ಲ. ನಮ್ಮ ಮುಂದೆ ಒಂದು ಹೋರಾಟವಿದೆಯೆಂದು ನನಗೆ ಗೊತ್ತಿದೆ ಮತ್ತು ಈ ಗ್ಯಾಂಗ್‌ವಾರ್‌ನಲ್ಲಿ ನಾವು ಉಳಿಯಬೇಕಾಗಿದೆ. ನನ್ನ ಮಟ್ಟಿಗೆ ಹೇಳುವುದಾದರೆ ಪ್ರಭುತ್ವವೂ ಒಂದು ಗ್ಯಾಂಗ್.

ಕರಣ್ ಥಾಪರ್: ಹಾಗಾದರೆ ನೀವು ಹೇಳುವುದೇನೆಂದರೆ ಭಾರತದಲ್ಲಿ ಈ ಸ್ಥಿತಿ ಭಿನ್ನವಾಗಿಲ್ಲವೆಂದೇ?

ಅರುಂಧತಿ ರಾಯ್: ಹೌದು, ಅದೊಂದು ಸವಾಲು ಮತ್ತು ನಾವು ಈ ಸವಾಲನ್ನು ಸ್ವೀಕರಿಸಿದ್ದೇವೆ.

ಕರಣ್ ಥಾಪರ್: ತಸ್ಲಿಮಾ ನಸ್ರೀನ್‌ಳಿಗೆ ನಿಮ್ಮ ಸಲಹೆಯೇನು?

ಅರುಂಧತಿ ರಾಯ್: ನನ್ನಲ್ಲಿ ನಿಜಕ್ಕೂ ಯಾವ ಸಲಹೆಯೂ ಇಲ್ಲ. ಅವಳ ಬಗ್ಗೆ ನನಗೆ ನಿಜಕ್ಕೂ ಕೆಡುಕೆನಿಸುತ್ತದೆ, ಏಕೆಂದರೆ ಅವಳದು ವಾಸ್ತವವಾಗಿ ಸ್ಥಳಾಂತರದ ದುರಂತ. ಒಮ್ಮೆ ಅವಳು ತನ್ನ ಮನೆಯಿಂದ ಸ್ಥಳಾಂತರಗೊಂಡಳು. ಅವಳಿಗೆ ಹಕ್ಕುಗಳೇ ಇಲ್ಲ. ಅವಳೊಬ್ಬ ಅತಿಥಿಯಾದರೂ ಅವಳನ್ನು ತೀರಾ ಕೆಟ್ಟದಾಗಿ ನೋಡಿಕೊಳ್ಳಲಾಗುತ್ತಿದೆ. ಅವಳನ್ನು ಅವಮಾನಿಸಲಾಗುತ್ತಿದೆ.

ಕರಣ್ ಥಾಪರ್: ಅರುಂಧತಿ ರಾಯ್, ಡೆವಿಲ್ಸ್ ಅಡ್ವೋಕೇಟ್ ಕಾರ್ಯಕ್ರಮದಲ್ಲಿ ನಿಮ್ಮೊಂದಿಗೆ ಮಾತನಾಡಿದ್ದು ನನಗೆ ಸಂತೋಷ ನೀಡಿದೆ.

(ಸಂದರ್ಶನದ ಹಸ್ತಪ್ರತಿಯನ್ನೊದಗಿಸಿದ ಶ್ರೀ ಎಂ.ರಾಜಗೋಪಾಲ್ ಅವರಿಗೆ ನಾನು ಋಣಿ.
–ಬಾಲಸುಬ್ರಹ್ಮಣ್ಯ ಕಂಜರ್ಪಣೆ)

ಕೃಪೆ : ಸಿಎನ್‌ಎನ್–ಐಬಿಎನ್



ಯುವ ಕವಿಗಳಿಗೊಂದು ಪತ್ರ

ಮೂಲ : ರೈನರ್ ಮಾರಿಯಾ ರಿಲ್ಕೆ
ಕನ್ನಡಕ್ಕೆ : ದೋಬಿ ಡಿ'ಸೋಜ

ರೈನರ್ ಮಾರಿಯಾ ರಿಲ್ಕೆ (೧೮೭೫-೧೯೨೬) ಜರ್ಮನ್ ಭಾಷೆಯಲ್ಲಿ ಬರೆದ ಇಪ್ಪತ್ತನೆಯ ಶತಮಾನದ ಪ್ರಭಾವಿ ಕವಿ, ಕಾದಂಬರಿಕಾರ. ೧೯೦೩ರಲ್ಲಿ ಆಗಿನ್ನೂ ಇಪ್ಪತ್ತೇಳು ವಯಸ್ಸಿನ, ತನ್ನದೇ ಬೌದ್ಧಿಕ ತೊಳಲಾಟಗಳಿಗೆ ಉತ್ತರ ಹುಡುಕಾಡುತ್ತಿದ್ದ ರಿಲ್ಕೆಗೆ, ಜರ್ಮನಿಯ ಮಿಲಿಟರಿ ಅಕಾಡೆಮಿಯಿಂದ, ಫ್ರಾನ್ಜ್‌ಕ್ಸೇವಿಯರ್ ಕಾಪು ಎಂಬ ಹತ್ತೊಂಬತ್ತು ವಯಸ್ಸಿನ ಹುಡುಗ, ತನ್ನ ಕವನಗಳ ಜೊತೆಗೆ ತನ್ನ ತೊಳಲಾಟಗಳನ್ನು ಇನ್ನಾರಿಗೂ ಹೇಳಲು ಸಾಧ್ಯವಾಗದ ರೀತಿಯಲ್ಲಿ ಪತ್ರಮುಖೇನ ತೋಡಿಕೊಳ್ಳಲು ಶುರು ಮಾಡಿದ. ೧೯೦೩ರಲ್ಲಿ ಶುರುವಾದ ಈ ಪತ್ರ ವ್ಯವಹಾರ, ೧೯೦೮ರವರೆಗೆ ಅದ್ಭುತ ಸಾಹಿತ್ಯವನ್ನೇ ಸೃಷ್ಟಿಸುತ್ತಾ ಸಾಗಿತು. ಈ ಆರು ವರ್ಷಗಳ ಅವಧಿಯಲ್ಲಿ ಕಾಪುಗೆ ರಿಲ್ಕೆ ಬರೆದ ಹತ್ತು ಪತ್ರಗಳು, ಸೃಜನಶೀಲ ಮನಸ್ಸಿನ ಒಳತೋಟಗಳಿಗೆ ಬರೆದ ಅಸದೃಶ, ಆಪ್ತ, ಟಿಪ್ಪಣಿಗಳಾದವು. ರಿಲ್ಕೆಯ ಮರಣಾನಂತರ, ೧೯೨೯ರಲ್ಲಿ ಕಾಪು ಇವುಗಳನ್ನು ಪುಸ್ತಕ ರೂಪದಲ್ಲಿ ಪ್ರಕಟಿಸಿದ. ಈ ಪುಸ್ತಕದ ಇಂಗ್ಲಿಷ್ ಅನುವಾದಕ, ಸ್ಟೀಫನ್ ಮಿಶೆಲ್ ಹೇಳುವಂತೆ, "ಈ ಪತ್ರಗಳುದ್ದಕ್ಕೂ ನಮಗೆ ಕಾಣಿಸುವುದು ಅತ್ಯಂತ ಶ್ರೇಷ್ಠ ಮಟ್ಟದ ಹೊಳಹುಗಳು. ಒಂದು ಮಹಾನ್ ಕಾವ್ಯದ ಗುಣ ಈ ಪುಸ್ತಕಕ್ಕಿದೆ- ಅದರ ದಟ್ಟತೆ, ಶ್ರೀಮಂತಿಕೆ, ಅಪರಿಮಿತ ಪೋಷಣೆ, ನಾವು ಬದಲಾದಂತೆ ತಾನೂ ಬದಲಾಗುತ್ತಾ, ನಮ್ಮ ದೃಷ್ಟಿಕೋನ ಬದಲಾದಂತೆ, ಸ್ಪಷ್ಟತೆ ಹೆಚ್ಚುತ್ತಾ, ಅದರ ಹೊಳಹುಗಳು ನಮ್ಮ ಮುಖದಷ್ಟೇ ಸ್ಪಷ್ಟವಾಗಿ ಕಾಣಿಸುವ ರೀತಿಯಲ್ಲಿ. ಕಾವ್ಯ ಹೇಗೆ ನಮ್ಮ ಬದುಕಿಗೆ ಕನ್ನಡಿ ಹಿಡಿಯುತ್ತದೆಯೋ ಹಾಗೆಯೇ ಈ ಪುಸ್ತಕ ಕೂಡ."

ಪ್ಯಾರಿಸ್ ಫೆಬ್ರುವರಿ, ೧೭,೧೯೦೩

ಪ್ರಿಯರೇ,


ನಿಮ್ಮ ಪತ್ರ ಕೆಲವು ದಿನಗಳ ಹಿಂದೆಯಷ್ಟೇ ಬಂತು. ನೀವು ನನ್ನ ಮೇಲಿಟ್ಟಿರುವ ಅತೀವ ವಿಶ್ವಾಸಕ್ಕೆ ನಾನು ನಿಮಗೆ ಕೃತಜ್ಞನಾಗಿದ್ದೇನೆ. ಅದಷ್ಟೇ ನನ್ನಿಂದ ಸಾಧ್ಯ. ನಿಮ್ಮ ಪದ್ಯಗಳನ್ನು ನಾನು ಚರ್ಚಿಸಲಾರೆ: ಯಾಕೆಂದರೆ ವಿಮರ್ಶೆಯ ಯಾವ ಪ್ರಯತ್ನವೂ ನನಗೆ ಅಪರಿಚಿತ. ಒಂದು ಸೃಜನಶೀಲ ಕೃತಿಯ ಮೇಲೆ ವಿಮರ್ಶೆಯ ಪರಿಣಾಮ ಅತ್ಯಲ್ಪ. ಅದು ಯಾವ ಸುದೈವದಿಂದಲೋ ಈ ವಿಮರ್ಶೆ ಅನ್ನುವುದು ಒಂದು ಸೃಜನಶೀಲ ಕೃತಿಯ ಬಗ್ಗೆ ತಪ್ಪು ಅಭಿಪ್ರಾಯವನ್ನು ಸೃಷ್ಟಿಸುವಲ್ಲಿ ಯಶಸ್ವಿಯಾಗುತ್ತದೆ. ಎಲ್ಲವೂ ನಮ್ಮ ಅಭಿವ್ಯಕ್ತಿಯ, ನಮ್ಮ ಅನುಭವದ ವ್ಯಾಪ್ತಿಯೊಳಗಿದೆ ಎಂಬ ಕಲ್ಪನೆಯನ್ನು ಜನರು ನಮಗೆ ಕೊಡಲು ಪ್ರಯತ್ನಿಸುತ್ತಾರಾದರೂ ಅದು ನಾವು ಅಂದುಕೊಂಡಷ್ಟು ಸುಲಭ ಅಲ್ಲ. ಪದಗಳ ವ್ಯಾಪ್ತಿಯಾಚೆಗೆ ಜನ್ಯವಾಗುವ ಎಷ್ಟೋ ಅನುಭವಗಳನ್ನು ಹೇಳುವುದು ಕಷ್ಟ. ಇನ್ನು ನಮ್ಮ ನಶ್ವರ ಜೀವನದ ಮಿತಿಗಳಾಚೆ ಇರುವ ಸೃಜನಶೀಲ ಕೃತಿಗಳೆಂಬ ವಿಸ್ಮಯಗಳನ್ನಂತೂ ಮಾತಿನಲ್ಲಿ ಕಟ್ಟಿಕೊಡುವುದು ಅಸಾಧ್ಯ.

ಈ ಪೀಠಿಕೆಯಿಂದ ನಾನು ನಿಮಗೆ ಹೇಳಲು ಬಯಸುವುದು ಏನೆಂದರೆ, ನಿಮ್ಮ ಕವನಗಳಲ್ಲಿ ಒಂದು ವೈಯಕ್ತಿಕ ಹೊಳಹಿನ ಮೌನವಾದ, ಅಸೂಹ್ಯ ಸೆಲೆ ಇದ್ದರೂ ಅವುಗಳದೇ ಆದ ಶೈಲಿ ಎಂಬುದಿಲ್ಲ. ನಿಮ್ಮ ಕೊನೆಯ ಕವನ 'ನನ್ನ ಆತ್ಮದಲ್ಲಿ' ಇದು ಸ್ಪಷ್ಟವಾಗಿ ಗೋಚರಿಸುತ್ತದೆ. ಅಲ್ಲಿ ನಿಮ್ಮ ಅಂತರ್ಯವೊಂದು ತುಣುಕು ಪದವಾಗಲು, ಹಾಡಾಗಲು ಹವಣಿಸುತ್ತಿದೆ. ಹಾಗೆಯೇ ನಿಮ್ಮ 'ಚಿರತೆ' ಎಂಬ ಸೊಗಸಾದ ಕವನದಲ್ಲಿ, ಆ ಬಲಿಷ್ಠವಾದ, ಆದರೆ ಅಷ್ಟೇ ಏಕಾಂಗಿಯಾದ ಜೀವಿಯೊಂದಿಗಿನ ಒಂದು ಸಮಭಾವ ಗೋಚರಿಸುತ್ತಿದೆ. ಆದರೂ ನಿಮ್ಮ ಕವನಗಳು, ಕೊನೆಯದು ಹಾಗೆಯೇ ಚಿರತೆಯ ಮೇಲಿನದೂ ಸೇರಿದಂತೆ ಇನ್ನೂ ತಮ್ಮದೇ ಆದ ಸ್ವಾತಂತ್ರ್ಯವನ್ನು, ಸ್ವರೂಪವನ್ನು ಪಡೆದುಕೊಂಡಿಲ್ಲ. ನಿಮ್ಮ ಕವನಗಳ ಜೊತೆ ನೀವು ಸಹೃದಯತೆಯಿಂದ ಬರೆದ ಪತ್ರ, ನಿಮ್ಮ ಕವನಗಳನ್ನು ಓದಲು ನನಗೆ ಉಂಟಾದ ತೊಡಕುಗಳನ್ನು ಪರಿಹರಿಸಲು ಸಹಾಯ ಮಾಡಿತು. ಆದರೆ ಆ ತೊಡಕುಗಳು ಏನು ಎಂಬುದನ್ನು ನನಗೆ ಇನ್ನೂ ಸ್ಪಷ್ಟವಾಗಿ ಗುರುತಿಸಲು ಸಾಧ್ಯ ಆಗಿಲ್ಲ.



'ನಿಮ್ಮ ಕವನಗಳು ಚೆನ್ನಾಗಿದೆಯೇ' ಎಂದು ಕೇಳಿದ್ದೀರಿ. ನೀವು ನನ್ನನ್ನು ಕೇಳುತ್ತಿದ್ದೀರಿ. ಹಾಗೆಯೇ ಬೇರೆಯವರನ್ನು ಕೂಡ ಇದಕ್ಕಿಂತ ಮೊದಲು ಕೇಳಿರುತ್ತೀರಿ. ಪತ್ರಿಕೆಗಳಿಗೆ ಕಳುಹಿಸಿರುತ್ತೀರಿ, ಇತರರ ಕವನಗಳ ಜೊತೆ ಹೋಲಿಸಿರುತ್ತೀರಿ, ಸಂಪಾದಕರಿಂದ ತಿರಸ್ಕೃತಗೊಂಡಾಗ ನೊಂದಿರುತ್ತೀರಿ. ಈಗ (ನೀವು ನನ್ನ ಅಭಿಪ್ರಾಯ

ಕೇಳಿರುವುದರಿಂದ) ಹೀಗೆ ಮಾಡುವುದನ್ನು ನಿಲ್ಲಿಸಿ ಅಂತ ನಿಮ್ಮನ್ನು ಕೇಳಿಕೊಳ್ಳುತ್ತೇನೆ. ಈ ಹೊರಗಿನ ಹುಡುಕಾಟವನ್ನು ನೀವು ಮೊದಲು ನಿಲ್ಲಿಸಬೇಕು. ನಿಮಗೆ ಯಾರೂ ಸಲಹೆಯನ್ನೂ ಕೊಡಲಾರರು. ಸಹಾಯವನ್ನೂ ಮಾಡಲಾರರು. ನೀವು ಮಾಡಬೇಕಾದುದು ಇಷ್ಟೇ. ನಿಮ್ಮ ಅಂತರ್ಯಕ್ಕೆ ಇಣುಕಿ. ನೀನು ಯಾಕೆ ಬರೆಯಬೇಕು ಎಂಬುದಕ್ಕೆ ಕಾರಣಗಳನ್ನು ಹುಡುಕಿ. ಆ ಕಾರಣಗಳು ನಿಮ್ಮ ಆಳದಲ್ಲಿ ಎಷ್ಟು ವ್ಯಾಪಕವಾಗಿ ಬೇರು ಬಿಟ್ಟಿವೆ ನೋಡಿ. ಒಂದು ವೇಳೆ ನಿಮಗೆ ಬರೆಯುವುದನ್ನು ನಿಷೇಧಿಸಿದರೆ ನೀವು ಸತ್ತೇ ಹೋಗುವಿರೋ ಎಂದು ಕೇಳಿಕೊಳ್ಳಿ. ನೀರವ ರಾತ್ರಿಯ ಒಂದು ಹೊತ್ತಲ್ಲಿ 'ನಾನು ಬರೆಯಲೇಬೇಕೇ?' ಎಂದು ನಿಮ್ಮನ್ನೇ ಕೇಳಿಕೊಳ್ಳಿ. ನಿಮ್ಮ ಅಂತರ್ಯಕ್ಕಿಳಿದು ಉತ್ತರ ಕಂಡುಕೊಳ್ಳಿ. ಈ ಉತ್ತರ 'ಹೌದು' ಎಂದು ನಿಮ್ಮಲ್ಲಿ ರಿಂಗಣಿಸಲು ತೊಡಗಿದಲ್ಲಿ, ಈ ಗಂಭೀರ ಪ್ರಶ್ನೆಗೆ, 'ಹೌದು, ನಾನು ಬರೆಯಲೇಬೇಕು' ಎಂಬ ಸರಳ ಸ್ಪಷ್ಟ ಉತ್ತರ ಸಿಕ್ಕಿದರೆ, ನಿಮ್ಮ ಜೀವನವನ್ನೇ ಆ ಅಗತ್ಯಕ್ಕೆ ತಕ್ಕಂತೆ ರೂಪಿಸಿಕೊಳ್ಳಿ. ನಿಮ್ಮ ಬದುಕಿನ ಅತ್ಯಂತ ವಿನಮ್ರವಾದ, ಹಾಗೆಯೇ ಅತ್ಯಂತ ಕ್ಷುಲ್ಲಕವಾದ ಘಳಿಗೆ ಕೂಡ ಈ ಪ್ರೇರಣೆಗೆ ಗುರುತಾಗಿರಬೇಕು, ಸಾಕ್ಷಿಯಾಗಿರಬೇಕು. ನಂತರ ಪ್ರಕೃತಿಗೆ ಹತ್ತಿರವಾಗಿ. ನಂತರ ಇದಕ್ಕಿಂತ ಮೊದಲು ಯಾರೂ ಹೇಳಲು ಪ್ರಯತ್ನವೇ ಮಾಡಿಲ್ಲವೇನೋ ಎನ್ನುವ ರೀತಿಯಲ್ಲಿ, ನೀವು ಕಂಡಿದ್ದನ್ನು, ಅನುಭವಿಸಿದ್ದನ್ನು, ಪ್ರೀತಿಸಿದ್ದನ್ನು ಕಳೆದುಕೊಂಡಿರುವುದನ್ನು ಹೇಳಲು ಪ್ರಯತ್ನಿಸಿ. ಪ್ರೇಮ ಕವನಗಳನ್ನು ಬರೆಯಬೇಡಿ. ತುಂಬಾ ಸರಳವಾದ, ಸಾಮಾನ್ಯವಾದ ಆ ಪ್ರಕಾರವನ್ನು ಬಿಟ್ಟುಬಿಡಿ. ಅವುಗಳ ಜೊತೆ ಕೆಲಸ ಮಾಡುವುದು ತುಂಬಾ ಕಠಿಣ. ವೈಯಕ್ತಿಕ ಛಾಪಿನ, ಶ್ರೇಷ್ಠ ಮಟ್ಟದ, ಈಗಲೇ ಶ್ರೀಮಂತ ಪ್ರಮಾಣದಲ್ಲಿ ಲಭ್ಯ ಇರುವ ಇವುಗಳನ್ನು ರಚಿಸಲು ಪಕ್ವವಾದ ಶ್ರೇಷ್ಠ ಶಕ್ತಿ ಬೇಕಾಗುತ್ತದೆ. ಹಾಗಾಗಿ ಈ ಸಾಮಾನ್ಯ ವಿಷಯಗಳಿಂದ ನಿಮ್ಮನ್ನು ಉಳಿಸಿಕೊಂಡು, ನಿಮ್ಮ ನಿತ್ಯ ಜೀವನ ನಿಮಗೆ ತೆರೆದುಕೊಳ್ಳುವ ವಿಷಯಗಳ ಬಗ್ಗೆ ಬರೆಯಿರಿ. ನಿಮ್ಮ ಆಶೋತ್ತರಗಳು, ನೋವುಗಳು, ನಿಮ್ಮ ಮನಸ್ಸಿನಲ್ಲಿ ಹಾದು ಹೋಗುವ ವಿಚಾರಗಳು, ನೀವು ನಂಬಿರುವ ಸೌಂದರ್ಯ–ಇವೆಲ್ಲವನ್ನೂ ಹೃದಯಪೂರ್ವಕವಾಗಿ, ಮೌನವಾಗಿ, ವಿನಮ್ರವಾಗಿ ಬರೆಯಿರಿ. ನಿಮ್ಮ ಬಗ್ಗೆ ಬರೆಯುವಾಗ ನಿಮ್ಮ ಸುತ್ತಲಿನ ವಿಚಾರಗಳನ್ನು ಬಳಸಿಕೊಳ್ಳಿ; ನಿಮ್ಮ ಕನಸಿನಲ್ಲಿ ಬರುವ ಪ್ರತಿಮೆಗಳು, ನಿಮ್ಮ ನೆನಪಿನಲ್ಲಿರುವ ವಸ್ತುಗಳು. ನಿಮ್ಮ ನಿತ್ಯ ವರ್ತಮಾನ ರಸಹೀನ ಅನ್ನಿಸಿದರೆ, ಅದನ್ನು ದೂರಬೇಡಿ. ನಿಮ್ಮನ್ನು ದೂರಿ. ಬದುಕಿನ ಶ್ರೀಮಂತಿಕೆಯನ್ನು ಆವಾಹನೆ ಮಾಡಿಕೊಳ್ಳುವಷ್ಟು ಕವಿ ನೀವಾಗಿಲ್ಲ ಎನ್ನುವುದನ್ನು ಒಪ್ಪಿಕೊಳ್ಳಿ. ಯಾಕೆಂದರೆ ಸೃಷ್ಟಿಕರ್ತನಿಗೆ, ಬಡತನ ಅನ್ನುವುದಿಲ್ಲ, ರಸಹೀನ ಜಾಗ ಎನ್ನುವುದಿಲ್ಲ. ಯಾವುದೇ ಶಬ್ದ ಕೂಡ ನುಸುಳದ ಬಂದೀಖಾನೆಯಲ್ಲಿ ನಿಮ್ಮನ್ನು ಕೂಡಿಹಾಕಿದರೂ ಕೂಡ, ನಿಮ್ಮಲ್ಲಿ ಆ ಶ್ರೀಮಂತ ನೆನಪುಗಳ ಗಣಿಯಾದ ಬಾಲ್ಯ ಇಲ್ಲವೇ?



ಅದರತ್ತ ನೋಡಿ. ಆಳದಲ್ಲಿ ಹುದುಗಿ ಹೋಗಿರುವ ಈ ಬೃಹತ್ ಗತದ ಭಾವನೆಗಳನ್ನು ಜಾಗೃತಗೊಳಿಸಿ. ನಿಮ್ಮ ವ್ಯಕ್ತಿತ್ವ ಸದೃಢವಾಗಿ ಬೆಳೆಯುತ್ತದೆ. ನಿಮ್ಮ ಏಕಾಂತ ವಿಸ್ತರಿಸಿ, ಅದರ ಮುಸ್ಸಂಜೆಯ ಬೆಳಕಿನಲ್ಲಿ, ನೀವು ವಿಶ್ರಮಿಸಬಲ್ಲಿರಿ. ಇತರರು ಮಾಡುವ ಶಬ್ದಗಳು ದೂರದಲ್ಲಿ ನಿಮ್ಮನ್ನು ಹಾದು ಹೋಗುತ್ತವೆ ಅಷ್ಟೆ. ಈ ಒಳನೋಟದಿಂದ, ಈ ಅಂತರ್ಯದಾಳದಿಂದ ಕವನಗಳೇನಾದರೂ ಹುಟ್ಟಿದರೆ, ನೀವು ಇತರರ ಬಳಿ ಅವು ಚೆನ್ನಾಗಿವೆಯೇ, ಇಲ್ಲವೇ ಎಂದು ಅಭಿಪ್ರಾಯ ಕೇಳುವುದನ್ನು ನಿಲ್ಲಿಸುತ್ತೀರಿ. ಪತ್ರಿಕೆಗಳು ನಿಮ್ಮ ಕವನಗಳ ಬಗ್ಗೆ ಆಸಕ್ತಿ ತೋರಿಸಲಿ ಎಂಬ ಆಸಕ್ತಿಯೂ ನಿಮಗಿರುವುದಿಲ್ಲ. ಯಾಕೆಂದರೆ ನಿಮ್ಮ ಕವನಗಳು, ನಿಮ್ಮ ಸಹಜವಾದ ಪ್ರೀತಿಯ ಸ್ವತ್ತಾಗಿರುತ್ತವೆ. ನಿಮ್ಮ ಜೀವನದ ಒಂದು ಭಾಗ. ಅದರಿಂದ ಹುಟ್ಟಿದ ಒಂದು ಧ್ವನಿ. ಅವಶ್ಯಕತೆಯಿಂದ ಒಂದು ಸೃಜನಶೀಲ ಕೃತಿ ಹುಟ್ಟಿ ಬಂತೆಂದರೆ ಅದು ಚೆನ್ನಾಗಿರುತ್ತದೆ. ಅದೊಂದೇ ಅದರ ಮಾನದಂಡ. ಹಾಗಾಗಿ, ನನ್ನ ಪ್ರಿಯ ಸ್ನೇಹಿತರೇ, ನಾನು ನಿಮಗೆ ಕೊಡಬಹುದಾದ ಸಲಹೆ ಇಷ್ಟೆ- ನಿಮ್ಮಾಳಕ್ಕೆ ಇಳಿದು, ಎಷ್ಟು ಆಳದಿಂದ ನಿಮ್ಮ ಬದುಕು ಹರಿಯುತ್ತಿದೆ ಎಂಬುದನ್ನು ನೋಡಿ. ಅದರ ಮೂಲದಲ್ಲಿ ನೀವು ಹೊಸದಾಗಿ ಸೃಷ್ಟಿಸುವುದೇನಾದರೂ ಇದೆಯೇ ಎಂಬ ಪ್ರಶ್ನೆಗೆ ಉತ್ತರ ಸಿಗುತ್ತದೆ. ಆ ಉತ್ತರವನ್ನು ಒಪ್ಪಿಕೊಳ್ಳಿ. ಹೇಗೆ ಬಂತೋ ಹಾಗೇ, ಅದನ್ನು ವಿಶ್ಲೇಷಿಸಬೇಡಿ. ನೀವು ಕಲಾಕಾರನಾಗಬೇಕಾದ ಕರೆ ನಿಮಗೆ ಅಲ್ಲಿಂದ ಕೇಳಿಸಬಹುದು. ಆಮೇಲೆ ಆ ವಿಧಿಯನ್ನು ಅದರೆಲ್ಲಾ ಶ್ರೇಷ್ಠತೆ ಮತ್ತು ಅದು ಹೊತ್ತು ತರುವ ಹೊರೆಯೊಂದಿಗೆ, ಬಾಹ್ಯ ಪ್ರತಿಫಲಾಪೇಕ್ಷೆಯಿಲ್ಲದೆ ಒಪ್ಪಿಕೊಳ್ಳಿ. ಸೃಷ್ಟಿಕರ್ತ ಸ್ವಯಂಭೂ. ಎಲ್ಲವನ್ನೂ ತನ್ನಲ್ಲೇ, ತನ್ನ ಪ್ರಕೃತಿಯಲ್ಲೇ ಕಂಡುಕೊಳ್ಳಬೇಕು. ಅದಕ್ಕೇ ಅವನ ಬದುಕು ಮುಡಿಪು.

ಆದರೆ ಈ ಮೌನದಾಳದ, ಬದುಕಿನಾಳದ ಹುಡುಕಾಟದ ನಂತರ, ಕವಿಯಾಗಬೇಕೆಂಬ ನಿಮ್ಮ ಸಂಕಲ್ಪವನ್ನು ಬಹುಶಃ ನೀವು ಬಿಡಲೂ ಬೇಕಾಗಬಹುದು. (ನಾನು ಹೇಳಿದ ಹಾಗೆ, ಯಾರಾದರೂ ತಾನು ಬರೆಯದೆಯೂ ಬದುಕಬಹುದು ಅಂತ ಕಂಡುಕೊಂಡರೆ, ಅವರು ಬರೆಯಲೇಬಾರದು.) ಇಷ್ಟಕ್ಕೂ ಈ ಹುಡುಕಾಟ ನಿಷ್ಪ್ರಯೋಜಕ ಖಂಡಿತ ಅಲ್ಲ. ನಿಮ್ಮ ಬದುಕಿನ ಗತಿ ಅಲ್ಲಿಂದಲೇ ನಿರ್ಧರಿತವಾಗುತ್ತದೆ. ಈ ಗತಿ, ಈ ದಾರಿ ವಿಶಾಲವೂ, ಶ್ರೀಮಂತವೂ, ಸುಫಲವೂ ಆಗಿರಲಿ ಎಂಬುದೇ ನನ್ನ ಬಹುದೊಡ್ಡ ಹಾರೈಕೆ.

ನಾನು ಬೇರೆ ಏನನ್ನು ಹೇಳಲು ಸಾಧ್ಯ? ನನಗನಿಸುವ ಹಾಗೆ ಪ್ರತಿಯೊಂದಕ್ಕೂ ಅದರದೇ ಆದ ಒಂದು ನಿರ್ದಿಷ್ಟ ಸ್ಥಾನವಿದೆ. ಕೊನೆಯದಾಗಿ ನಾನು ಇನ್ನೊಂದು ಪುಟ್ಟ ಸಲಹೆ ಕೊಡಲು ಇಚ್ಛಿಸುತ್ತೇನೆ: ಮೌನವಾಗಿ, ವಿನಮ್ರವಾಗಿ, ಮನಃಪೂರ್ವಕವಾಗಿ ಬೆಳೆಯುವುದು; ಹೊರಗಿನಿಂದ ಬರಬಹುದಾದ ಉತ್ತರಗಳಿಗೆ ಕಾಯದೆ, ನಿಮ್ಮ ಆತ್ಮದ ಶಾಂತಿಯನ್ನು ಒಂದಿಷ್ಟೂ ಕಲಕದಂತೆ, ನಿಮ್ಮ ಅಂತರ್ಯದ, ಅತಿ ಮೌನದ ಕ್ಷಣಗಳಲ್ಲಿ ಬರುವ ಉತ್ತರಗಳಿಗೆ ತಲೆಬಾಗುತ್ತಾ ಬೆಳೆಯುವುದು.

ನಿಮ್ಮ ಪತ್ರದಲ್ಲಿ ಪ್ರೊ.ಹೊರಾಸೆಕ್ ಹೆಸರು ನೋಡಿ ನನಗೆ ತುಂಬಾ ಸಂತೋಷವಾಯಿತು. ಆ ಸುಜ್ಞಾನಿ, ಸಹೃದಯಿ ವ್ಯಕ್ತಿಯ ಬಗ್ಗೆ ಹಲವು ವರ್ಷಗಳಿಂದ ಗೌರವ ಮತ್ತು ಕೃತಜ್ಞತೆಯ ಭಾವನೆಯನ್ನಿಟ್ಟುಕೊಂಡಿದ್ದೇನೆ. ದಯವಿಟ್ಟು ಅವರಿಗೆ ನನ್ನ ವಂದನೆಗಳನ್ನು ತಿಳಿಸಿ. ಅವರು ನನ್ನ ಮೇಲಿಟ್ಟಿರುವ ಅಭಿಮಾನಕ್ಕೆ ನಾನು ಋಣಿ. ನೀವು ಕಳುಹಿಸಿದ ಕವನಗಳನ್ನು ನಾನು ನಿಮಗೆ ಹಿಂದಿರುಗಿಸುತ್ತಿದ್ದೇನೆ. ನಿಮ್ಮ ಪ್ರಶ್ನೆಗಳಿಗೆ, ವಿಶ್ವಾಸಕ್ಕೆ ನಾನು ಕೃತಜ್ಞ. ಎಷ್ಟು ಪ್ರಾಮಾಣಿಕವಾಗಿ ಸಾಧ್ಯವೋ ಅಷ್ಟು ಪ್ರಾಮಾಣಿಕವಾಗಿ ಉತ್ತರಿಸಲು ಪ್ರಯತ್ನ ಮಾಡುವ ಮೂಲಕ, ಅಪರಿಚಿತನಾದರೂ ನೀವು ನನ್ನ ಮೇಲಿಟ್ಟಿರುವ ವಿಶ್ವಾಸಕ್ಕೆ ಗೌರವ ತರುವ ಪ್ರಯತ್ನ ಮಾಡಿದ್ದೇನೆ.

ತಮ್ಮ ವಿಶ್ವಾಸಿ,
ರೈನರ್ ಮಾರಿಯಾ ರಿಲ್ಕೆ

(ಉಳಿದ ಭಾಗ : ಮುಂದಿನ 'ಸಂಚಯ'ದಲ್ಲಿ)


ಪುಸ್ತಕ ಪರಿಚಯ

ಮೊದಲಿಗೊಂದು ಮಾತು

ಪುಸ್ತಕಗಳ ಬಗ್ಗೆ ಬರೆಯುವುದು ಸಾಹಿತಿಗಳ ನಡುವೆ ಬಹಳಷ್ಟು ಸಲ ಮುನಿಸು ದ್ವೇಷ ಕಟ್ಟಿಕೊಳ್ಳುವ ಕೆಲಸವಾಗುತ್ತದೆ. ಹಾಗೆ ನೋಡ ಹೋದರೆ ಅದೊಂದು Thankless ಕೆಲಸ. ರಿವ್ಯೂ ಮಾಡುವಾಗ ಪುಸ್ತಕದ ವಸ್ತುವಿನ ಚೌಕಟ್ಟಿನ ಒಳಗೇ ಪುಸ್ತಕ ಕುರಿತು ಹೇಳುತ್ತಾ ಆ ಪುಸ್ತಕವನ್ನ ಓದುವಂತೆ ಮಾಡಬೇಕಾದ್ದು ಅಗತ್ಯ. ಹಾಗಂತ ಅದರ ಮಿತಿಗಳ ಬಗ್ಗೆ ಪ್ರಸ್ತಾಪಿಸದೇ ಚರ್ಚಿಸದೇ ಉಳಿದರೆ ಅದೂ ಒಂದು ರೀತಿಯ ಆತ್ಮವಂಚನೆಯಾದೀತು. ಪುಸ್ತಕದ ಸನ್ನಿವೇಶ ಅದರ ಹಿಂದಿನ ಸಾಹಿತ್ಯಕ ರಾಜಕಾರಣಗಳ ಬಗ್ಗೆ ಬರೆದರಂತೂ ಅನೇಕರ ದ್ವೇಷವನ್ನ ಶಾಶ್ವತ ಸಿಟ್ಟನ್ನ ಕಟ್ಟಿಕೊಳ್ಳಬೇಕಾಗುವುದು. ನಾನು ನನ್ನ ಗೆಳೆಯರು ಪುಸ್ತಕಗಳ ರಿವ್ಯೂ ಮಾಡುವಾಗ ಯಾವ ಮುಲಾಜುಗಳಿಗೂ ಒಳಗಾಗದೆ ಕಾಣಬಲ್ಲ ಒಳ್ಳೆಯ ಅಂಶಗಳನ್ನ ಹಾಗೂ ಕೃತಿಯೊಂದರ ಮಿತಿಗಳನ್ನ ಚರ್ಚಿಸುತ್ತಿದ್ದೇವೆ. ಹೇಳಬೇಕಾದ್ದನ್ನ ಸಂಕ್ಷಿಪ್ತವಾಗಿ ಯಾವುದೇ ರೀತಿಯ ಪ್ರದರ್ಶನಪ್ರಿಯತೆ ಇಲ್ಲದೆ ಹೇಳುತ್ತಿದ್ದೇವೆ. ಹಾಗೆ ಹೇಳದೇ ಹೋದರೆ ಇವತ್ತು ದೊಡ್ಡ ದೊಡ್ಡ ಪತ್ರಿಕೆಗಳ ಪುಟಗಳನ್ನ ಆಕ್ರಮಿಸಿಕೊಂಡು ಪರಸ್ಪರ ಬೆನ್ನು ಕೆರೆಯುವ ದೇಶಾವರಿ ಹೊಗಳುವ ಮೇಲುಮಟ್ಟದ ರಿವ್ಯೂಗಳನ್ನೇ ಬಲು ದೊಡ್ಡದು ಅಂತ ಭಾವಿಸುವ ಅಪಾಯವಿದೆ. ಸಾಹಿತ್ಯ ಪತ್ರಿಕೆಯೊಂದರ ನಿಜವಾದ ಕೆಲಸ ಇಂಥಾ ರೂಢಿಗತ ಹವ್ಯಾಸಗಳನ್ನು ಛಿದ್ರಗೊಳಿಸುವುದು. ವರ್ಷವೊಂದಕ್ಕೆ ಪ್ರಕಟಗೊಳ್ಳುವ ಸಾವಿರಾರು ಪುಸ್ತಕಗಳ ರಾಶಿಯ ಬಗ್ಗೆ ಎಲ್ಲರೂ ಪರಸ್ಪರ ಕುಶಲ ಸಂಭಾಷಣೆಗಳಲ್ಲಿ ನಿರತರಾಗಿಬಿಟ್ಟರೆ ಬಹಳ ಸಲ ಹುಸಿಯಾದದ್ದು ಸೌಜನ್ಯದ ತೆರೆಯ ಹಿಂದೆ ಮರೆಯಾಗಿಬಿಡುತ್ತದೆ. ರಿವ್ಯೂ ಮಾಡುವಾಗ ಯಾವುದೇ ರೀತಿಯ ಪೂರ್ವಾಗ್ರಹಗಳು ನಮ್ಮ ಮಾತುಗಳನ್ನ ರೂಪಿಸದಂತೆ ಎಚ್ಚರವಹಿಸಿದ್ದೇವೆ. ಹೊಸಬರ ಬಗ್ಗೆ ಸ್ವಲ್ಪ ಹೆಚ್ಚಿನ ಪ್ರೀತಿ-ಸಲುಗೆಯಿಂದ ಬರೆದಿರಬಹುದು. ಹಿರಿಯರ ಬಗ್ಗೆ ಆಡಿರುವ ಮಾತುಗಳಲ್ಲಿ ಕೆಲವು ಕಟುವಾಗಿರಲೂಬಹುದು. ಆದರೆ ಸುಳ್ಳಲ್ಲ. ಕಟುವಾಗಿ ನಿಜ ಹೇಳಿದ ಮಾತ್ರಕ್ಕೇ ಮನುಷ್ಯ ಸಂಬಂಧಗಳನ್ನ ಕಡಿದುಕೊಳ್ಳುವುದು ಕೆಡಿಸಿಕೊಳ್ಳುವುದು ನಮಗೂ ಬೇಕಿಲ್ಲ.

ನಮ್ಮ ಲೇಖಕರು ಮತ್ತು ಅವರ ಕೃತಿ ಎರಡೂ ಬೇರೆ ಬೇರೆ ಅನ್ನುವ ಪ್ರಬುದ್ಧತೆ ಮರೆಯಾಗಬಾರದು. ಕೃತಿಯ ಬಗೆಗಿನ ವಿಮರ್ಶೆ ಟೀಕೆ ಲೇಖಕನ ಬಗೆಗಿನ ವ್ಯಕ್ತಿಗತ ಟೀಕೆ ಅಲ್ಲ. ನೀವು ಮಾಡಿರುವ ಕಾಫಿ ಚೆನ್ನಾಗಿಲ್ಲ ಅಂದ ಮಾತ್ರಕ್ಕೆ ಕಾಫಿ ಮಾಡಿದವರೇ ಸರಿಯಾಗಿಲ್ಲ ಅಂತಲ್ಲ. ಆ ಹೊತ್ತಿನ ಕಾಫಿ ಚೆನ್ನಾಗಿಲ್ಲ ಅಂತಷ್ಟೇ. ನಾಳೆ ಹೊಸಾದೊಂದು ಬೆಳಗು ಹೊಸಾ ಕಪ್ಪು ಕಾಫಿ ಇದ್ದೇ ಇದೆಯಲ್ಲ. ಇಷ್ಟೆಲ್ಲದರ ನಡುವೆ ನಮ್ಮ ಸಾಹಿತ್ಯ ಜಗತ್ತಿನ ಧರಾವರಿ ಜಾಡ್ಯಗಳಿಗೆ ನಮ್ಮ ನಮ್ಮ ಮಿತಿಗಳಲ್ಲೇ ಪರಿಹಾರ; ಕ್ರಿಯಾಶೀಲ ಉತ್ತರ ನಾವುಗಳೇ ಹುಡುಕಿಕೊಳ್ಳಬೇಕಲ್ಲ.

ಕೆಲವರಿಗೆ ತಮ್ಮ ಪುಸ್ತಕ ಕುರಿತು ಬರೆಯದೇ ಉಳಿದ ಬಗ್ಗೆ ಅಸಮಾಧಾನ ಮುನಿಸು. ವರ್ಷಕ್ಕೆ ನಾಲ್ಕು ಸಂಚಿಕೆಯಲ್ಲಿ ಬರುವ ಎಲ್ಲಾ ಪುಸ್ತಕಗಳ ರಿವ್ಯೂ ಕಷ್ಟ. ಜೊತೆಗೆ ಗೆಳೆಯರು ಪುಸ್ತಕ ಪಡೆದು ರಿವ್ಯೂ ಬರೆಯದೇ ಉಳಿದಾಗಲೂ ಅದರ ಅಪಕೀರ್ತಿ ಸಂಪಾದಕನದ್ದೇ. ಅನೇಕ ಸಲ ಕಣ್ಣಿಗೆಬಿದ್ದ ಒಳ್ಳೆಯ ಪುಸ್ತಕದ ಬೆನ್ನು ಹತ್ತಿ ಬರೆದದ್ದೂ ಇದೆ. ಈ ರಿವ್ಯೂಗಳ ಪ್ರಾಮಾಣಿಕತೆ, ನೇರ ಮಾತು ಅನೇಕರಿಗೆ ಮೆಚ್ಚುಗೆಯಾಗಿರುವುದು ನಮ್ಮ ಬರವಣಿಗೆಯ ಬಗ್ಗೆ ಸಮಾಧಾನಕ್ಕೆ ಕಾರಣವಾದ ವಿಷಯ.



ಎನ್ನಭವದ ಕೇಡು (ಕಾದಂಬರಿ)

ಲೇ: ಎಸ್. ಸುರೇಂದ್ರನಾಥ್
ಪ್ರ: ಛಂದ ಪುಸ್ತಕ, ಬೆಂಗಳೂರು
ಬೆಲೆ: ೭೫/- ಪು.: ೨೩೬

ಇದು ಸುರೇಂದ್ರನಾಥರ ಮೊದಲ ಕಾದಂಬರಿ. ಈ ಒಂದೆ ೨೦೦೫ರಲ್ಲಿ ಇವರ ವಿಭಿನ್ನ ಶೈಲಿಯ ಕಥೆಗಳ ಸಂಕಲನ 'ನಾತಲೀಲೆ' ಪ್ರಕಟಗೊಂಡಿತ್ತು. ಮುಖ್ಯವಾಗಿ ರಂಗಭೂಮಿಯ ಒಸ್ಸೆಲೆ ಮತ್ತು ಸದ್ಯದ ದೃಶ್ಯ ಮಾಧ್ಯಮದ ಒಡನಾಟವಿರುವ ಸುರೇಂದ್ರನಾಥ್ ತಮ್ಮ ನಿರೂಪಣಾ ಶೈಲಿಯನ್ನ ಚಿತ್ರವತ್ತಾಗಿ ಇಂದ್ರಿಯಗಮ್ಯವಾಗಿ ಹೇಳುವುದನ್ನ ಅಚ್ಚರಿ ಹುಟ್ಟಿಸುವ ಹಾಗೆ ಸಾಧಿಸಿದ್ದಾರೆ. ದಾವಣಗೆರೆಯಲ್ಲಿ ಘಟಿಸುವ ವಿಚಿತ್ರದ ಘಟನೆಗಳು ವಾಸ್ತವ ಸಂಗತಿಗಳು ಇವರ ಸೃಜನಶೀಲ ನಿರೂಪಣೆಯಲ್ಲಿ ಹೊಸ ಮೆರುಗನ್ನ ಪಡೆದುಕೊಂಡು ಎದುರುಗೊಳ್ಳುತ್ತದೆ. ಸಂಸಾರವೊಂದರ ಸುತ್ತ ಬಿಡಿಸಿಕೊಳ್ಳುವ ಕತೆಯ ಹಂದರ ಕಾವ್ಯಾತ್ಮಕವಾಗಿ ಒಂದು ಪ್ರಬುದ್ಧ ಕವಿತೆ ನೀಡುವ ಬಹುಮುಖಿ ಅನುಭವಗಳ ದಟ್ಟತೆ ನೀಡುತ್ತಾ ಓದುಗನಲ್ಲಿ ಮೂಲೆ ಮುದುಕುಗಳಲ್ಲಿ ಅಡಗಿರುವ ಭವದ ಕೇಡನ್ನು ಉದ್ದೀಪಿಸುತ್ತದೆ. ಅನಂತಮೂರ್ತಿಯವರು ತಮ್ಮ ಮುನ್ನುಡಿಯಲ್ಲಿ ಗುರುತಿಸುವ ಹಾಗೆ "ನಮಗೆ ಗೊತ್ತಿರುವ ಲೋಕದಲ್ಲೇ ಗೊತ್ತಿಲ್ಲದ್ದು ನಡೆಯುವ ಸೋಜಿಗ ಇಲ್ಲಿ ಘಟಿಸುತ್ತದೆ." ಕಾದಂಬರಿಯ ಲೋಕ ಪ್ರತಿಯೊಂದು ಹಂತದಲ್ಲೂ ಸ್ವಯಂಪೂರ್ಣ ಅನ್ನಿಸುವಷ್ಟು ತುಂಬಿಕೊಂಡಿದೆ. ಶ್ರದ್ಧೆಯವಾಗಿದೆ. ಓದುಗರನ್ನು ಬೆರಗುಗೊಳಿಸಿ ತುರಿದುಂಬಿಸಿ ಅದರ ನಡೆಯೋಡುಗಳಲ್ಲಿ ಭಾಗವಹಿಸಿ ಅಲ್ಲಿನ ಪಾತ್ರಗಳಿಗೆ ಮಿಡಿಸುತ್ತದೆ. ಈಚಿನ ದಿನಗಳಲ್ಲಿ ಬಂದ ಒಂದು ಗಟ್ಟಿಯಾದ ಸೃಜನಶೀಲ ಕೃತಿ ಇದು. ಒಳ್ಳೆಯ ಕಾದಂಬರಿಗಳ ಸಾಲಿನಲ್ಲಿ ನಿಲ್ಲಬಲ್ಲ ಕೃತಿ. ರಾಶಿರಾಶಿ ಮಾಹಿತಿ ಗುಡ್ಡೆ ಹಾಕಿಕೊಂಡು ಭೈರಪ್ಪನವರಂಥಾ ಹಿರಿಯ ಕಾದಂಬರಿಕಾರರು ಸಾಹಿತ್ಯ ಕೃತಿಯ ಹೆಸರು ಒಸ್ಸೆಲೆಯ ರಾಜಕಾರಣಕ್ಕೆ ಧ್ವನಿಯಾಗುತ್ತಿರುವ ಹೊತ್ತಿನಲ್ಲಿ ಇಂಥಾ ಭವದ ಕೇಡಿನ ಕತೆ ನಮ್ಮದೆನ್ನಿಸುತ್ತದೆ. ಚಾರಿತ್ರಿಕವಾಗಿ ನಿಜವೇ ಇದ ಪಾತ್ರಗಳು ಘಟನೆಗಳು ಕಾದಂಬರಿಯ ವಾಸ್ತವ ವಿಸ್ತಾರದಲ್ಲಿ ಪಡೆದುಕೊಳ್ಳುವ ಅಸ್ತಿತ್ವ ವಿಭಿನ್ನವಾದದ್ದು, ಸ್ವಯಂಪೂರ್ಣವಾದದ್ದು. ಎಸ್.ದಿವಾಕರ್ ಇವರ ಕತೆಗಳ ಬಗ್ಗೆ ಬರೆಯುತ್ತಾ ಅವುಗಳ 'ಮ್ಯಾಜಿಕ್ ರಿಯಲಿಸಂ' ಕುರಿತು ಪ್ರಸ್ತಾಪಿಸುತ್ತಾರೆ. ಈ ಕಾದಂಬರಿಯಲ್ಲಿ ಅದು ಮ್ಯಾಜಿಕ್ ರಿಯಾಲಿಟಿಯಾಗಿದೆ ಎನ್ನಬಹುದು. ವಾಸ್ತವಗಳೇ ಅವಾಸ್ತವಗೊಳ್ಳುತ್ತಾ ಅವಾಸ್ತವವೆನ್ನಿಸುವ ಸಂಗತಿಗಳೂ ಓದುಗನ ಮನೋಭೂಮಿಕೆಗೆ ಒದಗಿಬರುತ್ತಾ ಸಾವು, ಕಾಮ, ವ್ಯಾಮೋಹ, ದುರಂತ, ಬದುಕಿನ ಬಳಲಿಕೆ ಎಲ್ಲವೂ ಏಕತ್ರ ಒಂದು ತೀವ್ರತೆಯಿಂದ ತುಂಬಿ ಬೆರೆತುಕೊಂಡಿರುವುದು ಈ ಕಾದಂಬರಿಯ ವೈಶಿಷ್ಟ್ಯ. ಸುರೇಂದ್ರನಾಥ್ ನಮ್ಮ ಅಭಿನಂದನೆಗೆ ಹಾಗೂ ಕೃತಜ್ಞತೆಗೆ ಪಾತ್ರರು.




ಬಿಸ್ಲು ಬಾಳೇಹಣ್ಣು ಮತ್ತು ಇತರ ಪ್ರಬಂಧಗಳು

ಲೇ: ಕೃಷ್ಣಮೂರ್ತಿ ಬಿಳಿಗೆರೆ
ಪ್ರ: ಕನ್ನಡ ಸಂಘ, ಕ್ರೈಸ್ಟ್ ಕಾಲೇಜು ಬೆಂಗಳೂರು
ಬೆಲೆ: ೮೦/- ಪು.: ೧೪೪.

ಕೃಷ್ಣಮೂರ್ತಿ ಬಿಳಿಗೆರೆ ಅನೇಕ ಮುಖಗಳ ಸೃಜನಶೀಲ ವ್ಯಕ್ತಿ. ಕವಿ, ಅಧ್ಯಾಪಕ, ಸಹಜಕೃಷಿಕ, ಮಳೆನೀರ ಕೊಯ್ಲಿನ ಆಂದೋಲನದ ಕ್ರಿಯಾಶೀಲ ಕನಸುಗಾರ. ಇವೆಲ್ಲಾ ಅವರ ಪ್ರಬಂಧ ಸಂಕಲನಕ್ಕೆ ಇರುವ ವೈವಿಧ್ಯತೆಗಳಿಗೆ ರೆಕ್ಕೆ ಪುಕ್ಕಗಳಾಗಿ ಪೂರಕವಾಗಿ ಸೇರಿಕೊಳ್ಳುತ್ತದೆ. ಇಪ್ಪತ್ತೊಂದು ಸಮೃದ್ಧವಾದ

ಆಪ್ತವೆನ್ನಿಸುವ ದೇಶೀ ಅನುಭವ ದ್ರವ್ಯವಿರುವ ಈ ಪ್ರಬಂಧ ಸಂಕಲನ, ಕೃಷ್ಣಮೂರ್ತಿ ಅವರ ಸಮೃದ್ಧ ಬಾಲ್ಯ ಹಾಗೂ ಕನಸುಗಣ್ಣಿನ ಹೋರಾಟದ ಈಗಿನ ಕಾಳಜಿಗಳ ಪ್ರತಿರೂಪವಾಗಿದೆ. ಬಹಳಷ್ಟು ಕಡೆ ಅತ್ಯಂತ ಕಾವ್ಯಾತ್ಮಕವಾಗಿ ಹಳ್ಳಿಗರಿಗಿರುವ ಏರುದನಿಯ ಭಾವುಕ ಆಪ್ತತೆಯಿಂದ ಕೃಷ್ಣಮೂರ್ತಿಯವರ ಪ್ರಬಂಧಗಳು ಬಿಡಿಸಿಟ್ಟುಕೊಳ್ಳುತ್ತದೆ. ಈ ಭೂಮಿ ಎಂಬುದೇ ಒಂದು ಮಹಾಬೀಜ ಎನ್ನುವ ರೂಪಕ, ಗಾಯಗಳ ಬಗ್ಗೆ ಹೇಳ ಹೇಳುತ್ತಾ ಅದರ ಸ್ವರೂಪವನ್ನ ವಿಸ್ತಾರಗೊಳಿಸುವ ಪರಿ ಸೊಗಸಾಗಿದೆ. ಬಯಲು ಸೀಮೆಯ ಬಿಸಿಲನ್ನು ಮೋಹಿಸುತ್ತಾ ಅದರ ನೆರಳಲ್ಲಿ ತೆರೆದುಕೊಳ್ಳುವ 'ಬೆವರ ಮುದ್ರೆ'; ಬೆಳಗಿನ ಬಗ್ಗೆ ಬರೆಯುತ್ತಾ ಬೆಳಗನ್ನು ಇರುಳು ಹೆತ್ತ ಹೊಸಾ ಕೂಸಿಗೆ ಹೋಲಿಸುವ ಪ್ರಬಂಧ ಮನಸ್ಸನ್ನ ಆರ್ದ್ರಗೊಳಿಸುತ್ತದೆ. ಇದೆಲ್ಲದರಲ್ಲೂ ಇರುವ ಲೇಖಕ ಆ ಲೋಕದ ಒಂದು ಭಾಗವೇ, ತನ್ನ ಬಗ್ಗೆಯೂ ಯಾವ ಬಿಡೆ ಇಲ್ಲದೆ ಆತ ಓದುಗರ ಜೊತೆಗೆ ಹಂಚಿಕೊಳ್ಳಬಲ್ಲ. ಹಲಸಿನ ಹಣ್ಣಿನ ಸೀಬೇಕಾಯಿಗಳ ಸುತ್ತಲ ಜಗತ್ತು ಬಾಲ್ಯದ ಸಾಹಸಮಯತೆ ಹಾಗೂ ಸೋಗಲಾಡಿತನಗಳು ಎಲ್ಲದರ ಸಮೀಪ ಚಿತ್ರಣ ಬೀಳಗೆರೆಗೆ ಸಾಧ್ಯವಾಗಿದೆ. ಅಷ್ಟೆ ಅಲ್ಲದೆ ನಾಶಹೊಂದುತ್ತಿರುವ ದೇಸಿ ಸಂಸ್ಕೃತಿಯ, ಹಳ್ಳಿಗಳ ಜೀವನ ಶೈಲಿಯ ಉಡುವ ಉಣ್ಣುವ ಅನುಭವಿಸಿ ಸುಖಪಡುವ ಸಂಗತಿಗಳ ಬಗ್ಗೆ ತೀವ್ರವಾದ ವಿಷಾದವಿದೆ. ಬರಡಾಗುತ್ತಿರುವ ಭೂಮಿ ನಾಶವಾಗುತ್ತಿರುವ ತಳಿಗಳು ಬೀಜಗಳು ಬದಲಾಗುತ್ತಿರುವ ಜೀವನ ಶೈಲಿಯಲ್ಲಿ ನಗಣ್ಯವಾಗುತ್ತಿರುವ ಸಣ್ಣ ಸಣ್ಣ ಖುಷಿಗಳು ಹೀಗೆ ಗದ್ಯದಲ್ಲಿ ಪದ್ಯಬರೆದಿದ್ದಾರೆ ಬೀಳಗೆರೆ.

ಈ ಸಂಕಲನದ ಮಿತಿಯ ಬಗ್ಗೆ ಹೇಳಬಹುದಾದ ಮಾತೆಂದರೆ, ನಿರೂಪಣೆಯ ನಡುವೆ ನುಸುಳಿಬಿಡುವ ವಾಚಾಳಿತನ. ಕೃಷ್ಣಮೂರ್ತಿ ಒಳಗಿನ Activist ಜಾಗ್ರತಗೊಂಡಾಗ ಲೇಖಕ ಹಿಂದೆ ಸರಿಯುತ್ತಾನೆ. ಎಲ್ಲವನ್ನೂ ಒಂದು ರೂಪಕವಾಗಿಸುವ ಬಲವಂತದ ಪ್ರಯತ್ನದಲ್ಲಿ ಸೋಲುತ್ತಾರೆ. ಎಷ್ಟೋ ಸಲ ಹೇಳಿಕೆಗಳ ಹಳಹಳಿಕೆಯ ದಿಕ್ಕಿಗೆ ತಿರುಗುವ ಕೆಲವು ಪ್ರಸಂಗಗಳನ್ನು ಹೊರತುಪಡಿಸಿಯೂ ಬರಹವೊಂದು ಹುಟ್ಟಿಸಬಲ್ಲ ಮೌನ ಹಾಗೂ ಅಂಥಾ ಮೌನ ಹೊಳೆಯಿಸುವ ಅರ್ಥಗಳನ್ನ ಲೇಖಕರ ಹೇಳುವ ಉತ್ಸಾಹ ಮಸುಕುಗೊಳಿಸುತ್ತದೆ. ಇಷ್ಟು ಹೇಳಿದ ಮೇಲೂ ಇಲ್ಲಿನ ಪ್ರಬಂಧಗಳು ನಮ್ಮ ಓದನ್ನ ಮುದಗೊಳಿಸುವ ಹದವನ್ನ ಖಂಡಿತಾ ಹೊಂದಿದೆ. ಕೃಷ್ಣಮೂರ್ತಿಯ ಪ್ರಾಮಾಣಿಕ ಕಾಳಜಿಗಳು ನಮ್ಮ ಮನಸ್ಸು ತಟ್ಟುತ್ತದೆ.



ಆಧುನಿಕ ಚೀನೀ ಸಣ್ಣಕತೆಗಳು

ಕನ್ನಡಕ್ಕೆ: **ಗೋಪಾಲಕೃಷ್ಣ ಪೈ**
ಪ್ರ: ಭಾಗ್ಯಲಕ್ಷ್ಮಿ ಪ್ರಕಾಶನ, ಬೆಂಗಳೂರು
ಬೆಲೆ: ೧೨೦/-. ಪುಟಗಳು:೨೬೨.


ಚೀನಾ ಯಾವತ್ತಿಗಿಂತಲೂ ಇವತ್ತು ಚರ್ಚೆಯಲ್ಲಿದೆ. ಒಲಂಪಿಕ್ಸ್‌ನ ನೆಪದಲ್ಲಿ ಟಿಬೇಟಿನ ಹೋರಾಟದ ದಮನದ ನೆಪದಲ್ಲಿ ನಮ್ಮ ನೆರೆಯ ಶತ್ರು ರಾಷ್ಟ್ರ ಎಂಬ ಮಾಸದ ನೆನಪಲ್ಲಿ ಹೀಗೇ ಅನೇಕ ಕಾರಣಗಳಿಗೆ ಚೀನಾ ನಮ್ಮ ಭಾವಕೋಶದ ಭಾಗ. ಅದು ಪದೇ ಪದೇ ನೆನಪಾಗುವುದಕ್ಕೂ ನೆಪಗಳು ವಿಪುಲವಾಗಿವೆ.

ಇದೊಂದು ಅಪರೂಪದ ವಿಶಿಷ್ಟ ಪುಸ್ತಕ, ನಮ್ಮ ದೇಶದಷ್ಟೇ ದೀರ್ಘವಾದ ಸಂಸ್ಕೃತಿಯ ಸಾತತ್ಯ ಉಳ್ಳ ಚೀನಾ ಈಚಿನ ಅರುವತ್ತು ಎಪ್ಪತ್ತು ವರ್ಷಗಳಲ್ಲಿ ತನ್ನ ಕಬ್ಬಿಣದ ಪರದೆಯಾಚೆಗೆ ಕಮ್ಯುನಿಸಮ್ಮಿನ

ಗೋಡೆಯಾಚೆಗೆ ಸ್ಪಂದಿಸಿದ್ದು ಒಂದು ಬಿಗುವಿನಲ್ಲೇ. ಅಲ್ಲಿನ ಕಲೆ-ಸಾಹಿತ್ಯ ಮನುಷ್ಯರ ನಡಾವಳಿಗಳ ಬಗ್ಗೆ ಪಕ್ಕದವರಾದ ನಮಗೆ ಸಹಜ ಕುತೂಹಲ. ಅನುವಾದದ ಹೆಸರಲ್ಲಿ ನಮ್ಮಲ್ಲಿ ಪಶ್ಚಿಮದ ಲೇಖಕರನ್ನು ನಡೆಮುಡಿ ಹಾಸಿ ಕರೆತಂದ ಹಾಗೆ ಪ್ರರ್ವದ ಲೇಖಕರನ್ನ ಗಮನಿಸಲೇ ನಾವು ಇಲ್ಲ. ಇದಕ್ಕೆ ರಾಜಕೀಯ ಹಾಗೂ ಸಾಂಸ್ಕೃತಿಕ ಕಾರಣಗಳು ಒತ್ತಡಗಳು ಹಲವು ಇದ್ದಾವು.

ಗೋಪಾಲಕೃಷ್ಣ ಪೈ ಲೂಷುನ್ ಕತೆಯೊಂದನ್ನು ಒಳಗೊಂಡು ಹದಿನಾರು ಚೀನೀ ಕತೆಗಳನ್ನು ಇಂಗ್ಲಿಷ್‌ನಿಂದ ಕನ್ನಡಕ್ಕೆ ತಂದಿದ್ದಾರೆ. ಇದರ ಹೆಸರುಗಳನ್ನ ಸ್ಥಳಗಳನ್ನು ಹೊರತು ಪಡಿಸಿದರೆ ಇವು ಕನ್ನಡದಲ್ಲೇ ಮೈ ತಳೆದ ಹಾಗಿವೆ. ಸಾಮಾನ್ಯವಾಗಿ ಅನುವಾದಕರು ಎದುರಿಸಬಲ್ಲ ತೊಡಕುಗಳನ್ನು ಪೈ ಸಮರ್ಥವಾಗಿ ನಿವಾರಿಸಿಕೊಂಡು ಕತೆಗಳನ್ನು ನಮ್ಮ ಭಾಷೆಯಲ್ಲಿ ಮರುರೂಪಿಸುವಲ್ಲಿ ಯಶಸ್ವಿಯಾಗಿದ್ದಾರೆ. ಮತ್ತು ಅವರ ಆಯ್ಕೆಯ ಕತೆಗಳೂ ಓದುಗರಿಗೊಂದು ವಿಶಿಷ್ಟ ಅನುಭವ ನೀಡುವ ದಿಕ್ಕಿನಲ್ಲೂ ಯಶಸ್ವಿಯಾಗಿವೆ.

ಆ ದೇಶದ ಸರ್ಕಾರ ಮತ್ತು ಜನಗಳ ಸಂಬಂಧ, ವ್ಯಕ್ತಿ ವ್ಯಕ್ತಿಗಳ ನಡುವಿನ ಪ್ರೇಮ ಪ್ರೀತಿ ಹೊಂದಾಣಿಕೆ ಹಾಗೂ ಘರ್ಷಣೆಗಳು, ಜಗತ್ತಿನ ಎಲ್ಲ ಮನುಷ್ಯರ ನೋವು ಒಬ್ಬಂಟಿತನ ವೃದ್ಧಾಪ್ಯ ಸಮಾಜದ ಕಟ್ಟಳೆಗಳ ಹಾಗೂ ವ್ಯಕ್ತಿಗತ ಬದುಕಿನ ತುಮುಲಗಳ ಹೋರಾಟ ಎಲ್ಲವೂ ಮನಮುಟ್ಟುವಂತೆ ಚಿತ್ರಿತವಾಗಿದೆ. ಉದಾಹರಣೆಗೆ ಎರಡು ಕತೆಗಳನ್ನ ಕುರಿತು ಹೇಳಬಹುದಾದರೆ; ಮೋಶೇನ್ ಬರೆದ 'ಕಿಟಕಿ' ಅನ್ನುವ ಕತೆ; ಯುವತಿಯೊಬ್ಬಳು ತಾನು ರೇಲ್ವೇ ಟಿಕೇಟು ಕೊಡುವ ಕಾಯಕದಲ್ಲಿ ತನ್ನ ವ್ಯಕ್ತಿ ವಿಶಿಷ್ಟತೆಯನ್ನು ಸಾಧಿಸಿಕೊಳ್ಳುವ ರೀತಿ ಗಮನ ಸೆಳೆಯುತ್ತದೆ. ಚೀನೀ ಜನಗಳ ಕಲಿಯುವ ಹೊಸದಕ್ಕೆ ಶ್ರಮಜೀವನಕ್ಕೆ ತೆರೆದುಕೊಳ್ಳುವ ಮನೋಭಾವಕ್ಕೆ ಇದು ಉದಾಹರಣೆಯ ಹಾಗೆ ನನಗೆ ಕಾಣುತ್ತದೆ. ಮತ್ತೊಂದು ಮೋಯೋನ್ ಬರೆದ 'ಶಿಫು' ಎಂಬ ಹಿರಿ ವಯಸ್ಸಿನ ಕಾರ್ಮಿಕ ತನ್ನ ಉದ್ಯೋಗವಿಲ್ಲದ ಪರಿಸ್ಥಿತಿಯಲ್ಲಿ ತಾನು ಕಟ್ಟಿಕೊಂಡಿದ್ದ ದೈನಿಕದ ಹೊರತಾಗಿ ದಿಕ್ಕಿಲ್ಲದೆ ಅಲೆಯುವ ಸ್ಥಿತಿಯಲ್ಲಿ ನಿರ್ಜನ ಪ್ರದೇಶದ ಹಳೆಯ ಮುರುಕಲು ಬಸ್ಸೊಂದು ಹತ್ತಿರದ ಪಾರ್ಕಿನ ಪ್ರೇಮಿಗಳ ಮಿಲನದ ಸ್ಥಳವಾಗಿ ಬಾಡಿಗೆಗೆ ಕೊಡಲು ಹೊಳೆದು ಅದೇ ಅವನ ಗಳಿಕೆಯ ದಾರಿ ಜೀವನೋತ್ಸಾಹದ ಹೊಸ ಹೊಸ ಕಂಡುಕೊಳ್ಳುವಿಕೆಯ ಮಾರ್ಗವೂ ಆಗಿಬಿಡುತ್ತದೆ. ಇಲ್ಲಿನ ಎಲ್ಲಾ ಕತೆಗಳು ತಮ್ಮ ಭಾವುಕತೆಯಿಂದ ಮನುಷ್ಯರು ತಾವೇ ಸೃಷ್ಟಿಸಿಕೊಂಡ ವ್ಯವಸ್ಥೆಯೊಂದರ ಜೊತೆಗಿನ ವ್ಯಕ್ತಿಗತ ಹೋರಾಟ ಹಾಗೂ ಇದರ ಜೊತೆಗೆ ಪ್ರೇಮ ಕಾಮ ವಿರಹ ಇಂಥಾ ವಿವರಗಳು ದಟ್ಟವಾಗಿ ಆಪ್ತವಾಗಿ ಆವರಿಸಿಕೊಂಡು ಕಾಡುತ್ತದೆ. ಈ ಕತೆಗಳು ಓದಿ ಬಹುಕಾಲ ನೆನಪಿನಲ್ಲಿ ಉಳಿಸಿಕೊಳ್ಳಬಲ್ಲಷ್ಟು ಗಟ್ಟಿಯಾಗಿವೆ. ನಮ್ಮೊಳಗಿನ ಚೀನಾದ ಕಲ್ಪನೆಗಳಿಗೆ ಇನ್ನಷ್ಟು ಸಮೃದ್ಧತೆ ಭಾವುಕತೆ ತುಂಬಿಕೊಳ್ಳಬಹುದು. ತುಂಬ ಭಿನ್ನವಾದ, ಬಹುಕಾಲ ಕಾಡುವ ಕತೆಗಳು ಈ ಲೋಕದಲ್ಲಿವೆ.



ಪ್ರತಿಮಾ ಲೋಕ (ಗೋಪಾಲಕೃಷ್ಣ ಅಡಿಗ-ಮರುಓದು)
ಸಂಪಾದಕ: **ಎಸ್.ಆರ್.ವಿಜಯಶಂಕರ**
ಪ್ರ: ಅಂಕಿತ ಪುಸ್ತಕ, ಬೆಂಗಳೂರು.
ಬೆಲೆ: ರೂ. ೨೫೦/- ಪು. : ೩೬೦

ಗೋಪಾಲಕೃಷ್ಣ ಅಡಿಗರ ಕಾವ್ಯದ ಪ್ರಭಾವ ಕನ್ನಡದ ಸಾಹಿತ್ಯದ ಅನೇಕ ಮುಖಗಳನ್ನು ಬೆಳಗಿಸಿದೆ, ಕಳೆಗುಂದಿಸಿದೆ. ಒಂದು ಕಾವ್ಯ ಮಾರ್ಗದ ಪ್ರವರ್ತಕರಾಗಿ ತನ್ನ ನಂತರದವರು ತನ್ನ ಪ್ರಭಾವವನ್ನ ಮೀರಿ ಬರೆಯಲು ಬಲು ಕಷ್ಟಪಡುವಂತೆ ಮಾಡಿದ ದೊಡ್ಡ ಕಾವ್ಯ ವ್ಯಕ್ತಿತ್ವ ಅಡಿಗರದ್ದು.

ಇದು ವಿಜಯಶಂಕರ ಅವರ ಸಂಪಾದಕತ್ವದಲ್ಲಿ ಗೋಪಾಲಕೃಷ್ಣ ಅಡಿಗರನ್ನ ಈಚಿನ ಹತ್ತು ವರ್ಷಗಳಲ್ಲಿ ಕನ್ನಡ ಲೇಖಕರು ಕಂಡಿರುವ ಬಗೆಯನ್ನ ತೋರುವ ಪ್ರಯತ್ನ ಇದು. ಮುನ್ನೂರಾ ಅರವತ್ತು ಪುಟಗಳ ಮೂವತ್ತಾರು ಲೇಖನಗಳ ಸಂಗ್ರಹ ಇದು. ಅಡಿಗೋತ್ತರ ಲೇಖಕರ ಪಡೆ ಅಡಿಗರ ವಿರುದ್ಧ ಕಾವ್ಯೇತರ ನೆಲೆಗಳಿಂದ ದಾಳಿಮಾಡಿದವು. ಅಡಿಗರ ರಾಜಕೀಯ ನಂಬಿಕೆಗಳು ಮತ್ತು ಕಾವ್ಯಾತ್ಮಕ ಕಸಬುದಾರಿಕೆಯ ಎಚ್ಚರ ಎರಡೂ ದ್ವಂದ್ವಮಯವಾಗಿ ಏಕರೇಖೆಯಲ್ಲಿ ನೋಡ ಹೊರಟವರಿಗೆ ಗೊಂದಲ ಹುಟ್ಟಿಸಿದ್ದು ವೈರುಧ್ಯಮಯವಾಗಿ ಕಂಡದ್ದು ಸುಳ್ಳಲ್ಲ.

ಎರಡು ಭಾಗಗಳ ಈ ಪುಸ್ತಕದಲ್ಲಿ ಮೊದಲನೆಯದರಲ್ಲಿ ಆಹ್ವಾನಿತ ಲೇಖನಗಳಿವೆ. ಈಗ ಬರೆಯುವುದರಲ್ಲಿ ನಿರತವಾದ ಹೊಸ ತಲೆಮಾರಿನ ಬೇರೆ ಬೇರೆ ವೃತ್ತಿ ಹಿನ್ನೆಲೆಗಳ ಲೇಖಕರು ಅಡಿಗರ ಕಾವ್ಯ ಕುರಿತು ಸ್ಪಂದಿಸಿದ ರೀತಿ ಇಲ್ಲಿ ದಾಖಲಾಗಿದೆ. ಇದರಲ್ಲಿ ಕೆಲವು ಲೇಖನಗಳು ಆಸಕ್ತಿಕರವಾಗಿದೆ ಮತ್ತೆ ಕೆಲವು ಹಳೆಯ ಅಕೆಡೆಮಿಕ್ ಶೈಲಿಯ ಶುಷ್ಕ ಅಧ್ಯಯನದ ಓದುಗಳಾಗಿದೆ. ಉದಾಹರಣೆಗೆ ಎಂ.ಎಂ. ಹೆಗಡೆ ಬರೆದಿರುವ ಅಡಿಗರ ಕಾವ್ಯದಲ್ಲಿ ಅಲಂಕಾರ ಪ್ರಯೋಗ ಕುರಿತ ಲೇಖನ, ಇದಕ್ಕೆ ಸಂಪಾದಕರೂ ತಮ್ಮ ಮುನ್ನುಡಿಯಲ್ಲಿ ಮೆಚ್ಚಿ ಬರೆದಿದ್ದಾರೆ. ಅಲಂಕಾರ ಪ್ರಸ್ಥಾನದ ಬೆಳಕಿನಲ್ಲಿ ಅಡಿಗರ ಕಾವ್ಯ ಓದಿಕೊಳ್ಳುವುದರಿಂದ ಯಾವ ಯೋಜನವಾಗುತ್ತದೆ ಎನ್ನುವ ಪ್ರಶ್ನೆಗೆ ಉತ್ತರ ದೊರಕುವುದಿಲ್ಲ. ಇದು ಅಡಿಗರ ಕಾವ್ಯ ಮತ್ತಷ್ಟು ದೊಡ್ಡದು ಅಂತ ಈ ಹಿಂದೆ ಬಾರಿಸಿದ ಶಂಖನಾದಕ್ಕೆ ಸಮನಾದದ್ದು. ಇನ್ನು ಡಾ. ಎಲ್.ಜಿ.ಮೀರಾ ಮತ್ತು ಡಾ. ಅಣ್ಣಮ್ಮ ಅವರು ಸ್ತ್ರೀವಾದದ ಹಿನ್ನೆಲೆಯಲ್ಲಿ ಬರೆದಿರುವ ಲೇಖನಗಳು ವ್ಯರ್ಥವ್ಯಾಯಾಮ. ಸ್ತ್ರೀವಾದದ ಬಗ್ಗೆ ಖಚಿತ ನಿಲುವಾಗಲೀ ಅನುಕಂಪವಾಗಲೀ ಇರದಿದ್ದ ಅಡಿಗರ ಕಾವ್ಯದಲ್ಲಿ ಈ ಚೌಕಟ್ಟಿನ ನೆಲೆಗಳನ್ನ ಹುಡುಕುವುದು ಪುಟಗಳನ್ನ ವ್ಯರ್ಥ್ಯ ನುಂಗುವ ಕಸರತ್ತು.

ಇನ್ನು ಹೊಸಬರ (ಆಹ್ವಾನಿತರ) ಲೇಖನಗಳಲ್ಲಿ ಎದ್ದು ಕಾಣುವಂಥದ್ದು ಕವಿ ಆನಂದ ಝುಂಜರವಾಡರು ಅಡಿಗರ 'ಕಾವ್ಯಧರ್ಮ' ಮತ್ತು 'ಧರ್ಮದ' ಬಗೆಗೆ ಬರೆದಿರುವ ಲೇಖನ. ಇದು ಒಂದು ವಿಶಿಷ್ಟವಾದ ಚಿತ್ತಭಿತ್ತಿಯ ಹಿನ್ನೆಲೆಯಲ್ಲಿ ಆಲೋಚಿಸಲು ಹಚ್ಚುತ್ತದೆ. ಪ್ರತಿಯೊಬ್ಬ ಕವಿಯೂ ತನ್ನ ಕಾಲಮಾನದ ತನ್ನ ಧರ್ಮಗಳನ್ನ ತನ್ನ ಕಾವ್ಯಧರ್ಮದ ಹಿನ್ನೆಲೆಯಲ್ಲಿ ಮರುರೂಪಿಸಿಕೊಂಡು ಸಾಧಿಸಬೇಕಾದ ಸಮನ್ವಯ ಕುರಿತು ಪರಂಪರೆಯ ಹಿನ್ನೆಲೆಯಲ್ಲಿ ಚರ್ಚಿಸುತ್ತದೆ. ಇದರ ಹಾಗೇ ಡಾ.ಎಂ.ಎಸ್.ಆಶಾದೇವಿ ಅವರು ಬರೆದಿರುವ ಅಡಿಗರ ಕಾವ್ಯದಲ್ಲಿ ಕಾಲ ಕುರಿತಾದ ಲೇಖನ ಗಮನೀಯವಾಗಿದೆ. ಕೆ.ಪಿ. ಸುರೇಶ ಅವರು ತಮ್ಮ ಕಾಲಕ್ಕೆ ಹಾಗೂ ಕಾವ್ಯಕ್ಕೆ ಅಡಿಗರ ಕಾವ್ಯವನ್ನ ಒಗ್ಗಿಸಿಕೊಳ್ಳಲು ಸಾಧಿಸಿಕೊಳ್ಳಲು ಮಾಡಿದ ಪ್ರಯೋಗಗಳು, ರವಿಶಂಕರ ರಾಮನಾಥರ ಸಾಹಿತ್ಯೇತರ ಹಿನ್ನೆಲೆಯ ಅಡಿಗರ ಕಾವ್ಯದ ಅನುಸಂಧಾನ ಕೆಲವು ಉತ್ತಮ ಒಳನೋಟಗಳನ್ನು ನೀಡುತ್ತದೆ. ಅಡಿಗರ ಗದ್ಯ ಬರವಣಿಗೆ ನಮ್ಮಲ್ಲಿ ಹೆಚ್ಚಿನ ಚರ್ಚೆಗೆ ಒಳಗಾಗಿಲ್ಲ. ಈ ಕುರಿತು ಬಾಲಸುಬ್ರಹ್ಮಣ್ಯ ಕಂಜರ್ಪಣೆ ಹೀಗೆ ಹೇಳುತ್ತಾರೆ "ಅವರ ಕಾವ್ಯಕ್ಕೇ ಮಾರುಹೋದ ಕಳೆದ ಐದು ದಶಕಗಳೀಚೆಯ ತಲೆಮಾರು ಅದರ ಗದ್ಯವನ್ನು ಚಿನ್ನದ ಕತ್ತಿಯಂತೆ ಇಟ್ಟುಕೊಂಡಿದೆಯೇ ಹೊರತು ಉಪಯೋಗಿಸಿಲ್ಲ." ಅಡಿಗರ ಗದ್ಯ ಬರಹ ಅವರ ಒಟ್ಟು ಕಾವ್ಯಾಭಿವ್ಯಕ್ತಿಗೆ ಪೂರಕವಾಗಿ ಕೆಲಸ ಮಾಡಿದೆ.

ಪುಸ್ತಿಕೆಯ ಎರಡನೆಯ ಭಾಗದಲ್ಲಿರುವ ಕಳೆದ ದಶಕದ ಆಯ್ದ ವಿಮರ್ಶಾ ಲೇಖನಗಳು ಯಾವತ್ತಿನ ವಯೋಮಾನದ ಹಿರಿತಲೆಮಾರಿನಿಂದ ಕಿರಿತಲೆಮಾರಿನ ತನಕದ ವಿಮರ್ಶಕರ ಬರಹಗಳಿವೆ. ಇವುಗಳಲ್ಲಿ ಟಿ.ಜಿ.ರಾಘವ ಮತ್ತು ಶಿವಪ್ರಕಾಶರ ಬರಹಗಳು ಕೊಂಚ ಭಿನ್ನವಾದದ್ದು.

ಮೊಗಳ್ಳಿ ಗಣೇಶರ ಪ್ರಕಾರ, "ಅಡಿಗರು ಚರಿತ್ರೆಯನ್ನು ದಲಿತ ಬಂಡಾಯದವರಂತೆ ಸಾಮಾಜಿಕ ನ್ಯಾಯದ ತಕ್ಕಡಿಯಲ್ಲಿಟ್ಟು ನೋಡುತ್ತಿರಲಿಲ್ಲ. ಆದರೆ ಅವರು ಚರಿತ್ರೆಯ ಜೊತೆಗಿನ ಪರಂಪರೆಯ ಪುರಾಣವನ್ನು ಏಕಕಾಲಿಕವಾಗಿ ವ್ಯಕ್ತಿಯ ಚಹರೆಗೆ ಬೇಕಾದ ಒಂದು ಆನುಷಂಗಿಕ ಪ್ರಕ್ರಿಯೆಯಾಗಿ ಭಾವಿಸುತ್ತಿದ್ದರು. ಜೊತೆಗೆ ಒಂಟಿಯಾದವರ ಎಲ್ಲ ಖಿನ್ನತೆಯೂ ಬಿಡುಗಡೆಗೆ ಬಯಸುವುದು ಭಾಷೆಯ ರೂಪಕ ಮಂತ್ರಗಳನ್ನೇ ಅಡಿಗರು ಅಂತರ್ಮುಖಿಯಾದ ಕವಿಯೇ ಹೊರತು ಬಹಿರ್ಮುಖಿಯಾದ ಕವಿಯಲ್ಲ, ಅನ್ಯತೆಯನ್ನೇ ಅಡಿಗರು ಅನನ್ಯತೆ ಎಂದು ತಿಳಿದಂತಿದೆ ನವ್ಯದ ಎಲ್ಲಾ ಲೇಖಕರಿಗೂ ಅನ್ಯತೆಯ ಅಮಲಿತ್ತು. ಅನ್ಯತೆಯು ಪಲಾಯನವಾದವೂ ಆಗಬಹುದು. ಭೂಮಿಗೀತದ ನಾಯಕ ದುರಂತವನ್ನು ಘನವಾಗಿ ವಿಜೃಂಭಿಸುತ್ತಲೇ ಪಲಾಯನವಾದಿಯಾಗಿಬಿಡುತ್ತಾನೆ." ಹೀಗೆ ಅಡಿಗರನ್ನ ಅರ್ಥಮಾಡಿಕೊಳ್ಳುತ್ತಾ ಅವರಿಂದ ಭಿನ್ನವಾಗಿ ನಿಲ್ಲುವ ನಿಲುವುಗಳನ್ನು ಮೊಗಳ್ಳಿ ಪ್ರತಿಪಾದಿಸುತ್ತಾರೆ.

ಸುಬ್ಬು ಹೊಲೆಯಾರ್‌ಗೆ ಅಡಿಗರ ಕಾವ್ಯ ಬಾಯಾರಿದವನಿಗೆ ಬಿಸಿನೀರು ಕುಡಿದ ಹಾಗೆ ಅನ್ನಿಸಿದರೂ "ಅಡಿಗರು ನಮ್ಮ ನಿಮ್ಮಗಳ ಕವಿ. ಕನ್ನಡದ ಕವಿ ಇದೇ ಮಾತನ್ನು ಕನ್ನಡ ಸಾಹಿತ್ಯದ ಸಂಪನ್ನ ಲೋಕ ಸಿದ್ಧಲಿಂಗಯ್ಯನವರ ಬಗ್ಗೆ ಕೂಡಾ ಅಂತರಂಗದಿಂದ ಹೇಳಬಹುದೆ?" ಅಂತ ಪ್ರಶ್ನಿಸುತ್ತಾರೆ. ಇದು ಅಡಿಗರ ಜಾತಿ, ವರ್ಗ ಮತ್ತು ವೈದಿಕ ನಂಬಿಕೆಗಳ ಪ್ರತಿಪಾದನೆಯ ಹಿನ್ನೆಲೆಯಲ್ಲಿ ಎತ್ತಿರುವ ಪ್ರಶ್ನೆ. ಕನ್ನಡದ ಓದುಗರು ಕವಿಯೊಬ್ಬನನ್ನ ಅವನ ಬರೀ ಜಾತಿಯ ಹಿನ್ನೆಲೆಯಲ್ಲಿ ಅಥವಾ ಅವನ ಕುರಿತು ನಡೆದ ವಿಮರ್ಶೆಗಳ ವಕ್ತಾರಿಕೆಯಿಂದಷ್ಟಕ್ಕೇ ಒಪ್ಪಿಕೊಂಡಿಲ್ಲ. ಅಂಥಾ ಒಪ್ಪಿಗೆ ಕಾವ್ಯಾತ್ಮಕ ಕಾರಣಗಳಿಗೇ ಇದೆ. ಇನ್ನು ಸಿದ್ಧಲಿಂಗಯ್ಯ ಅಡಿಗರಷ್ಟು ಸಮರ್ಥ ಕವಿಯಲ್ಲ ಆದರೆ ನಮ್ಮ ದಲಿತ ಕಾವ್ಯದ ಮೊದಲ ಕವಿ. ಇಂಥವು ಶಂಕೆಯಿಲ್ಲದೆ ಪುರಸ್ಕರಿಸಲ್ಪಟ್ಟರೆ ಹಾಗೆಯೇ ಬೇಡದ್ದು ನಿರಾಕರಿಸಲ್ಪಟ್ಟಿದೆ.

ಕೊನೆಯದಾಗಿ; ಜಿ.ಕೆ.ರವೀಂದ್ರಕುಮಾರ ಕೇಳುವ ಪ್ರಶ್ನೆ ಮಾರ್ಮಿಕವಾಗಿದೆ. ಅಡಿಗರ ಕಾವ್ಯಕ್ಕೆ ತಮ್ಮ ವಿಮರ್ಶೆಯ ಸೂಕ್ಷ್ಮದರ್ಶಕ ಹಿಡಿದು ಅದರ ಸಮೀಪದರ್ಶನ ಮಾಡಿಸಿದ ಒಂದು ವಿಮರ್ಶಕರ ಪಡೆಯೇ ಅದರ ಬೆನ್ನಿಗಿತ್ತು. ಇವರೆಲ್ಲರ ಪ್ರೋತ್ಸಾಹದಿಂದ ಉತ್ಸಾಹದಿಂದ 'ಅಡಿಗ ಪ್ರಭುತ್ವ' ಸ್ಥಾಪಿತವಾಗಿ ಬೇಂದ್ರೆ ಕುವೆಂಪು ಬಿಟ್ಟರೆ ಅಡಿಗ ಎಂಬಂಥ ಸಿದ್ಧಮಾದರಿ ರೂಪುಗೊಂಡು ಒಂದು ರೂಢಿಗತ ಓದಿನ ಕ್ರಮ ಸಿದ್ಧವಾಗಿ, ಶರ್ಮ, ಚಿತ್ತಾಲ, ರಾಮನುಜನ್, ಎಕ್ಕುಂಡಿ ಮೊದಲಾದ ಅಡಿಗರ ಸಮಕಾಲೀನರಿಗೆ ಸೆಕೆಂಡರಿ ಕವಿಗಳ ಪಟ್ಟಿ ದೊರೆತು ಅವರುಗಳು ಮೂಲೆಗುಂಪಾದರು. ಇವತ್ತಿಗೂ ಸಮಗ್ರ ಸಾಹಿತ್ಯ ಸಮಗ್ರ ವಿಮರ್ಶೆ- ವಿಮರ್ಶೆಯ ವಿಮರ್ಶೆ ಅವುಗಳ ಮುಂದುವರಿಕೆಯಾಗಿ ಬರುವ ಮರುಓದುಗಳು, ಉಳಿದ ಕವಿಗಳ ಸೌಭಾಗ್ಯ ಏಕಾಗಿಲ್ಲ ಅನ್ನುವ ಪ್ರಶ್ನೆ ಎತ್ತಲೇಬೇಕಾಗಿದೆ. ಅಡಿಗರಿಗೆ ದೊರೆತ ಈ ಸೌಭಾಗ್ಯ ನಮ್ಮ ಉಳಿದ ಕವಿಗಳಿಗೂ ವಿಸ್ತರಿಸಲೇಬೇಕು. ಇಲ್ಲದಿದ್ದರೆ ಈ ಏಕಮುಖ ಸಾಂಸ್ಕೃತಿಕ ಆರಾಧನೆಯನ್ನು ಇತಿಹಾಸ ಕ್ಷಮಿಸುವುದಿಲ್ಲ. ಈ ಪುಸ್ತಕದ ಉಳಿದ ಲೇಖನಗಳಲ್ಲಿ ಬಹುಪಾಲು ಯಾವತ್ತಿನ ಅಡಿಗರ ಬಗೆಗಿನ ರೂಢಿಗತ ಓದನ್ನ ಮಾಡುತ್ತವೆ. ಇಂಥವುಗಳ ನಿಯಂತ್ರಣ ಪುಸ್ತಕದ ಗಾತ್ರವನ್ನ ಕಾಯಬಹುದಿತ್ತು. ಅವುಗಳನ್ನ ಕೈಬಿಟ್ಟಿದ್ದರೆ ಯಾವ ನಷ್ಟವೂ ಆಗುತ್ತಿರಲಿಲ್ಲ. ಎರಡನೆಯ ಭಾಗದ ಲೇಖನಗಳು ಪುಸ್ತಕಕ್ಕೊಂದು ಮೌಲ್ಯ ಸೃಷ್ಟಿಸುವ ಸಲುವಾಗಿ ಜೋಡಿಸಿದ ಹಾಗೆ ಕಾಣಬರುತ್ತದೆ. ಬರೀ ಹೊಸಬರ ಮಾತುಗಳನ್ನ ನೆಚ್ಚಿ ಪ್ರಕಟಿಸುವುದೂ ಒಂದು ಬಗೆಯ ರಿಸ್ಕ್. Politically ಸರಿಯಾಗಿರಬೇಕಾದ್ದು ನಮ್ಮ ಕಾಲದ ಸಂಪಾದಕರುಗಳ ದೊಡ್ಡ ಸಮಸ್ಯೆ ಅಥವಾ ಎಲ್ಲಾ ಕಾಲದ್ದೋ ಗೊತ್ತಿಲ್ಲ.

■ **ಡಿ.ವಿ.ಪ್ರಹ್ಲಾದ್**



ಅರ್ಧ ಶತಮಾನದ ಕನ್ನಡದ ಸಂಕಥನ ಮತ್ತು ಕೆ.ವಿ.ಎನ್.

ಕನ್ನಡ ಜಗತ್ತು ಅರ್ಧ ಶತಮಾನ
ಲೇ : ಕೆ.ವಿ. ನಾರಾಯಣ
ಪ್ರ : ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ
ಬೆಲೆ : ರೂ. ೧೨೦, ಪುಟ: ೩೪೨

ಕೆ.ವಿ.ನಾರಾಯಣ ವಿಮರ್ಶಕರಾಗಿ, ಭಾಷಾ ವಿಷಯದ ಆಸಕ್ತರಾಗಿ ಈಗಾಗಲೇ ಪ್ರಸಿದ್ಧರು. ಕನ್ನಡ ವಿಶ್ವವಿದ್ಯಾಲಯ ಹಂಪಿಯ ಪ್ರಸಾರಾಂಗದ ಮೂಲಕ ಅವರು ಬರೆದ 'ಕನ್ನಡ ಜಗತ್ತು ಅರ್ಧ ಶತಮಾನ' ಹೊರಬಂದಿದ್ದು, ಭಾಷೆ, ಸಂಸ್ಕೃತಿ ಆಸಕ್ತರ ಗಮನ ಸೆಳೆಯುವಂತಿದೆ. ಮುಖ್ಯವಾಗಿ ಕನ್ನಡ ಭಾಷೆಯ ಒಳಗೆ ಆಗುತ್ತಿರುವ ಬದಲಾವಣೆಗಳು, ಕನ್ನಡದ ಸಮಾಜ ಹೊಸ ಅನುಭವಕ್ಕೆ ಒಡ್ಡಿಕೊಂಡಂತೆ ಭಾಷಾಸ್ವರೂಪದಲ್ಲಿ ಆಗುತ್ತಿರುವ ಬದಲಾವಣೆಗಳ ಸರಳ, ಖಚಿತ ನಿರೂಪಣೆ ಈ ಪುಸ್ತಕದ ವಿಷಯ. ಈ ಪುಸ್ತಕದಲ್ಲಿ 'ಹಿನ್ನೆಲೆ' 'ಆಡಳಿತದಲ್ಲಿ ಕನ್ನಡ ಬಳಕೆ' 'ಕನ್ನಡ ರಚನೆಯಲ್ಲಿ ಆಗಿರುವ ಪಲ್ಲಟಗಳು' 'ಕನ್ನಡದ ಚಳುವಳಿಗಳು ..' ಎಂಬ ನಾಲ್ಕು ಭಾಗಗಳಲ್ಲಿ ವಸ್ತುವಿನ ಮಂಡನೆಯಿದೆ. ಈ ಶೀರ್ಷಿಕೆಗಳಲ್ಲಿ ಭಾಗ ಒಂದರಲ್ಲಿ ಕನ್ನಡ ಭಾಷೆಯ ಚಾರಿತ್ರಿಕ ಹಿನ್ನೆಲೆ, ಏಕೀಕರಣ, ಭಾಷಾನೀತಿ, ಯೋಜನೆ ಕುರಿತು ಮಂಡಿಸಿದ್ದಾರೆ. ಎರಡನೆಯ ಭಾಗದಲ್ಲಿ ಆಡಳಿತದಲ್ಲಿ ಕನ್ನಡ ಬಳಕೆ, ಶಿಕ್ಷಣದಲ್ಲಿ ಕನ್ನಡ, ಸಮೂಹ ಮಾಧ್ಯಮದಲ್ಲಿ ಇತರ ಭಾಷೆಗಳ ಜೊತೆ ಸಂಬಂಧ ಭಾಗಗಳಿವೆ. ಜೊತೆಗೆ ಹೆಚ್ಚು ಗಮನ ಬೇಡುವ 'ಪ್ರಾಮಾಣೀಕರಣ' 'ಆಧುನೀಕರಣ' 'ಕನ್ನಡದ ಪ್ರಭೇದಗಳು...' ಎಂಬ ಶೀರ್ಷಿಕೆಗಳಿವೆ. "ಕನ್ನಡ, ಕರ್ನಾಟಕ ಮತ್ತು ಕನ್ನಡಿಗ ಎಂಬ ಈ ಮೂರು ಪರಿಕಲ್ಪನೆಗಳು ಪರಸ್ಪರ ಬೆರೆತುಕೊಳ್ಳುವುದು ಕಷ್ಟವೇ. ಕನ್ನಡಿಗರು ಕನ್ನಡವಲ್ಲದೆ ಇತರ ಭಾಷೆಯನ್ನು ಕಲಿತು ಮಾತಾಡಬಹುದು. ಅಲ್ಲದೆ ಬೇರೆ ಪ್ರದೇಶದಲ್ಲಿ ವಾಸ ಮಾಡಬಹುದು. ಕನ್ನಡ ಮಾತ್ರ ಕರ್ನಾಟಕದ ಭಾಷೆಯಾಗಿ ಪರಿಗಣಿತವಾಗಲಾರದು.." ಹೀಗೆಲ್ಲಾ 'ಹಿನ್ನೆಲೆ'ನಲ್ಲಿ ಬರೆಯುವ ನಾರಾಯಣರ ಉದ್ದೇಶವೇನು ಅನ್ನುವುದು ತಿಳಿಯುವುದಿಲ್ಲ. ಅವರೇ ಮುಂದೆ "ಈ ಹಿನ್ನೆಲೆಯಲ್ಲಿ ೧೯೫೬ರ ನವೆಂಬರ್ ೧ರಂದು ರೂಪುಗೊಂಡ ಕರ್ನಾಟಕವನ್ನು ನಾವು ಪರಿಗಣಿಸಬೇಕು. ಈ ರಾಜ್ಯದ ಅಧಿಕೃತ ಭಾಷೆಯನ್ನಾಗಿ ಕನ್ನಡ ಸ್ಥಾನ ಪಡೆದಿದ್ದು ೭ ವರ್ಷಗಳ ಆ ನಂತರದಲ್ಲಿ. ಆದರೆ ಭಾವನಾತ್ಮಕವಾಗಿ ಈ ರಾಜ್ಯದ ನಿರ್ಮಾಣದ ಹಿಂದೆ ಕನ್ನಡ ಎಂಬ ಗುರುತು ಕೆಲಸ ಮಾಡಿದೆ ಎನ್ನುವುದು ಖಚಿತ. ಅದು ಬಹುಜನರ ನಂಬಿಕೆಯೂ ಆಗಿತ್ತು." ಎಂದು ಸ್ಪಷ್ಟೀಕರಣ ಕೊಡುತ್ತಾರೆ.

ಒಂದು ವರ್ಷಕ್ಕಿಂತ ಹೆಚ್ಚಾಗಿ, ಆಳವಾದ ಅಧ್ಯಯನ ಮಾಡಿ ಬರೆದ ಗ್ರಂಥವಿದು. ಆದರೆ ಆಳವಾದ ಅಧ್ಯಯನ ಎಂದ ಮಾತ್ರಕ್ಕೆ ತೀರಾ ಶುಷ್ಕವಾಗಿ ಏಕೆ ವಿಷಯ ಮಂಡನೆ ಮಾಡಬೇಕು ಎಂಬುದು ತೋರುತ್ತಿಲ್ಲ. ತಂತ್ರಜ್ಞಾನದ ಬೆಳವಣಿಗೆ, ಆಧುನಿಕತೆಯ ಒತ್ತಡ, ಸರಕಾರದ ಭಾಷಾನೀತಿ, ರಾಜಕೀಯ, ಸಾಮಾಜಿಕ ಕಾರಣಗಳ ಹಿನ್ನೆಲೆಯಲ್ಲಿ ಲೇಖಕರು ಹೇಳುವಂತೆ ಈ ಅಧ್ಯಯನ ರೂಪುಗೊಂಡಿದೆ.

ನಾರಾಯಣ ಅವರ ಬರವಣಿಗೆಯ ಲಕ್ಷಣ ಮತ್ತು ಸಮಸ್ಯೆ ಎಂದರೆ ಹೇರಿಕೊಳ್ಳುವ ಸಂಕೋಚ. ಇದರಿಂದ ಬರಹಕ್ಕೆ, ಅದರಲ್ಲೂ ಭಾಷೆ ಕುರಿತು ಭಾಷೆಯಲ್ಲೇ ಮಂಡಿಸುವ ಬರಹದ ತೊಡಕು ಹೆಚ್ಚುತ್ತದೆ. ಉದಾಹರಣೆಗೆ ನೋಡಿ. ಕೆ.ವಿ.ಎನ್ ಇವತ್ತು ಕರ್ನಾಟಕದಲ್ಲಿ ಇರುವ ಭಾಷಾ ವಿದ್ವಾಂಸರಲ್ಲಿ ಭಾಷಾ ವ್ಯಾಕರಣ ಮಾತ್ರವಲ್ಲ, ಸಾಮಾಜಿಕ ನ್ಯಾಯ, ಸಾಮಾಜಿಕ 'ವ್ಯಾಕರಣದ' ಸ್ವರೂಪವನ್ನು ಬೌದ್ಧಿಕವಾಗಿ ಮಾತ್ರವಲ್ಲ ಭಾವನಾತ್ಮಕವಾಗಿಯೂ ಅನುಭವಿಸುತ್ತಿರುವ ಮನುಷ್ಯ. ಆದರೆ ಲೇಖನ ಬರೆಯುವಾಗ ಎಲ್ಲಿಲ್ಲದ ಬಿಗುಮಾನ ಕಂಡುಬರುತ್ತದೆ. 'ಋ' ಕಾರದ ಸಮಸ್ಯೆ ಬಗ್ಗೆ ಅವರಿಗೆ ಸ್ಪಷ್ಟ ನಿಲುವಿದೆ: "ವಾಸ್ತವವಾಗಿ 'ಋ' ಕಾರವು 'ರ' ಕಾರವನ್ನು ಪ್ರತಿನಿಧಿಸುತ್ತದೆ.... 'ರ' ವ್ಯಂಜನದ ಬದಲು ಅದರ ಸ್ವರ ರೂಪವಾಗಿ ಅಥವಾ ಅಕ್ಷರ ಕೇಂದ್ರವಾಗಿ 'ಋ' ಕಾರವನ್ನು ಸಂಸ್ಕೃತದಲ್ಲಿ ಬಳಸುವ ಪದ್ಧತಿ ಇದೆ. ಇದು ಸರ್ವಥಾ ಕನ್ನಡಕ್ಕೆ ಅನ್ವಯಿಸುವ ವಿಚಾರವಲ್ಲ. ಏಕೆಂದರೆ ಕನ್ನಡದಲ್ಲಿ ಎಲ್ಲಿಯೂ ವ್ಯಂಜನವೂ ಅಕ್ಷರ ಕೇಂದ್ರವಾಗಲಾರದು...' (ಪು. ೧೬೪). ಅದೇ ರೀತಿ ಡಾ. ಶಂಕರ ಭಟ್ಟರ 'ಕನ್ನಡಕ್ಕೆ ಕನ್ನಡದ್ದೇ ವ್ಯಾಕರಣವಿದೆ, ಸಂಸ್ಕೃತ ವ್ಯಾಕರಣದ ನಿಯಮಾವಳಿಗಳನ್ನು ತಿರಸ್ಕರಿಸುವ ಅಗತ್ಯವಿದೆ' ಎಂಬ ವಾದವನ್ನು ನಾರಾಯಣರು ಉದ್ದಕ್ಕೂ ಒಪ್ಪುತ್ತಾರೆ. ಆದರೆ ಅದರಲ್ಲಿ ಒಂದು ರೀತಿ ಸರಿದು ದೂರ ನಿಲ್ಲುವ 'ಗುಣ' ಕಂಡುಬರುತ್ತದೆ. ಹಿಂದಿನಿಂದಲೂ ಸಂಸ್ಕೃತ ವ್ಯಾಕರಣದ ನೆರಳಿನಲ್ಲಿ ಕನ್ನಡ ವ್ಯಾಕರಣಗಳು ರೂಪುಗೊಂಡವು ನಂತರ ೧೯ನೇ ಶತಮಾನದಲ್ಲಿ ಕನ್ನಡಕ್ಕೆ ವ್ಯಾಕರಣ ರಚಿಸಿದ ಕ್ರಿಶ್ಚಿಯನ್ ಮಿಷನರಿಗಳು "ಲ್ಯಾಟಿನ್ ಭಾಷೆಯ ನಿಯಮ, ಸ್ವರೂಪವನ್ನು ಕನ್ನಡದಲ್ಲಿ ಗುರುತಿಸಲು ಯತ್ನಿಸಿದರು." ಎಂದು ಹೇಳುವ ಕೆ.ವಿ.ಎನ್. ನಿಜಕ್ಕೂ ಒಳನೋಟಗಳಿರುವ ಪುಸ್ತಕ ಬರೆದಿದ್ದಾರೆ. ಡಾ.ಡಿ.ಎನ್.ಶಂಕರ ಭಟ್ ಅವರ ಕೃತಿಗಳು "ಕನ್ನಡ ವಿದ್ವತ್ ಪ್ರಪಂಚದಲ್ಲಿ ಯಾವ ಪಲ್ಲಟವನ್ನೂ ತರಲಿಲ್ಲ" ಎಂಬಲ್ಲಿ ಕೆ.ವಿ.ಎನ್ ನಿಲುವು ಶಂಕರ ಭಟ್ಟರ ವಾದದ ಪರವಾಗಿರುವುದು ಗೊತ್ತಾಗುತ್ತದೆ.

'ಕನ್ನಡ ಜಗತ್ತು....' ಹಳೆಗನ್ನಡ ವ್ಯಾಕರಣ ನಿಯಮಗಳಿಂದ, ಇವತ್ತಿನ ಪತ್ರಿಕಾ ಮಾಧ್ಯಮ, ದೃಶ್ಯ ಮಾಧ್ಯಮ ಜನರನ್ನು ತನ್ನ ತೆಕ್ಕೆಗೆ ತೆಗೆದುಕೊಳ್ಳುತ್ತಿರುವುದರ ಚಿತ್ರಣವಿದೆ. ಮಾತುಗಾರಿಕೆ ವ್ಯಾಪಕವಾಗಿದ್ದ ಒಂದು ಸಮಾಜ (ಅನೇಕ ಸಮುದಾಯಗಳು ಸೇರಿದಂತೆ), ಸಂಸ್ಕೃತಿಗಳ ಕನ್ನಡ ಸಮಾಜ, 'ಮಾತನ್ನು ಬಳಸುವ ಸಮಯ' ಸಂದರ್ಭ ಕಡಿಮೆ ಮಾಡಿಕೊಂಡು. 'ಮಾತನ್ನು ಕೇಳಿಸಿಕೊಳ್ಳುವ ಸಮಯ' ಹೆಚ್ಚಾದ ಒತ್ತಡದತ್ತ ವಾಲುತ್ತಿರುವುದನ್ನು ಕಡೆಯಲ್ಲಿ ಗುರುತಿಸಿದೆ. ಇದು ಸದ್ಯಕ್ಕೆ ಚಿಂತನೆಯನ್ನು ತಂದು ನಿಲ್ಲಿಸುತ್ತದೆ. ನಂಬಿಕೆಗಳನ್ನು ಕಟ್ಟುವಂತೆ ಕೆಡುವುವುದೂ ಒಂದು ಕ್ರಮ. ಹೊಸ ನಂಬಿಕೆ ಕಟ್ಟಲು ಹಳೆಯ ಹಿತವಾದ ನಂಬಿಕೆ ಕೆಡುವುದು ಅನಿವಾರ್ಯ. ಕೆ.ವಿ.ಎನ್. ಈ ಅಪ್ರಿಯವಾದ ಕೆಲಸವನ್ನು ದಿಟ್ಟವಾಗಿ, ನಮ್ರತೆಯಿಂದ ಮಾಡಿದ್ದಾರೆ.

ಹೋಲಿಕೆಗಾದರೂ ಇತ್ತೀಚಿನ ತನಕ ಕನ್ನಡದ ವಿದ್ವಾಂಸರು, ಪಂಡಿತರು ಭಾಷೆಯನ್ನು, ಜಗತ್ತನ್ನು ನೋಡಿದ ರೀತಿಯನ್ನು ಬರೆದಿದ್ದರೆ ಉಪಯುಕ್ತವಾಗುತ್ತಿತ್ತು. ಹಾಗೆಯೇ ಕನ್ನಡದಲ್ಲಿ ಭಾಷಾಶಾಸ್ತ್ರಜ್ಞರು ಏಕೆ ಬರಲಿಲ್ಲ. ಇರುವ ಆ ರೀತಿಯ ಜನರ ವೈಶಿಷ್ಟ್ಯ ಮತ್ತು ದೌರ್ಬಲ್ಯಗಳನ್ನು ಕುರಿತು ಸಾಕಷ್ಟು ಬರೆಯಬಹುದಿತ್ತು. ಹೊಸ ಮಾಧ್ಯಮಗಳು, ಹೊಸ ಆರ್ಥಿಕ ರಚನೆ, ಹೊಸ ರೀತಿಯ ಸಾಮಾಜಿಕ ತಳಮಳಗಳಿರುವ ಕಾಲದಲ್ಲಿ ಕಾಲದ ಕಲಸುವಿಕೆಯ ಅಬ್ಬರದಲ್ಲಿ ನಾರಾಯಣರ ಬರಹ ಸ್ವಲ್ಪ ಸಪ್ಪೆಯಾಗಿ ಕಾಣಿಸುತ್ತದೆ. ಆದರೆ ಇದು ಕೇವಲ ಬರೆದವರ ಹೊಣೆಯಾಗಲಿ, ಸಮಸ್ಯೆಯಾಗಲಿ ಅಲ್ಲ. ಕನ್ನಡದ ಮಾತಿಗೆ ಘೋಷದ್ವನಿ ಬರುವ ಕಾಲ ದೂರವಿದೆ ಎನ್ನುವ ಲಯ ಇಲ್ಲಿನ ಬರಹದಲ್ಲಿದೆ.

ಕಾಡು ವಿಮರ್ಶೆ ಮತ್ತು ನೆಲಕಚ್ಚಿದ ಪ್ರೀತಿ



ನೆಲ ಮುಟ್ಟುವ ಪ್ರೀತಿ
ಲೇ : ವಿ. ಚಂದ್ರಶೇಖರ ನಂಗಲಿ
ಪ್ರ : ಡಾ. ಎಂ. ಬೈರೇಗೌಡ
ಬೆಲೆ : ರೂ. ೧೬೦/-, ಪುಟ: ೨೨೦

'ನೆಲ ಮುಟ್ಟುವ ಪ್ರೀತಿ' ಚಂದ್ರಶೇಖರ ನಂಗಲಿಯವರ ಪಿ.ಎಚ್.ಡಿ. ಪ್ರಬಂಧ. ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಬಸವರಾಜ ಕಲ್ಗುಡಿಯವರ ಮಾರ್ಗದರ್ಶನದಲ್ಲಿ ಮಂಡಿಸಿದ್ದು. ನಂಗಲಿ ಈ ಹಿಂದೆ ಮಾರ್ಕ್ಸ್‌ವಾದದ ದಾರಿ ಹಿಡಿದು ಕಾವ್ಯ, ಸಾಹಿತ್ಯಗಳನ್ನು ವಿಮರ್ಶೆಗೆ ಒಳಪಡಿಸಿದವರು. ಕಾಡು, ಗುಡ್ಡ ಎಂದು ಅಲೆಯುವ ಈ ಜೀವಿಯನ್ನು 'ಕಾಡು ವಿಮರ್ಶಕ' ಎನ್ನಬಹುದು.

'ನೆಲ ಮುಟ್ಟುವ ಪ್ರೀತಿ' ಓದಿದರೆ ಓದುಗರು ಒಂದು ಪುಸ್ತಕದಿಂದ ಏನನ್ನು ನಿರೀಕ್ಷಿಸುತ್ತಾರೆ ಎಂಬ ಪ್ರಾಥಮಿಕ ಅಂಶ ನಂಗಲಿಯವರಿಗೆ ತಿಳಿದಿಲ್ಲ ಎನಿಸುತ್ತದೆ. ಪಿ.ಎಚ್.ಡಿ.ಗೆ ಮಂಡಿಸಿದ ಮೂಲ ಪ್ರಬಂಧದ ಆಕಾರ ಹೇಗಿತ್ತೋ ಗೊತ್ತಿಲ್ಲ. ಈಗಿರುವಂತೆ ಈ ಗ್ರಂಥ ಕಾಡುಕಾಡಾಗಿದೆ. 'ಚಾರಣ ಸಾಹಿತ್ಯ' ಎಂಬ ಹೊಸ ಪ್ರಕಾರವೊಂದನ್ನು ನಂಗಲಿ ಸೃಷ್ಟಿಸಿಕೊಂಡಿದ್ದಾರೆ. ಅದಕ್ಕೆ ಗೊ.ರು.ಚೆನ್ನಬಸಪ್ಪನವರ ಒಂದು ಭಾಷಣವನ್ನು ಆಧರಿಸಿದ್ದಾರೆ! ತಮ್ಮ ದಾರಿಯ ಬಗ್ಗೆ ನಂಗಲಿ ಹೇಳುವ ಮಾತು ಗಮನಿಸಿ– "ರೂಢಿಗಟ್ಟ ಹೊಸ ಆಲೋಚನೆ ಮತ್ತು ವಿಭಿನ್ನ ವಿಚಾರಗಳು ಎಷ್ಟೋ ವೇಳೆ ಅಪಚಾರಗಳಾಗಿ ಅಥವಾ ಅನಾಚಾರಗಳಾಗಿ ಕಾಣಿಸುವುದುಂಟು. ಸಾಹಿತ್ಯವನ್ನು ಕುರಿತು ಹೊಸ ಓದುಗಳು ಮತ್ತು ಓದುವ ಹೊಸ ಬಗೆಗಳು ಈ ನಿಟ್ಟಿನಲ್ಲಿ ಗಮನಾರ್ಹ ಚಿಂತನೆಗಳಾಗಿವೆ. ಇದನ್ನು ಅಧಿವಿಮರ್ಶೆ (meta-criticism) ಎಂದು ಗುರುತಿಸಬಹುದು. ರೂಢಿಬದ್ಧವೆನ್ನಬಹುದಾದ ಸಮಕಾಲೀನ ಶೈಕ್ಷಣಿಕ ವ್ಯಾಸಂಗ ಮತ್ತು ಸಾಹಿತ್ಯ ವಿಮರ್ಶೆಗಳ ನೆಲೆಯನ್ನು ಉಲ್ಲಂಘಿಸುವುದರ ಮೂಲಕವೇ ಬಗೆಬಗೆಯ ಚಿಂತನಾ ಕ್ರಮಗಳು ಪ್ರಕಟಗೊಳ್ಳುತ್ತವೆ. ವಾಸ್ತವವಾಗಿ, ವಿಮರ್ಶೆಯ ಇತಿಹಾಸವೆಂದರೆ ಇಂಥ ಚಿಂತನಾ ಕ್ರಮಗಳ ಅಧ್ಯಯನವೆಂದೇ ಹೇಳಬೇಕಾಗುತ್ತದೆ." ಹೊಸ ಓದನ್ನು ಇಂಥ ಬರಹ ಎಷ್ಟು ಭಾರವಾಗುವಂತೆ, ಲವಲವಿಕೆ ಕೊಲ್ಲುವಂತೆ ಮಾಡುತ್ತದೆ ಎಂದು ಬಿಡಿಸಿ ಹೇಳಬೇಕಿಲ್ಲ.

ಅಧ್ಯಯನಕ್ಕೆ ಆರಿಸಿಕೊಂಡಿರುವ ಮಾದರಿಗಳು ಅವವೇ. ಪಂಪ, ವಚನಕಾರರು, ಹರಿಹರ, ರಾಘವಾಂಕ, ಲೋಕಸಂಚಾರಿ ಸರ್ವಜ್ಞ, ಕುವೆಂಪು, ಬೇಂದ್ರೆ, ಕಾರಂತ, ಬಿ.ಜಿ.ಎಲ್.ಸ್ವಾಮಿ, ತೇಜಸ್ವಿ, ಓ.ಎಲ್.ನಾಗಭೂಷಣಸ್ವಾಮಿ. 'ನೆಲ ಮುಟ್ಟುವ ಪ್ರೀತಿ' ಎಂದಿನಂತೆ ನಂಗಲಿಯವರ ಅಸ್ಖಲಿತ ಶೈಲಿಯಲ್ಲಿದೆ. ಎಪ್ಪತ್ತರ ದಶಕದ ಬಂಡಾಯ ದಲಿತ ಚಳವಳಿಯನ್ನು Red-reading ನೆಲೆ ಎನ್ನುವ ನಂಗಲಿ, ತೊಂಬತ್ತರ ದಶಕದ ಸಾಹಿತ್ಯವನ್ನು, ಓದನ್ನು green reading ಎಂದು ನೋಡಬೇಕೆಂದು ತಿಳಿಸುತ್ತಾರೆ. ಅಸಲಿಗೆ ಇಡೀ ಪುಸ್ತಕ ಜಾಲಾಡಿದರೂ Red, Greenಗಳ ಮೂಲ ಯಾವುದು ಎಂದು ತಿಳಿಯುವುದಿಲ್ಲ. Red, ಅಂದರೆ ಕ್ರಾಂತಿ, ಅಥವಾ ಕಮ್ಯುನಿಸಂ ಎಂದುಕೊಂಡರೆ. Greenಗಳ ಮೂಲ ಯಾವುದು ಎಂದು ತಿಳಿಯುವುದಿಲ್ಲ Red, ಅಂದರೆ ಕ್ರಾಂತಿ, ಅಥವಾ ಕಮ್ಯುನಿಸಂ ಎಂದುಕೊಂಡು, Green ಅನ್ನು ಹಸಿರು, ಪರಿಸರ ಎಂದಿಟ್ಟುಕೊಂಡರೂ ಸಮಸ್ಯೆ ಬಗೆ ಹರಿಯುವುದಿಲ್ಲ. ರಕ್ತ, ಹಿಂಸೆ, ದಿಗ್ಭ್ರಮೆ ಇರುವ ಪಂಪನ ಕಾವ್ಯವಾಗಲಿ, ಮಧ್ಯಕಾಲದ ಯಾವುದೇ ಕೃತಿಗಳಾಗಲಿ ಹಾಗೆ ಒಂದು ನೇರ ಓದಿಗೆ ದಕ್ಕುವುದಿಲ್ಲ. ಪಂಪನಲ್ಲಿ 'ಮನುಷ್ಯ ಕೇಂದ್ರ'ಕ್ಕಿಂತ

'ಜೀವಕೇಂದ್ರ' ಹುಡುಕಾಡುವ ಮಾತುಗಳು ಬೊಗಳೆಯಾಗಿವೆ. ಕರ್ಣನ ಸತ್ಯನಿಷ್ಠೆ, ದುಂಬಿಗಳು ತಾವರೆ ಮುದುಡುವಾಗ ಅದರ ಕೈ ಬಿಡಬಾರದು ಎಂದು ಕಮಲದೊಳಗೆ ಉಳಿಯುವಾಗ ತೋರಿಸುವ (ನಂಗಲಿ ತೋರಿಸುವಂತೆ) ಸತ್ಯ ನಿಷ್ಠೆ ಇದರಲ್ಲಿ ಯಾವ ದೊಡ್ಡ ಮೌಲ್ಯವಿದೆ, ಜೀವಕೇಂದ್ರವಿದೆ? ಸ್ವಾಮಿ ನಿಷ್ಠೆ ಮತ್ತು ಆಯ್ದ ಕೃತಿಗಳಲ್ಲಿ ಮನುಷ್ಯರು ತೋರಿಸುವ ಸತ್ಯವಂತಿಕೆಯನ್ನು ಪರಮಾದರ್ಶ ಎಂದು ವ್ಯಾಸ, ಪಂಪ ಹೇಳಿಕೊಂಡು ಬಂದಿದ್ದಾರೆ. ಈ ಸಾಂಪ್ರದಾಯಿಕ ಮೌಲ್ಯಗಳ ಭಜನೆಯನ್ನೇ ನಂಗಲಿ ಅಧಿವಿಮರ್ಶೆ ಎಂದು ಕರೆದರೆ ಹಾಸ್ಯಾಸ್ಪದವೆನಿಸುತ್ತದೆ. ಹಳೆಗನ್ನಡವನ್ನು ಓದುವವರ ಸಂಖ್ಯೆಯೇ ಈಗ ಕಮ್ಮಿ, ಓದಿದವರು ಏಳು ಬಣ್ಣಗಳಲ್ಲಿ ಯಾವ ಬಣ್ಣದ ವಿಮರ್ಶೆಯನ್ನಾದರೂ ಮಾಡಬಹುದು. ನಂಗಲಿಯವರ ಈ ಚಾರಣ 'ದರ್ಶನ'ದಲ್ಲಿ ತಿರಸ್ಕಾರ ಯೋಗ್ಯವಾದ ಹತ್ತಾರು ಪುಟಗಳಿವೆ. ಇದಕ್ಕೆ ಕಾರಣ ತೀರಾ ಬೌದ್ಧಿಕತೆಯ ಪೋಸು ಮತ್ತು ಈಗಾಗಲೇ ರೂಢಿಗತವಾಗಿರುವ ಸಮಾಜವಾದ, ಮಾನವತಾವಾದಗಳನ್ನೇ 'ಕಾಡು ವಿಮರ್ಶೆ'ಯ ಮೂಲಕ ಮುಚ್ಚಿಟ್ಟು ಹೇಳಲಾಗಿದೆ: ಉದಾಹರಣೆಗೆ

೧. ಉಯ್ಯಾಲೆ ಸಂಕಲನದ 'ದಬ್ಬಾಳಿಕೆಗೆ' ಕವನ ಅಮೆರಿಕಾ ದೇಶದ ಬಿಗ್ ಬಾಸ್ ನೀತಿಯ ವ್ಯಾಖ್ಯಾನವಾಗುತ್ತದೆ (ಪುಟ ೧೦೭)
೨. ಕುವೆಂಪು ಅವರ 'ಹೀರೆಯ ಹೂವು' ಕವನ "ಹೀರೆಯ ಹೂವಿನ ಪ್ರಿಸಂ ಮೂಲಕ ಆಧುನಿಕರ ಉಪಯೋಗ ಪ್ರಧಾನವಾದ ಮತ್ತು ಉಪಭೋಗ ದೃಷ್ಟಿಕೋನದ ಜೀವನಶೈಲಿಯನ್ನು...." ಹೂವು ಅದರ ಸುತ್ತ ಇರುವ ಕವಿತೆ ಪ್ರಿಸಂ ಆಗುತ್ತದೆ! (ಪು.೧೦೦)

ವಾಕ್ಯಗಳನ್ನು ಬರೆಯುವಾಗ ತೋರಿಸಬೇಕಾದ ಕನಿಷ್ಠ ಸಂಯಮ ಕಾಣೆಯಾಗಿರುವುದಕ್ಕೆ ಅನೇಕ ಉದಾಹರಣೆಗಳಿವೆ ಬಿ.ಜಿ.ಎಲ್.ಸ್ವಾಮಿ ಮತ್ತು ತೇಜಸ್ವಿಯ ಕೊಡುಗೆಯನ್ನು 'ಹಸಿರು ಓದು' ಮೂಲಕ ಹೇಳುವ ಭಾಗ ಸಾಮಾನ್ಯ ಬರಹ ಜಾಲದಲ್ಲೇ ಅತ್ಯುತ್ತಮ. ಅಲ್ಲೂ ಅನೇಕ ವಿಸಂಗತಿಗಳಿವೆ. ಡಿ.ವಿ.ಜಿ.ಯವರಿಗೂ 'ಹಸಿರುಹೊನ್ನು' (ಜಿ.ಜಿ.ಎಲ್.ಸ್ವಾಮಿ) ಕೃತಿ ಪ್ರಕಟಣೆಗೂ ಸಂಬಂಧ ಪೋಣಿಸುವುದು ನೋಡಿ: "೧೯೭೫ರಲ್ಲಿ ಡಿ.ವಿ.ಜಿ.ಅವರ ನಿಧನಾನಂತರ ೧೯೭೬ರಲ್ಲಿ 'ಹಸುರು ಹೊನ್ನು' ಪ್ರಕಟವಾದಾಗ ದೇಶದಲ್ಲಿ ತುರ್ತು ಪರಿಸ್ಥಿತಿಯ ಕಾವು ಏರುತ್ತಿತ್ತು." (ಪುಟ.೧೨೨) ಆತ್ಮೀಯತೆ, ಒಳನೋಟ ಎರಡೂ ಇಲ್ಲದ ಬರಹಕ್ಕೆ ಈ ಸಾಲು ಸೂಚನೆಯಾಗುತ್ತದೆ. ಮಾತಿನ ದುರ್ಬಳಕೆ, ನಿರ್ಲಕ್ಷ್ಯಕ್ಕೆ ಒಳಗಾಗಿದ್ದ ಲೇಖಕ, ಕೃತಿಗಳನ್ನು ತಾನು ಎತ್ತಿ ಹಿಡಿಯುತ್ತಿದ್ದೇನೆ ಎಂಬ ಹುಂಬತನ ಇಡೀ ಬರವಣಿಗೆಯಲ್ಲಿ ರಾಚುತ್ತದೆ. ಈ ಪುಸ್ತಕ ಓದಿದಾಗ ಕನ್ನಡದಲ್ಲಿ ಹೆಚ್ಚಾಗುತ್ತಿರುವ ಸಂಸ್ಕೃತಮಯ 'ಪಾಂಡಿತ್ಯಭಾರ'ದ, ತೋರುಗಾಣಿಕೆಯ ಬರಹಗಳು ನೆನಪಾಗುತ್ತವೆ. ಕಾಡು ಮೇಡಿನ ಅಲೆದಾಟವನ್ನು ಸಾಹಿತ್ಯದ ಅಭ್ಯಾಸಕ್ಕೆ ಒಳಪಡಿಸುವ ಅಗತ್ಯವೇನು ಎಂದು ನಂಗಲಿಯವರು ಎಲ್ಲೂ ಸೂಚನೆ ಕೊಡುವುದಿಲ್ಲ. ಎಲ್.ಬಸವರಾಜು ಅವರ ಪಂಪ ಪಾಂಡಿತ್ಯವನ್ನು ಅಲ್ಲಲ್ಲಿ ಎದುರುಗೊಳ್ಳುವುದು ಈ ಲೇಖಕ ಆಳಕ್ಕೆ ಇಳಿಯಬಲ್ಲ ಎಂಬುದರ ಸೂಚನೆ. ಆದರೆ ಸೂಚನೆ ಕೇವಲ ಸೂಚನೆ ಮಾತ್ರ, ತೇಜಸ್ವಿ, ಬಿ.ಜಿ.ಎಲ್.ಸ್ವಾಮಿ ಕುರಿತು ಬರೆದ ಭಾಗಗಳ ಕಸುವು, ಒಳನೋಟ ಉಳಿದ ಕಡೆ ಕಾಣುವುದಿಲ್ಲ. ಆಧುನಿಕ ಲೇಖಕರಾದರೂ ಹಸಿರನ್ನು ತಮ್ಮ ಜೀವನದಲ್ಲಿ ಹೇಗೆ ಒಳಗೊಂಡಿದ್ದರು, ಅವರ ಬರಹಕ್ಕೂ ಬದುಕಿಗೂ ಈ ನಿಟ್ಟಿನಲ್ಲಿ ಏನು ಬಿರುಕಿತ್ತು ಎಂಬುದನ್ನು ಹೇಳಲು ಇದ್ದ ಸಮೃದ್ಧ ಅವಕಾಶವನ್ನು ನಂಗಲಿ ಮಿಸ್ ಮಾಡಿಕೊಂಡಿದ್ದಾರೆ. ಹುಸಿ ಕ್ರಾಂತಿಕಾರಿ ಧೋರಣೆ ಉಳ್ಳ ಈ ಕೃತಿ ಕನ್ನಡ ಸಾಹಿತ್ಯ ಕುರಿತ ಜೊಳ್ಳು ಓದಿಗೆ ಇತ್ತೀಚಿನ ಉದಾಹರಣೆ. ನಂಗಲಿಯವರ ಬರಹದ ಚಾರಣದಲ್ಲಿ ಇದು ಮರೆತ ಹೆಜ್ಜೆಯಾಗಲಿ. ಸಮಕಾಲೀನ ಜೀವನ, ಸಂಸ್ಕೃತಿ, ಪ್ರಶ್ನೆಗಳನ್ನು ನಾಡಿನ ಮೂಲಕವೇ ಎದುರಿಸಬೇಕಾದ ದೃಷ್ಟಿ, ಚೈತನ್ಯ ಅವರ ವಿಮರ್ಶೆಗೆ ಬರಬಹುದೇನೋ?

■ **ಡಾ. ಜಿ.ಬಿ. ಹರೀಶ**

C/o ಸಂಚಯ, ಬೆಂಗಳೂರು ಫೋನ್: ೯೯೮೦೬೪೩೭೦೪

ಪ್ರತಿಕ್ರಿಯೆ

ನಮಸ್ಕಾರ, ಹೇಗಿದ್ದೀರಾ?

ತಡವಾಗಿ ಸಿಕ್ಕ 'ಸಂಚಯ'(೭೪)ವನ್ನು ಈಗಷ್ಟೆ ಓದಿದೆ. 'ಸಂಚಯ'ದ ಓದುಗಳಾಗಿ ವಿನಮ್ರಳಾಗಿ ಕೆಲವು ಮಾತುಗಳನ್ನು ಹೇಳುವುದು ನನ್ನ ಜವಾಬ್ದಾರಿಯೆಂದು ತಿಳಿದು ಬರೆಯುತ್ತಿದ್ದೇನೆ.

ನಾವು ಒಬ್ಬರನ್ನು ವಿಮರ್ಶಿಸುವಾಗ ಅತ್ಯಂತ ಸ್ಪಷ್ಟ, ಎಚ್ಚರ ಹಾಗೂ ಜವಾಬ್ದಾರಿಯಿಂದ ಗೊಂದಲಗಳಿಲ್ಲದೆ ಮಾತನಾಡಬೇಕಾಗುತ್ತದೆ. ಒಬ್ಬರ ಬಗ್ಗೆ ಸಾರ್ವಜನಿಕವಾಗಿ ಒಂದು ಪತ್ರಿಕೆಯ ಸಂಪಾದಕರಾಗಿ ತಳೆಯುವ ನಿಲುವುಗಳಿಗೆ ಆ ಮಟ್ಟಿನ ಯೋಗ್ಯತೆಯೂ ಇರಬೇಕಾಗುತ್ತದೆ.

ಈ ಮಾತುಗಳನ್ನು ಹೇಳಲು ಕಾರಣ ಜುಲೈ ೨೦೦೭ರ 'ಸಂಚಯ'ದಲ್ಲಿ ಕಲಾವಿದರಾದ ಎಂ. ಎಸ್. ಮೂರ್ತಿಯವರ 'ದೇಸಿ ನಗು' ಪುಸ್ತಕವನ್ನು ಪರಿಚಯಿಸುವಾಗ ಆಡಿರುವ ನಿಮ್ಮ ಮಾತುಗಳು. "ನಮ್ಮ ಸಾಹಿತ್ಯ ಜಗತ್ತಿನ ಪ್ರೊಫೆಷನಲ್ ಮುನ್ನುಡಿ ಹಾಗೂ ಬೆನ್ನುಡಿಕಾರರ ಮಾತುಗಳಿಂದ ಪುಸ್ತಕವನ್ನು ಸಜ್ಜುಗೊಳಿಸಲಾಗಿದೆ. (ಎಚ್. ಎಸ್. ಆರ್. ಮತ್ತು ಅನಂತಮೂರ್ತಿ)" ಎಂದಿದ್ದೀರಿ. ಇಂಥ ಬೀಸು ಹೇಳಿಕೆಯನ್ನು ಕೊಡುವುದು ಎಷ್ಟು ಸರಿ? ದೊಡ್ಡವರು ಕಿರಿಯರನ್ನು ಓದುವುದಿಲ್ಲವೆಂದು ದೂರಿ, ಆಸ್ಥೆಯಿಂದ, ಪ್ರೀತಿಯಿಂದ ಬರೆದು ಪ್ರೋತ್ಸಾಹಿಸಿದರೆ ಈ 'ಪ್ರೊಫೆಷನಲ್' ಪಟ್ಟ! ಇಷ್ಟಕ್ಕೂ 'ಪ್ರೊಫೆಷನಲ್' ಎಂದರೆ ಏನು? ಚಂದಾ ಎತ್ತಿ ಪತ್ರಿಕೆ ನಡೆಸುತ್ತಿರುವ ನಿಮಗೆ 'ಪ್ರೊಫೆಷನಲ್' ಪದ ಚೆನ್ನಾಗಿ ಒಪ್ಪುತ್ತದೆ.

ನನಗೆ ತಿಳಿದಿರುವಂತೆ (ಯಾಕೆ ಅನೇಕರಿಗೆ ತಿಳಿದಿರುವಂತೆ) ಎಚ್.ಎಸ್.ಆರ್. ಪ್ರೀತಿಯಿಂದ ಮುನ್ನುಡಿ ಬರೆಯುವುದು ಹೊಸಬರನ್ನು, ಯುವ ಬರಹಗಾರರನ್ನು ಪ್ರೋತ್ಸಾಹಿಸಲು; ಪ್ರಚಾರಕ್ಕಾಗಿ ಅಲ್ಲ! ಅದಕ್ಕಾಗಿ ಅವರು ಹಣ ಪಡೆಯುವುದಿಲ್ಲ. ಮುನ್ನುಡಿಯನ್ನು 'ಕೇಳಿ' ಬರೆಸಿಕೊಂಡವರೂ ಕೂಡ ಹಣ ಕೊಟ್ಟಿರುವುದಿಲ್ಲ. (ಬೇಕಾದರೆ ನೀವೊಮ್ಮೆ ಕೇಳಿ ಸ್ಪಷ್ಟಪಡಿಸಿಕೊಳ್ಳಬಹುದು.) ಜೊತೆಗೆ 'ಇಲ್ಲಿ ಮುನ್ನುಡಿ ಬರೆದುಕೊಡಲಾಗುತ್ತದೆ.' ಎಂಬ ಬೋರ್ಡನ್ನು ಅವರ ಮನೆಯ ಮುಂದೆ ಹಾಕಿಕೊಂಡಿಲಾರರು, ಪ್ರೊಫೆಷನಲ್ಲಾಗಿ! ಕನ್ನಡ ಸಾಹಿತ್ಯ ಲೋಕದ ಗಂಭೀರ ಓದುಗರೂ, ಚಿಂತಕರೂ, ಯುವ ಬರಹಗಾರರ ಪ್ರೋತ್ಸಾಹಕರೂ ಆದ ಕನ್ನಡದ ಹಿರಿಯ ಲೇಖಕರ ಬಗ್ಗೆ ಬೇಜವಾಬ್ದಾರಿಯುತವಾಗಿ ಸಾಹಿತ್ಯ ಪತ್ರಿಕೆಯ ಸಂಪಾದಕರಾಗಿ ತಳೆದ ನಿಮ್ಮ ಹುಗುರವಾದ ಧೋರಣೆ ಖಂಡನೀಯ. ಸಾಹಿತ್ಯ ವಿಮರ್ಶೆಯ ನೈತಿಕತೆಯನ್ನೇ ತೂರಿ ನಿಮ್ಮ ದಾರ್ಷ್ಟ್ಯ ನಿಲುವುಗಳಿಂದ ನಿಮ್ಮ ಕಿರಿಯರಿಗೆ – ದುಡ್ಡು ಕೊಟ್ಟು ಕೊಂಡು ಓದುವ ಕಿರಿಯ ಮನಸುಗಳಿಗೆ– ನೀವು ತಲುಪಿಸುತ್ತಿರುವುದಾದರೂ ಏನನ್ನು? ಪತ್ರಿಕೆಯೊಂದನ್ನು ಬಿಟ್ಟು ಉಳಿದಂತೆ ಆ ಮಟ್ಟಿನ ಕೆಲಸವನ್ನೇ ಮಾಡಿರದ ನಿಮಗೆ ಹೀಗೆ ದಾರ್ಷ್ಟ್ಯದಿಂದ ಮಾತನಾಡಲು ಯಾವ ಅಧಿಕೃತತೆಯಿದೆ? ನಾಲ್ಕು ಜನ ಬರೆದರೆ ಮಾತ್ರ ನಿಮ್ಮ ಪತ್ರಿಕೆಗೆ ಉಳಿವು ಎಂಬುದು ನೆನಪಿರಲಿ, ಪತ್ರಿಕೆಯೇ ಎಲ್ಲವೂ ಅಲ್ಲ.

ಲಂಕೇಶ್, ತೇಜಸ್ವಿ ಮುಂತಾದವರ ಬಗ್ಗೆ ಅವರು ಬದುಕಿದ್ದಾಗ ನನ್ನೊಂದಿಗೆ ನೀವು ಮಾತನಾಡುವಾಗ ಕೇವಲವಾಗಿ ಕಂಡು, ಅವರ ಸಾವಿನ ನಂತರ ಹಾಡಿ ಹೊಗಳಿ ಪತ್ರಿಕೆಯನ್ನು ಪುಸ್ತಕವನ್ನಾಗಿಯೂ ಮಾಡಿ ಲೇಖಕರಿಗೆ ಯಾವ ರಾಯಲ್ಟಿಯನ್ನೂ ಕೊಡದೆ ಪ್ರಚಾರ ಗಿಟ್ಟಿಸುತ್ತೀದ್ದೀರಿ! ನೀವು ಪ್ರಾಮಾಣಿಕ ಸಂಪಾದಕರೇ ಆಗಿದ್ದರೆ ನಿಮ್ಮ ಮಾತುಗಳನ್ನೂ ಕೃತಿಯಲ್ಲಿ ದಾಖಲಿಸಬೇಕಾಗಿತ್ತು. ಆದರೆ ನೀವು ಹಾಗೆ ಮಾಡಿಲ್ಲವಾದ್ದರಿಂದ ನಿಮ್ಮ ದ್ವಂದ್ವ ನಿಲುವುಗಳನ್ನು ಗೌರವಿಸುವುದು ಹೇಗೆ?

ಒಂದು ಕೃತಿಯ ಬಗ್ಗೆ ಯಾರೂ ತಮ್ಮ ಅಭಿಪ್ರಾಯಗಳನ್ನು ಹೇಳಲು ಸ್ವತಂತ್ರರು. ತಮ್ಮದೇ ಶ್ರದ್ಧೆಯಿಂದ ಕೆಲಸ ಮಾಡಿಕೊಂಡು ಬಂದವರನ್ನೆಲ್ಲ ಈ ಮಟ್ಟಿನ ದಾರ್ಷ್ಟ್ಯದಿಂದ ಒಂದು ಪತ್ರಿಕೆಯ ಸಂಪಾದಕರಾದ ಮಾತ್ರಕ್ಕೆ ಮಾತನಾಡುವುದು ಎಷ್ಟರ ಮಟ್ಟಿಗೆ ಸರಿ?

ಈ ಪತ್ರವನ್ನು ಮುಂದಿನ ಸಂಚಿಕೆಯಲ್ಲಿ 'ಜವಾಬ್ದಾರಿಯರಿತ' ಸಂಪಾದಕರಾಗಿ ಪ್ರಕಟಿಸುತ್ತೀರೆಂದು ನಂಬುತ್ತೇನೆ. ನಿಮ್ಮ ಮಾತು-ಕೃತಿ ಎರಡೂ ಒಂದಾದರೆ ಮಾತ್ರ/ ನಿಮ್ಮ ನಿಲುವುಗಳು ಬದಲಾದರೆ ಮಾತ್ರ ಇನ್ನು ಮುಂದೆ ನನಗೆ ನಿಮ್ಮ ಪತ್ರಿಕೆಯನ್ನು ಕಳಿಸಿಕೊಡಿ. ಇಲ್ಲವಾದಲ್ಲಿ ನಿಮ್ಮ ಪತ್ರಿಕೆಯನ್ನು ಓದುವ ಅಗತ್ಯ ನನಗೆ ಕಾಣಿಸುತ್ತಿಲ್ಲ. ನನ್ನ ಚಂದಾ ಹಣ ಮುಗಿದಿದ್ದರೆ ತಿಳಿಸಿ ಎಂದು ಕೇಳುತ್ತಲೇ ಇದ್ದೇನೆ. ನೀವಿನ್ನೂ ಹೇಳಿಲ್ಲ.

ವಂದನೆಗಳೊಂದಿಗೆ,

ವಿಶ್ವಾಸವಿರಲಿ

ಬೆಂಗಳೂರು ಗೀತಾ ಡಿ.ಸಿ.

ಪ್ರಿಯ ಪ್ರಹ್ಲಾದ್,

ನಿಮ್ಮ ಪತ್ರಿಕೆಗೆ ಚಂದಾ ಕೊಡುವುದು ನಮ್ಮ ಕರ್ತವ್ಯ. ಯಾವುದೇ ಕಾರಣದಿಂದ ಅದು ಮರೆತು ಮುಂದೆ ಹೋಗಬಾರದು. ಈ ಪತ್ರದ ಜೊತೆ ಮುಂದಿನ ಐದು ವರುಷಗಳ ಚಂದಾ ರೂ.650/- ಇದೆ. ದಯವಿಟ್ಟು ಸ್ವೀಕರಿಸಿ.

"ಸಂಚಯ" ದಂತಹ ಸಾಹಿತ್ಯ ಪತ್ರಿಕೆಗಳು ನಮ್ಮ ಸಂಸ್ಕೃತಿಯ ಹೊಸ ದನಿಗಳನ್ನು ಜೀವಂತವಾಗಿಟ್ಟು ಬೆಳೆಸಲು ಸಹಕಾರಿಯಾಗಿವೆ. ಅನೇಕ ಹೊಸ ಬರಹಗಾರರಿಗೆ 'ಸಂಚಯ' ವೇದಿಕೆಯಾಗಿದೆ. ಹೀಗೆ ಹೊಸ ಬರಹಗಾರರು, ವಿಮರ್ಶಕರು ಕವಿಗಳನ್ನು ಕಾಣಿಸುವ ನೀವು ಕಳೆದ ಹತ್ತು ಸಂಚಿಕೆಯಿಂದ ಪ್ರಾರಂಭಿಸಿದ ಸಂಕಿರಣ ಬಹಳ ಒಳ್ಳೆಯ ಒಂದು ಕೆಲಸ ಇದು ಸಮಕಾಲೀನ ಮುಖ್ಯರನ್ನು ಗುರುತಿಸಲು ಕಾರಣವಾಗಿದೆ. ಕೇಶವ ಮಳಗಿ ಬರೆದುದನ್ನು ಬಿಡಿಬಿಡಿಯಾಗಿ ಓದುತ್ತಿದ್ದವರಿಗೆ, ಈ ಸಂಕಿರಣ ಒಂದು ಕೇಂದ್ರೀಕೃತ ಗಮನವನ್ನು ಅವರ ಬರಹಗಳಿಗೆ ನೀಡಿತು. ಹಿಂದೆ ಝುಂಜರವಾಡರ ಬಗ್ಗೆ ಹಾಗಾಯಿತು. ಬೆಂಗಳೂರಿನಿಂದ ದೂರ ಅವರಷ್ಟಕ್ಕೆ ಅವರು ಕವನ ಬರೆದುಕೊಂಡಿದ್ದರು. ಸಾಹಿತ್ಯದ ಪೊಲಿಟಿಕ್ಸ್‌ನಿಂದ ದೂರ ಇದ್ದರು. ನಿಮ್ಮ ಸಂಕಿರಣ ಅವರ ಬಗ್ಗೆ ಪುನಃ ಎಲ್ಲರ ಗಮನ ಹರಿಯುವಂತೆ ಮಾಡಿತು. ಈಗ ಅವರ ಹೊಸ ಸಂಕಲನ 'ಗಂಡಭೇರುಂಡ' ಓದುತ್ತಿದ್ದಾಗ ಸಂಕಿರಣದ ಲೇಖನಗಳೂ ನೆನಪಾದವು. ಇದೆಲ್ಲಾ ನಿಧಾನಕ್ಕೆ ಸಾಹಿತ್ಯದ ವಿಚಾರಗಳನ್ನು ಒಬ್ಬರಿಂದ ಇನ್ನೊಬ್ಬರಿಗೆ ದಾಟಿಸುವ ಉತ್ತಮ ಕೆಲಸ. ನಿಮಗೆ ಅದಕ್ಕಾಗಿ ಅಭಿನಂದನೆ ಹೇಳಬೇಕು.

ಇಂದು ಚರಿತ್ರೆ ಚಾರಿತ್ರ್ಯದ ಪ್ರಶ್ನೆಯಾಗಿದೆ. ಚರಿತ್ರೆಯಲ್ಲಿ ತಪ್ಪು ನಡೆದಿದೆ ಎಂಬ ಆರೋಪಕ್ಕೆ ಇಂದಿನವರು ಅನುಮಾನದ ಕೆಂಗಣ್ಣು ಎದುರಿಸಬೇಕಾಗಿದೆ. ಆದರೆ ಚರಿತ್ರೆಯಲ್ಲಿ ಅಸ್ಪೃಶ್ಯರಾಗಿ ದೂರ ಇದ್ದ ಪ್ರತಿನಿಧಿ ತಲಕಾವೇರಿಯಲ್ಲಿ ತೀರ್ಥ ತೆಗೆದುಕೊಳ್ಳಲಿಲ್ಲ ಎಂದು ಬಂದ ಒಂದು ಗುಂಪು ಬಾಟಲಿನಲ್ಲಿ ತೀರ್ಥದ ನೀರು ತೆಗೆದುಕೊಂಡು ಹೋಗಿ ದ್ವಾರಕಾನಾಥರಿಗೆ ಬಲಾತ್ಕಾರವಾಗಿ ಕುಡಿಸಿ ಕುಂಕುಮ ಹಚ್ಚಿದರೆಂದು ಪತ್ರಿಕಾ ವರದಿ ಬಂದಿದೆ. ಅದೇ ಚರಿತ್ರೆ ದಲಿತರಿಗೆ ತೀರ್ಥದ ಬಗ್ಗೆ ತಿರಸ್ಕಾರ ಹುಟ್ಟುವಂತಹ ಅಸ್ಪೃಶ್ಯ ಸಮಾಜವನ್ನು ತೀರ್ಥದ ಪಾವಿತ್ರ್ಯದ ನೆಪದಲ್ಲಿ ಕಟ್ಟಿತು ಎಂಬುದನ್ನು ಮರೆಯುತ್ತಾರೆ. ಒಂದು ಜನಾಂಗದ ಚರಿತ್ರೆಯ ಅನ್ಯಾಯಕ್ಕೆ ವರ್ತಮಾನದಲ್ಲಿ ಶಿಕ್ಷೆ ಆಗಬೇಕು. ಇನ್ನೊಂದು ದಲಿತ ವರ್ಗ ಚರಿತ್ರೆಯಲ್ಲಿ ಆದ ಅನ್ಯಾಯವನ್ನು ಮರೆತು ತೀರ್ಥಕ್ಕೆ ಕೈಯೊಡ್ಡಬೇಕು. ಒಂದೇ ವರ್ತಮಾನದ

ಇಬ್ಬರಿಗೆ ಇಬ್ಬಗೆಯ ನೀತಿ. ನೀವು ನಿಧಾನಕ್ಕೆ ಹಬ್ಬಿಸುವ ವಿಚಾರವಂತಿಕೆ ಚಿಂತನೆಯನ್ನು ಪ್ರಚೋದಿಸುವಂತಹುದು. ಇದು ಅನೇಕ ಹೊಸ ಬರಹಗಾರರು ತಿಳಿಯುತ್ತಿರುವ Anti Intellecual Position ಗೆ ವಿರೋಧವಾದ್ದು. ಆದಕ್ಕಾಗಿ ನಿಮಗೆ ಅಭಿನಂದನೆಗಳು.

ಬೆಂಗಳೂರು **ಎಸ್.ಆರ್. ವಿಜಯಶಂಕರ್**

ಪ್ರಿಯ ಪ್ರಹ್ಲಾದ್ ಅವರೆ,

ನಾನು ಬಹುದಿನಗಳ ಹಿಂದೆ 'ಸಂಚಯ'ದ ಚಂದಾ ಕಳಿಸಬೇಕೆಂದಿದ್ದೆ. ಸಮಯದ ಒತ್ತಡ ಮತ್ತು ನನ್ನ ಸೋಮಾರಿತನ ಸೇರಿ ಕಳುಹಿಸಲಾಗಲಿಲ್ಲ. ಈಗ ಈ ಪತ್ರದ ಜತೆ ೧೫೦೦/- ರೂ. ಇರಿಸಿದ್ದೇನೆ. ಇದು ಚಂದಾ ಅಲ್ಲ. ನಿಮ್ಮ ಜತೆ ನನ್ನ ಉಸಿರು!

ನೀವು, ನಿಮ್ಮ ಗೆಳೆಯರು ಸೇರಿ ಪುಟ್ಟ ರೀತಿಯಲ್ಲೇ ನಡೆಸುತ್ತಿರುವ ಸಾಹಸ ನನಗೆ ಮೆಚ್ಚುಗೆ ತಂದಿದೆ. ಈಚಿನ ಜೆ.ಕೆ. ರವೀಂದ್ರಕುಮಾರ್ ಸಂಕಲನ ಸಿಕ್ಕಿತು ಒಳ್ಳೆಯ ಪ್ರೊಡಕ್ಷನ್. ಇಂಥ ಪ್ರಯತ್ನಗಳು ಮತ್ತು ಕೆಲಸಗಳು ಆಗಬೇಕು. ಅದು ಆಗಲೆಂದು ಆಶಿಸುವೆ.

ಇನ್ನೇನು!

ಮನೆಮಂದಿಗೆ ನನ್ನ ನೆನಪು ಮಾಡಿಕೊಡಿ. ನಿಮ್ಮ ಕ್ರಿಯಾ ಪ್ರತಿಭೆ ನಮ್ಮಲ್ಲಿ ಸದಾ ಉತ್ಸಾಹ, ವಿವೇಕ ಮತ್ತು ಅಂತಃಕರಣ ಹೆಚ್ಚಾಗಲು ಅವಕಾಶವಾಗಲೆಂದು ಆಶಿಸುವೆ.

ನಿಮ್ಮವ

ಬೆಂಗಳೂರು **ಮಲ್ಲೇಪುರಂ ಜಿ.ವೆಂಕಟೇಶ್**

ಪ್ರಿಯ ಪ್ರಹ್ಲಾದ ಅವರಿಗೆ,

ನೀವು ನೀಡಿರುವ ಪುಸ್ತಕಗಳನ್ನು ಓದುತ್ತಿದ್ದೇನೆ. ಓದಿದ ಬಳಿಕ ನಿಮ್ಮನ್ನು ಕಂಡಾಗ ವಿಚಾರವನ್ನು ವಿನಿಮಯ ಮಾಡಿಕೊಳ್ಳೋಣ. ಆನಂದ ಝುಂಜರವಾಡರ ಬಗ್ಗೆ ನನಗೆ ಪರಿಚಯ ಸಾಕಷ್ಟು ಇದೆ. ಆದರೆ ರವೀಂದ್ರಕುಮಾರರ ಕವನಗಳನ್ನು ನಾನು ಓದಿರಲಿಲ್ಲ. ಈಗ ಅವಕಾಶವಾಗಿದೆ. ನಿಧಾನವಾಗಿ ಪೂರ್ತಿ ಓದುತ್ತೇನೆ.

ಈ ಸಾಲಿನ ಸಂಚಯವನ್ನು ಪೂರ್ತಿ ಓದಿದ್ದೇನೆ. ಶ್ರೀನಿವಾಸರಾಜು ಅವರ ಬಗ್ಗೆ, ಬೆಳ್ಳಿತೆರೆಯ ಬಗ್ಗೆ, ಕೇಶವ ಮಳಗಿ ಅವರ ಬಗ್ಗೆ ಉತ್ತಮವಾದ ಲೇಖನಗಳಿವೆ. 'ಅನುದೇವ' ಬಗ್ಗೆ ನಿರ್ಲಕ್ಷ್ಯವೇ ಸರಿಯಾದ ಪ್ರತಿಕ್ರಿಯೆ. ಮಳಗಿಯವರ ಪುಸ್ತಕಗಳನ್ನು ನಾನಿನ್ನೂ ಓದಿಲ್ಲ. ಓದಬೇಕು. ಪ್ರಯತ್ನ ಪಡುತ್ತೇನೆ. ಈ ಸಂಚಿಕೆಯ ಇತರ ಲೇಖನಗಳನ್ನು ಪರಿಶೀಲಿಸಿದ್ದೇನೆ.

ಇದರೊಡನೆ ನನ್ನ ಚಂದಾ, ಈ ವರ್ಷಕ್ಕೆ ಕಳಿಸಿದ್ದೇನೆ. ದಯಮಾಡಿ ಸ್ವೀಕರಿಸಿ.

ಇತಿ ತಮ್ಮವ

ಬೆಂಗಳೂರು **ಪ್ರೊ॥ ಜಿ. ವೆಂಕಟಸುಬ್ಬಯ್ಯ**

ಪ್ರಿಯ ಶ್ರೀ ಪ್ರಹ್ಲಾದ, ನಮಸ್ಕಾರ

'ಸಂಚಯ'ದ ೧೬ನೇ ಸಂಪುಟದ ಎರಡನೆಯ ಸಂಚಿಕೆ ೭೫ ನೋಡಿ ನಿಮ್ಮನ್ನು ಅಭಿನಂದಿಸಲು ಬರೆಯುತ್ತಿದ್ದೇನೆ. ಒಂದು ವಿಶಿಷ್ಟ ಯೋಜನೆಯನ್ನು ಸಮರ್ಥವಾಗಿ, ಸಾರ್ಥಕವಾಗಿ ರೂಪಿಸಿದ್ದೀರಿ. ಇಲ್ಲಿನ ಕವಿತೆಗಳನ್ನು ರಚಿಸಿದವರಲ್ಲಿ ಐವತ್ತು ವರ್ಷ ಮುಟ್ಟಿದವರೂ ಕಡಿಮೆ. ಕನ್ನಡ ಕಾವ್ಯದ ಇತ್ತೀಚಿನ

ಬೆಳೆಯ ವಿಷಯ ಪರಿಶೀಲಿಸುವಾಗ ಇದೊಂದು ಆಕರ ಪ್ರಕಟಣೆಯಾಗಿದೆ. ಒಂದು ಮೌಲಿಕ ಪ್ರಕಟಣೆಯನ್ನು ಕನ್ನಡಿಗರ ಕೈಯಲ್ಲಿರಿಸಿದ್ದೀರಿ.

ಕೆಲಸದ ಒತ್ತಡದಿಂದ, ಕಣ್ಣಿನ ತೊಂದರೆಯಿಂದ ನಾನು ಓದುವುದು ಕಡಿಮೆಯಾಗುತ್ತಲಿದೆ. ಓದುವುದು ಸಹ ಬಹಳ ಮಟ್ಟಿಗೆ ನನ್ನ ಕೆಲಸಗಳಿಗೆ ಅಗತ್ಯವಾದದ್ದು. ನನ್ನಂಥವನಿಗೆ ಈ ಸಂಕಲನ ಒಂದು ಉಡುಗೊರೆ.

ಮಿತ್ರರೆ, ನೀವು ಸದ್ದಿಲ್ಲದೆ ಬಹಳ ಮೌಲಿಕವಾದ ಕೆಲಸ ಮಾಡುತ್ತಿದ್ದೀರಿ. ನಿಮಗೆ ಎಲ್ಲ ಶುಭವಾಗಲಿ!

ಕವಿಗಳ ಹೆಸರುಗಳ ಅಕಾರಾದಿಯಾಗಿ ಕವನಗಳನ್ನು ಜೋಡಿಸಿರುವುದಕ್ಕೆ ವಂದನೆ.

ವಿಶ್ವಾಸದ

ಬೆಂಗಳೂರು **ಪ್ರೊ॥ ಎಲ್. ಎಸ್. ಶೇಷಗಿರಿರಾವ್**

ಪ್ರಿಯ ಪ್ರಹ್ಲಾದ್ ಅವರಿಗೆ ವಂದನೆಗಳು

ನೀವು ವಿಶ್ವಾಸದಿಂದ ಕಳಿಸಿದ ಕಾವ್ಯಸಂಭ್ರಮದ ಪ್ರತಿ ತಲುಪಿ ದಿನಗಳಾದರೂ ಬರೆಯಲಾಗಿಲ್ಲ. ಕ್ಷಮಿಸಿರಿ.

ಇದೊಂದು ಅತ್ಯಂತ ಉಪಯುಕ್ತ ಪ್ರಯತ್ನ. ಕನ್ನಡ ಕಾವ್ಯದ ಹೊಸ ದನಿಗಳನ್ನು ಇಷ್ಟೊಂದು ಸಂಖ್ಯೆಯಲ್ಲಿ ಕೇಳುವುದೇ ಒಂದು ಸಂಭ್ರಮ. ಈ ದನಿಗಳಲ್ಲಿ ಕೆಲವು ನನಗೆ ಪರಿಚಿತವಾದರೆ, ಬಹಳಷ್ಟು ಹೊಸತು.

ನಿಮ್ಮ ಆಯ್ಕೆ ಚೆನ್ನಾಗಿದೆ. ವರ್ತಮಾನದ ಅನುಭವಕ್ಕೆ ನೀವು ಕೊಟ್ಟ ಆದ್ಯತೆ ಸಮರ್ಪಕವಾದುದು. ವೈವಿಧ್ಯಕ್ಕೂ ಸಾಕಷ್ಟು ಗಮನ ಹರಿಸಿದ್ದೀರಿ. ಅಭಿನಂದನೆಗಳು.

ವಿಶ್ವಾಸದಿಂದ

ಧಾರವಾಡ **ಜಿ.ಎಸ್. ಆಮೂರ**

ಪ್ರಿಯ ಪ್ರಹ್ಲಾದ್, ಯುಗಾದಿಯ ಶುಭಾಶಯಗಳು.

ಸಂಚಯ ೭೫ ಓದಿದೆ, ಒಂದು ಒಳ್ಳೆ ಕಲೆಕ್ಷನ್. ಕೆಲವು ಪದ್ಯಗಳಂತೂ ತುಂಬಾ ಚೆನ್ನಾಗಿವೆ. ಇವತ್ತು ಬರೀತಾ ಇರುವ ಒಂದು ಹೊಸ ಪೀಳಿಗೆಯ ಯಾದಿಯೇ ಇಲ್ಲಿ ಸಿಗುತ್ತದೆ. ಹಳಬರೂ ಇದ್ದಾರೆ. ಅವರು ಹೆಚ್ಚು ಗುರುತಿಸಲ್ಪಟ್ಟವರಲ್ಲ. ಆದರೆ ಇಲ್ಲಿ ಅವರ ಒಂದೊಂದೇ ಆದರೂ ಒಳ್ಳೆಯ ಕವಿತೆಗಳಿವೆ. ಪದ್ಯಗಳ ಆಯ್ಕೆಯಲ್ಲಿ ಒಂದು ಸಮಾನ ಅಭಿರುಚಿ ಕಾಣುತ್ತದೆ. ಅದು ಸಂಪಾದಕರ ಅಭಿರುಚಿಯೂ ಹೌದು. ಒಳ್ಳೆಯ ಪದ್ಯ ಅಂದರೆ ಏನು ಎಂಬ ಬಗ್ಗೆ ಒಂದು ಸಿದ್ಧಾಂತವನ್ನು ಒಟ್ಟು ಇಲ್ಲಿನ ಪದ್ಯಗಳ ಅವಲೋಕನದಿಂದ ತಿಳಿಯಬಹುದು. ಎಷ್ಟೆಲ್ಲ ಕವಿತೆ ಕಟ್ಟಾಣಿಕೆಯ ಬಗೆಗಳಿವೆ! ಆಧುನಿಕ ಕವಿತೆಗಳ ಸುಗ್ಗಿಯ ಮುನ್ಸೂಚನೆ ಸಂಚಯದಲ್ಲಿದೆ.

೭೫ನೇ ಇಶ್ಯೂ ೭೫ ಜನರ ಕವಿತೆಗಳನ್ನು ಸಂಕಲಿಸಬೇಕೆಂಬ ನಿಮ್ಮ ಮಿತಿ ಇಲ್ಲದಿದ್ದರೆ ಇಲ್ಲಿ ಇನ್ನೂ ಹಲವು ಜನರ ಕವಿತೆಗಳನ್ನು ಸೇರಿಸಬಹುದಿತ್ತು. ನನ್ನ ನೆನಪಿಗೆ ಬಂದ ಕೆಲವು ಸೇರಿಸಿಕೊಳ್ಳಬಹುದಾದ ಹೆಸರುಗಳನ್ನು ಈ ಕೆಳಗೆ ಕೊಟ್ಟಿದ್ದೇನೆ. ಗಮನಿಸಿ:

ಪೀರ್ ಭಾಷಾ, ಲಿಂಗದಹಳ್ಳಿ ಚೇತನ್‌ಕುಮಾರ್, ಭಗವತಿ.ಎಂ.ಆರ್, ವೆಂಕಟ್ರಮಣಗೌಡ,

ಬಷೀರ್.ಬಿ.ಎಂ., ಮಂಜುನಾಥ ಗೀತಾ, ಗೀತಾ ಡಿ.ಸಿ.ನಟರಾಜ.ಕೆ.ಪಿ, ನಟರಾಜ ಬೂದಾಳು, ಲೋಕೇಶ ಅಗಸನಕಟ್ಟೆ, ರಮೇಶ್ ನಾಗತಿಹಳ್ಳಿ, ಕಾರ್ಪೆಂಟರ್ ವಿ.ಆರ್, ಗೋವಿಂದರೆಡ್ಡಿ.ಸಿ.ಎಂ., ಮಹೇಶ್.ಎನ್.ಸಿ. ಶೇಷಾದ್ರಿ ಹೊಳವನಹಳ್ಳಿ, ಬಸವರಾಜ ಹೂಗಾರ, ಪವಿತ್ರ ಪ್ರಿಯಭಾಷಿಣಿ, ಜಹಾಂಗೀರ್, ಸಂತೋಷ ಚೊಕ್ಕಾಡಿ, ಪ್ರಮೋದ ತುರವೀಹಾಳ್, ದಸ್ತಗೀರ್‌ಸಾಬ್ ದಿನ್ನಿ, ಪ್ರಹ್ಲಾದರೆಡ್ಡಿ ಬೂದುಗುಪ್ಪ, ಶಿವಕುಮಾರ ನಾಗವಾರ, ಚಿತ್ರಶೇಖರ ಕಂಠಿ, ಶಿವಪ್ರಸಾದ್ ಗೊಲ್ಲಹಳ್ಳಿ, ವಡ್ಡಗೆರೆ ನಾಗರಾಜಯ್ಯ, ಮೂರ್ತಿ.ಎಂ.ಎಸ್. ಚಿದಾನಂದ ಸಾಲಿ, ಕೃಷ್ಣಮೂರ್ತಿ ಕೈದಾಳ, ಆರತಿ.ಎಚ್.ಎನ್, ಗುಂಡಣ್ಣ ಕಲಬುರ್ಗಿ, ಅಶೋಕ್ ನರೋಡೆ, ಬಾಲಗುರುಮೂರ್ತಿ, ಗೀತಾ ವಸಂತ, ತೇಜಶ್ರೀ.ಜ.ನಾ, ಕಮಲಾಕರ ಕಡವೆ, ಸುಧಾ ಶರ್ಮ ಚವತ್ತಿ, ಸರಸ್ವತಿ ಗಂಗೊಳ್ಳಿ, ರಾಜೇಂದ್ರ ಬುರಡೀಕಟ್ಟಿ, ರವಿ ಜುನ್ನಸಂದ್ರ, ಶ್ರೀಧರ ಪಿಸ್ಸೆ, ಆನಂದ ಪಿ.ಪಾಟೀಲ, ನಾಗರಾಜ ಎಲ್ಲಿ, ಭಾರತಿ ಕಿನ್ಹಾಳ್..

ಇವು ಗಮನಿಸಬಹುದಾದ ಕೆಲ ಹೆಸರುಗಳು. ಇವರಲ್ಲಿ ಸೇರಿಸಿಕೊಳ್ಳಲೇಬೇಕಾದ ಕೆಲ ಹೆಸರುಗಳೂ ಇದ್ದಾವೆ. ಅದನ್ನು ವಿವರಿಸಿ ಹೇಳಬೇಕಿಲ್ಲ. ಯಾವುದೇ ಸಂಕಲನ ಮಾಡುವಾಗ ಎಲ್ಲರನ್ನೂ ಒಳಗೊಳ್ಳುವ ಹಾಗೆ, ಎಲ್ಲರಿಗೂ ಒಪ್ಪಿಗೆಯಾಗುವ ಹಾಗೆ ಮಾಡಲು ಆಗುವುದಿಲ್ಲ, ಅದು ಸಾಧ್ಯವೂ ಇಲ್ಲ. ಇದರಾಚೆಗೆ ಇದೊಂದು ಒಳ್ಳೆಯ ಯತ್ನ. ಒಂದು ಸಣ್ಣ ಸಮೀಕ್ಷೆ ಇದರ ಜೊತೆಗೆ ಇದ್ದರೆ, ಚೆನ್ನಾಗಿರೋದು.

ಇಂತು ಪ್ರೀತಿಯಿಂದ

ಬೆಂಗಳೂರು | **ರಾಮಲಿಂಗಪ್ಪ.ಟಿ.ಬೇಗೂರು**

ಆತ್ಮೀಯ ಡಿ.ವಿ.ಪ್ರಹ್ಲಾದ್ ಅವರಿಗೆ

ಸಂಚಯದ ಕಾವ್ಯ ಸಂಭ್ರಮ ಇಂದು ಸಿಕ್ಕಿತು

ಈ ಮಧ್ಯೆ ಮೊನ್ನೆ ಬೆಂಗಳೂರಿನಲ್ಲಿದ್ದಾಗ ಅಂಕಿತದಲ್ಲಿ ರೋಸಿಯವರ 'ಮಣ್ಣ ಬಿಸುಪು' ಹಾಗೂ ದೇವರಗೇಣ್ಣೂರ ಅವರ 'ಗಾಳಿ ಹೆಜ್ಜೆ ಹಿಡಿದ ಸುಗಂಧ' ಪುಸ್ತಕಗಳನ್ನು ಕೊಂಡಿದ್ದೆ.

ಈ ಹಿಂದೆಯೇ ನಿಮ್ಮ ಸಂಪರ್ಕ ಯಾಕೆ ಬರಲಿಲ್ಲ ಎಂದು ಆಶ್ಚರ್ಯವಾಗುತ್ತಿದೆ. ನೀವು ತಂದಿರುವ ಪುಸ್ತಕಗಳು ಹಾಗೂ ತರುತ್ತಿರುವ ರೀತಿ, ಸಂಚಯ ನಿಮ್ಮ ಅಭಿರುಚಿಯನ್ನು ಸಾರುತ್ತಿದೆ. ನನ್ನ 'ಮಿ ಅಂಡ್ ಮಿಸೆಸ್ ಐಯರ್' ಕವಿತೆ ಬಳಸಿರುವುದಕ್ಕೂ ಸಹಾ ವಂದನೆಗಳು. ಆ ಪುಸ್ತಕದಲ್ಲಿ ನನ್ನ ಕವಿತೆ ಇರುವುದು ನನಗೆ ಸಂದ ಗೌರವ ಎಂದು ಭಾವಿಸಿದ್ದೇನೆ.


ತೇಜಸ್ವಿ ಕುರಿತ ಸಂಚಿಕೆಯಲ್ಲಿ ನೀವು ಬರೆದ ಸಂಪಾದಕೀಯ ನನಗೆ ಬೇಸರ ಉಂಟುಮಾಡಿತ್ತು. ತೇಜಸ್ವಿ ಬದುಕಿದ್ದಾಗ ಅವರಿಗೆ ರೋಸಿ ಹೋಗುವಷ್ಟು ಅವರ ಬಗ್ಗೆ ವಿಶೇಷಗಳನ್ನು ಪ್ರಸಾರ ಮಾಡಿದ್ದೇವೆ. ಅವರ ಒಂದು ಹುಟ್ಟು ಹಬ್ಬದ ದಿನವಂತೂ ನಮ್ಮ ಎಲ್ಲಾ ಸುದ್ದಿಯಲ್ಲೂ ತೇಜಸ್ವಿ ಕುರಿತ ವಿಶೇಷಗಳೇ. ಅವರ ಯೋಜನೆಗಳು, ಅವರು ನಡೆಸಿದ ಚರ್ಚೆಗಳು, ಅವರು ಭಾಗವಹಿಸಿದ ಕಾರ್ಯಕ್ರಮಗಳು ಎಲ್ಲವೂ ಸಾಕಷ್ಟು ಮುಖ್ಯ ಸ್ಥಾನವನ್ನು ನಮ್ಮಲ್ಲಿ ಪಡೆದುಕೊಂಡಿತ್ತು. ಆದರೆ ಈ ಯಾವುದೂ ನಿಮ್ಮ ಗಮನಕ್ಕೆ ಬಂದಿಲ್ಲ. ಇರಲಿ.

ಈಟೀವಿ, ಹೈದರಾಬಾದ್ | **ಜಿ.ಎನ್. ಮೋಹನ್**

ಒಂದು ಮನವಿ

ಶಬ್ದಗಳ ದೀಪಮಾಲೆ ಹಿಡಿದು ಬಂದವರು
ನಕ್ಷತ್ರಗಳಿಗೆಣ್ಣೆ ನೀಡಿದವರು
ಕತ್ತಲೆಯ ಗೂಡುಗಳ ಬಿಡಿಸಿ ಎಲ್ಲೆಲ್ಲಿಯೂ
ಬೆಳಕಿನ ಹಾಡುಗಳ ಹಾಡಿದವರು

– ಸು.ರಂ. ಎಕ್ಕುಂಡಿ



ಸುಬ್ಬಣ್ಣ ರಂಗನಾಥ ಎಕ್ಕುಂಡಿ ಅವರು ನಮ್ಮ ಕನ್ನಡ ಕಾವ್ಯದ ಒಬ್ಬ ವಿಶಿಷ್ಟ ಕವಿ. ತಮ್ಮ ಕಾಲದ ಸಾಹಿತ್ಯ ಚಳವಳಿಯ ಏಕಮುಖಿ ಕಾವ್ಯ ರಚನೆಯ ಅಬ್ಬರದಲ್ಲಿ ಕೊಚ್ಚಿಹೋಗದೆ ತಮ್ಮದೇ ಆದ ವಿಭಿನ್ನ ಕಾವ್ಯಮಾರ್ಗವನ್ನು ನೆಚ್ಚಿ ಬರೆದವರು ಎಕ್ಕುಂಡಿ. ಎಲೆಮರೆಯ ಹೂವಿನ ಹಾಗೆ ಪ್ರಸಿದ್ಧಿ ಹೆಸರುಗಳ ಬಗೆಗೆ ತಲೆಕೆಡಿಸಿಕೊಳ್ಳದೆ ಕಾವ್ಯ ರಚನೆಯಲ್ಲಿ–ಆಸ್ವಾದನೆಯಲ್ಲಿ ಮಗ್ನರಾದವರು. ಅವರ ಕಾವ್ಯ ಹನಿಮಳೆ ಬಿದ್ದು, ಮಣ್ಣವಾಸನೆ ಎದ್ದು, ತಾತ್ವಿಕ ನೆಲೆಗಳನ್ನು ಹೊಂದಿಸಿಕೊಂಡ ಕಾವ್ಯಾಭಿವ್ಯಕ್ತಿ. ಅವರ ಕಾವ್ಯದಲ್ಲಿ ಗೇಯತೆ, ವರ್ಣಕತೆ ಮತ್ತು ಕಥನ ಕೌಶಲ್ಯ ಅದ್ಭುತವಾಗಿ ಮಿಳಿತಗೊಂಡಿದೆ. ಕಥನ ಕವನಗಳ ಪಾರಂಪರಿಕ ವ್ಯಾಖ್ಯೆ ಬದಲಾಗಿ 'ಕಥನ'ವುಳ್ಳ ಕವನ ಎಂಬ ವಿಸ್ತಾರ ಅರ್ಥವ್ಯಾಪ್ತಿ ಎಕ್ಕುಂಡಿ ಕಾವ್ಯದಲ್ಲಿ ರೂಪುಗೊಂಡಿದೆ.

ಕವಿ ಎಕ್ಕುಂಡಿಯವರು ಹುಟ್ಟಿದ್ದು ರಾಣೆಬೆನ್ನೂರಿನಲ್ಲಿ (೨೦. ಜನವರಿ ೧೯೨೩) ಸಾಂಗಲಿಯ ವಿಲಿಂಗ್‌ಟನ್ ಕಾಲೇಜಿನಲ್ಲಿ ಅವರ ವಿದ್ಯಾಭ್ಯಾಸ. ಉತ್ತರ ಕನ್ನಡದ ಬಂಕಕೊಂಡ್ಲದ ಆನಂದಾಶ್ರಮ ಪ್ರೌಢಶಾಲೆಯಲ್ಲಿ ಮುಖ್ಯೋಪಾಧ್ಯಾಯರಾಗಿ ವೃತ್ತಿಜೀವನ ನಡೆಸಿದರು. ಸಂತಾನ, **'ಆನಂದತೀರ್ಥರು'** (ಖಂಡಕಾವ್ಯ) **'ಹಾವಾಡಿಗರ ಹುಡುಗ'**, **'ಮತ್ಸ್ಯಗಂಧಿ'**, **'ಬೆಳ್ಳಕ್ಕಿಗಳು'**, **'ಕಥನ ಕವನಗಳು'**, **'ಬಕುಳದ ಹೂವುಗಳು'** (ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆದ ಖ್ಯಾತಿ) ಎಕ್ಕುಂಡಿಯವರ ಕಾವ್ಯ ಕೃತಿಗಳು, **'ನೆರಳು'** (ಕಥಾ ಸಂಕಲನ) **'ಪು.ತಿ. ನರಸಿಂಹಾಚಾರ್ಯ'** (ವಿಮರ್ಶೆ) **'ಪ್ರತಿಬಿಂಬ'**, **'ಮೌನದ ಹೊತ್ತು'**, ಅನುವಾದಿತ ಕವಿತೆಗಳು. ೧೯೯೫ ಆಗಸ್ಟ್ ೨೦ರಂದು ಬೆಂಗಳೂರಿನಲ್ಲಿ ಎಕ್ಕುಂಡಿ ನಿಧನರಾದರು.

ಜನರ ನಡುವಿನ ನಿರಂಜನ ಕವಿಯಾದ ಎಕ್ಕುಂಡಿಯವರದ್ದು "ಯೋಧ ನಡೆಯುವ ದಾರಿ ಕವಿಯ ದಾರಿಯೂ ಕೂಡಾ" ಎಂಬ ನಂಬಿಕೆ. ಇವರ ಸಮಗ್ರ ಕವಿತೆಗಳನ್ನು ಕನ್ನಡದ ಓದುಗರಿಗೆ ತಲುಪಿಸುವ ಕಾರ್ಯವನ್ನು 'ಸಂಚಯ' ಕೈಗೆತ್ತಿಕೊಂಡಿದೆ. ತಾವು ಈ ಕೃತಿಯನ್ನು ಪ್ರಕಟಣಾಪೂರ್ವ ಖರೀದಿ ಮಾಡುವ ಮೂಲಕ ನಮ್ಮ ಈ ಕಾರ್ಯಕ್ಕೆ ನೆರವು ನೀಡಬೇಕೆಂದು ಕೋರುತ್ತೇವೆ. ತಮಗೆ, ತಮ್ಮ ಗೆಳೆಯರಿಗೆ ಕಾಲೇಜು, ಶಾಲೆಗಳ ಗ್ರಂಥಭಂಡಾರಕ್ಕೆ ಈ ಹಿರಿಯ ಕವಿಯ ಅತ್ಯುತ್ತಮ ಕವಿತೆಗಳು ಸೇರ್ಪಡೆಯಾಗಬೇಕಲ್ಲವೆ?

'ಎಕ್ಕುಂಡಿ ಸಮಗ್ರ ಕಾವ್ಯ' ಡೆಮಿ ೧/೮ ಆಕಾರದ ೬೦೦ ಪುಟಗಳ ಪುಸ್ತಕ
ಇದರ ಮುಖಬೆಲೆ ರೂ. ೩೫೦/–, ಪ್ರಕಟಣಾಪೂರ್ವ ಬೆಲೆ ರೂ. ೨೫೦/– ಮಾತ್ರ

'ಸಮಗ್ರ ಕಾವ್ಯ' ೨೦೦೮ರ ಜೂನ್ ೨೯ಕ್ಕೆ ಬಿಡುಗಡೆಯಾಗಲಿದೆ.

SANCHAYA (Quarterly)
MAG (2) PRB-DECL : 309/94-95



Edited, Printed & Published by
D.V. PRAHLAD
No. 100, 2nd Main, 6th Block
3rd Stage, 3rd Phase
Banashankari, Bangalore - 560 085
Ph. : 080-2679 1925